ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಕುಮಾರಗೌಡ ಪಾಟೀಲ್ (ಬಸವನಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ೧೯೮೮-೮೯ನೇ ಸಾಲಿನ ಆಯವ್ಯಯ ಪತ್ರದ ಮೇಲೆ ನಾನು ಮಾತನಾಡುತ್ತೇನೆ. ಬಹಳ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ನೀರಾವರಿಗೆ ಎಷ್ಟು ಆದ್ಯತೆ ಕೊಡಬೇಕಾಗಿತ್ತೋ ಅಷ್ಟು ಆದ್ಯತೆ ಕೊಟ್ಟಿಲ್ಲವೆಂದು ನಾನು ಇಲ್ಲಿ ನಾಲ್ಕನೇ ಸಲ ಹೇಳುತ್ತಿದ್ದೇನೆ. ಆದರೂ ಸಹ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಖರ್ಚು ಮಾಡದೆ ಇತರೇ ಯೋಜನೆಗಳಿಗೆ ಹೆಚ್ಚು ಹಣ ಖರ್ಚು ಮಾಡುವುದು ನಮ್ಮಲ್ಲಿ ರೂಢಿಯಲ್ಲಿ ಬಂದಿದೆ.

(ಶ್ರೀ ನಾರಾಯಣರಾವ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ಎರಡು ವರ್ಷಗಳು ಬರಗಾಲ ಬೀಳುತ್ತದೆ. ಬಿಜಾಪುರ ನಗರದಲ್ಲಿ ಕುಡಿಯುವ ನೀರಿಗೂ ತೊಂದರೆ ಬಂದಿದೆ. ಹೆಂಗಸರು ಮತ್ತು ಮಕ್ಕಳು ನಳದ ಮುಂದೆಯೇ ರಾತ್ರಿ ಕಾಲದಲ್ಲಿ ನೀರು ಬರುವವರೆಗೆ ಮಲಗುವುದನ್ನು ನಾವು ನೋಡಬಹುದಾಗಿದೆ. ಇಷ್ಟಾದರೂ ನಮ್ಮ ಸರ್ಕಾರದವರು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಕೊಯ್ನಾ ನದಿಯಿಂದ ಒಂದು ಟಿ.ಎಂ.ಸಿ. ನೀರನ್ನು ನಾವು ಪಡೆದುಕೊಳ್ಳಲು ಮಹಾರಾಷ್ಟ್ರ ಸರ್ಕಾರದವರಿಗೆ ನಮ್ಮ ಸರ್ಕಾರದವರು ೨ ಕೋಟಿ ರೂಪಾಯಿಗಳನ್ನು ಕೊಟ್ಟರು. ಅವರು ನೀರು ಬಿಟ್ಟರೂ ಸಹ ನಮ್ಮ ಜಿಲ್ಲೆಯವರೆಗೆ ನೀರು ಬರಲೇ ಇಲ್ಲ. ಚಿಕ್ಕ ಪಡಸಲಗಿ ಹತ್ತಿರ ಒಂದು ಬ್ಯಾರೇಜ್‌ನ್ನು ೫೮ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿದ ಮೇಲೆ ಅಲ್ಲಿ ೩ ಟಿ.ಎಂ.ಸಿ.ಯಷ್ಟು ನೀರು ನಿಲ್ಲುತ್ತಿದೆ, ಇದರಿಂದ ಸುಮಾರು ೨೫ ಸಾವಿರ ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿ ಆಗುತ್ತದೆ. ಇದರಿಂದ ಕುಡಿಯುವ ನೀರನ್ನು ಸಹ ಸರಬರಾಜು ಮಾಡಬಹುದಾಗಿದೆ. ಆದ್ದರಿಂದ ಇಂತಹ ಬ್ಯಾರೇಜ್‌ಗಳನ್ನು ಮೇಲಿಂದ ಮೇಲೆ ಕಟ್ಟಿಸುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ೧೯೬೪ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಪ್ಪರ್ ಕೃಷ್ಣಾ ಯೋಜನೆಗೆ ಅಡಿಗಲ್ಲನ್ನು ಹಾಕಿದರು. ಇಲ್ಲಿಯವರೆಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದರೂ ಸಹ ಆ ಕೆಲಸ ಇನ್ನೂ ಮುಗಿದಿಲ್ಲ. ೧೯೫೭ನೇ ಇಸವಿಯಲ್ಲಿ ಈ ಅಪ್ಪರ್ ಕೃಷ್ಣಾ ಯೋಜನೆಯನ್ನು ಕೈಕೊಳ್ಳಬೇಕೆಂದು ನಾವು ಈ ಸಭೆಯಲ್ಲಿ ಒತ್ತಾಯ ಮಾಡಿ ಹೇಳಿದ್ದೆವು. ಅದರ ಪ್ರಕಾರ ಕೆಲಸ ಪ್ರಾರಂಭವಾದರೂ ಸಹ ಇನ್ನೂ ಮುಗಿದಿಲ್ಲ. ಈ ಯೋಜನೆಯ ಸಲುವಾಗಿ ನಾವು ಎಕರೆಗಳಷ್ಟು ಭೂಮಿಯನ್ನು ಕಳೆದುಕೊಳ್ಳುತ್ತೇವೆ. ಆದ್ದರಿಂದ ಇದಕ್ಕೆ ಬದಲು ನಮ್ಮಲ್ಲಿ ಹರಿಯುವಂತಹ ಆ ನದಿಗಳಿಗೂ ಸಹ ನಾಲ್ಕು ನಾಲ್ಕು ಬ್ಯಾರೇಜ್‌ಗಳನ್ನು ಒಂದೊಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿದರೆ ಲಕ್ಷಾಂತರ ಎಕರೆಗಳಷ್ಟು ಭೂಮಿಗೆ ನೀರನ್ನು ಕೊಡಬಹುದು. ಕೇವಲ ೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು, ಹೆಚ್ಚಿನ ರೈತರಿಗೆ ಸಹಾಯ ಮಾಡಬಹುದು. ನಮ್ಮ ಭಾಗಕ್ಕೆ ಒಂದು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಿ ಎಂದು ಕೇಳಿಕೊಂಡಾಗ ಅದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡು ಮಾಡಿದರು. ಆದರೆ ಕೆಲಸ ಮಾತ್ರ ಏನೂ ಆಗಿಲ್ಲ. ಈಗ ಅಲ್ಲಿ ೮-೧೦ ಜೀಪ್‌ಗಳು ಇವೆ, ಅಧಿಕಾರಿಗಳು ಇದ್ದಾರೆ, ಕೆಲಸ ಮಾತ್ರ ಆಗುತ್ತಿಲ್ಲ. ಇನ್ನು ಮುಂದೆಯಾದರೂ ಈ ಲಿಫ್ಟ್ ಇರಿಗೇಷನ್ ಕೆಲಸಗಳು ತೀವ್ರಗತಿಯಿಂದ ಆಗುವಂತಹ ವ್ಯವಸ್ಥೆ ಮಾಡಬೇಕು. ಲಿಫ್ಟ್ ಇರಿಗೇಷನ್ ಕೆಲಸಗಳು ಮತ್ತು ಸಣ್ಣ ನೀರಾವರಿ ಯೋಜನೆಗಳ ಕೆಲಸವನ್ನು ಎಲ್ಲೆಲ್ಲಿ ತೆಗೆದುಕೊಳ್ಳಬಹುದೆಂಬುದರ ಬಗ್ಗೆ ಸರ್ವೆ ಮಾಡಿಸಿ ಸಾಧ್ಯವಾದ ಕಡೆಗಳಲ್ಲಿ ತೆಗೆದುಕೊಂಡು ನೂರಾರು ಎಕರೆಗಳಿಗೆ ನೀರಾವರಿ ಆಗುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿರುವಂತಹ ಮುಮ್ಮದ್‌ಸೂರ ಗ್ರಾಮದಲ್ಲಿರುವ ಪುರಾತನ ಕೆರೆಯ ಬಗ್ಗೆ ಒಂದು ಪ್ರಶ್ನೆ ಕೇಳಿದ್ದೇನೆ. ಆ ಕೆರೆಯಲ್ಲಿ ಸೇರಿಕೊಂಡಿರುವ ಹೂಳನ್ನು ತೆಗೆಸಿದರೆ ಸುಮಾರು ೩ ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗುತ್ತದೆ. ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿರುವ ಟ್ರ್ಯಾಕ್ಟರ್‌ಗಳ

ಮೂಲಕ ಹೂಳನ್ನು ತೆಗೆಸಿದರೆ ೩ ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಸಾಲುವಷ್ಟು ನೀರು ಅಲ್ಲಿ ನಿಲ್ಲುತ್ತದೆ. ಕೃಷ್ಣಾ ನದಿಯಿಂದ ಈ ಕೆರೆಗೆ ನೀರನ್ನು ಬಿಡುವ ವ್ಯವಸ್ಥೆ ಮಾಡಿದರೆ ವರ್ಷದ ೧೨ ತಿಂಗಳೂ ಅಲ್ಲಿ ನೀರು ಇರುತ್ತದೆ. ಈ ನೀರಿನಿಂದ ಭತ್ತ ಬೆಳೆಯಬಹುದು, ಚಿಕ್ಕ ನೀರಾವರಿಗೆ ಆದ್ಯತೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇದೇ ನೆರೆಯ ಮಹಾರಾಷ್ಟ್ರದಲ್ಲಿ ಬಹಳ ಚೆನ್ನಾಗಿ ಮಾಡಿದ್ದಾರೆ. ನಾವು ಮುಂಬೈಯಿಗೆ ಹೋಗುವಾಗ ದಾರಿಯಲ್ಲಿ ಉಜನಿ ಅಣೆಕಟ್ಟು ತುಂಬಿ ಹರಿಯುತ್ತಿರುವುದನ್ನು ನೋಡುತ್ತೇವೆ. ಆದೇ ನಮ್ಮ ಕೃಷ್ಣಾ ನದಿಯಲ್ಲಿ ಒಂದು ಗೂಬೆ ಕುಡಿಯುವಷ್ಟು ನೀರು ಇರುವುದಿಲ್ಲ ಅದಕ್ಕೆ ನೀವು ನೀರಾವರಿ ಬಗ್ಗೆ ಏಕೆ ಆದ್ಯತೆ ಕೊಡುವುದಿಲ್ಲ ಎಂದು ಕೇಳುತ್ತೇನೆ. ಅವರು ಈ ರಸ್ತೆಗಳ ಬಗ್ಗೆ ಹೆಚ್ಚಿನ ಮಹತ್ವ ಕೊಟ್ಟಿಲ್ಲ ನಮ್ಮಲ್ಲಿ ಸರ್ಕ್ಯೂಟ್ ಹೌಸ್ ಬಗ್ಗೆ ಹೆಚ್ಚಿನ ಮಹತ್ವ ಕೊಡುತ್ತಿದ್ದೇವೆ. ಆದರೆ ಮಹಾರಾಷ್ಟ್ರದವರು ಬ್ರಿಡ್ಜ್‌ಗಳನ್ನು ಸಹಿತ ಕಟ್ಟಿಲ್ಲ. ಇವತ್ತಿನ ದಿವಸ ಸೊಲಾಪುರ ಅಹಮದ್‌ನಗರ ನಡುವೆಯಲ್ಲಿ ಯಾವ ಹಳ್ಳಕ್ಕೂ ಬ್ರಿಡ್ಜ್ ಇಲ್ಲ ಬರೇ ಕಲ್‌ವರ್ಟ್ ಮಾಡಿದ್ದಾರೆ. ಅಲ್ಲಿಂದ ಮುಂದಕ್ಕೆ ಹೋಗಬೇಕಾದರೆ ೨-೩ ತಾಸು, ಆಗುತ್ತದೆ, ಇಲ್ಲಿಂದ ಲಕ್ಷಾಂತರ ಜನರು ದುಡಿಯಲಿಕ್ಕೆ ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ದುಡಿಯಲಿಕೆ ಹೋದ ೩೦-೪೦ ಜನ ಸಾಯುವಂತ ಒಂದು ಪ್ರಸಂಗ ಬಂದಿತು, ಇದನ್ನು ನಾವು ಹೇಳಬೇಕಾದರೆ ಇದು ವಿಷಾದ ಪಡಬೇಕಾದಂತಹ ಸಂಗತಿಯಾಗಿದೆ. ಇದರ ಬಗ್ಗೆ ನಾವು ಯೋಚನೆ ಮಾಡುವುದಿಲ್ಲ. ನಮ್ಮಲ್ಲಿ ಇದ್ದಂತ ಜನರ ಜನ ಶಕ್ತಿಯನ್ನು ನಾವು ಏಕೆ ಸರಿಯಾಗಿ ಬಳಕೆ ಮಾಡಿಕೊಳ್ಳಬಾರದು ?. ಇದೇ ನೆರೆ ಮಹಾರಾಷ್ಟ್ರದಲ್ಲಿ ೧೨೦ ಸಕ್ಕರೆ ಕಾರ್ಖಾನೆಗಳು ಇದ್ದಾವೆ. ಅವು ನೀರಾವರಿಯಲ್ಲಿ ಲಿಫ್ಟ್ ಇರಿಗೇಷನ್ ಮಾಡಿಕೊಂಡಿವೆ ಆದರೆ ನಮ್ಮಲ್ಲಿ ದುರ್ದೈವದಿಂದ ಕೆಲವೊಂದು ಸಕ್ಕರೆ ಕಾರ್ಖಾನೆಗಳು ಇದ್ದರೂ ಕೂಡ ಅವುಗಳಿಗೆ ಕೆಲವೊಂದು ನೀರಾವರಿ ಸರಿಯಾಗಿ ಇಲ್ಲದೆ ಲಾಸ್ ಆಗುತ್ತಿದೆ. ಕೇಂದ್ರ ಸರ್ಕಾರವು ೩ ಸಕ್ಕರೆ ಕಾರ್ಖಾನೆಗಳನ್ನು ಮಾಡಲು ಇನ್ನು ಲೈಸನ್ಸ್ ಕೊಟ್ಟಿಲ್ಲ. ಇದೂ ಕೂಡ ದುರ್ದೈವದ ಸಂಗತಿ. ಆದರೆ ನಮ್ಮ ಕರ್ನಾಟಕದಲ್ಲಿ ಇನ್ನೂ ಹೆಚ್ಚಿನ ಕೈಗಾರಿಕೆ ಬೆಳೆಯಬೇಕು. ಇದ್ದಂತ ಕೈಗಾರಿಕೆಗಳು ಇವತ್ತಿನ ದಿವಸ ಲಾಸ್‌ನಲ್ಲಿ ನಡೆಯುತ್ತಿದೆ. ಇವುಗಳು ಪಬ್ಲಿಕ್ ಅಂಡರ್‌ಟೇಕಿಂಗ್‌ನಲ್ಲಿ ಇದ್ದಾವೆ. ಇದು ಏಕೆ ಹೀಗಾಗುತ್ತಿದೆ ಅನ್ನುವುದನ್ನು ಪ್ರತಿಯೊಬ್ಬರೂ ಆತ್ಮ ಶೋಧನೆ ಮಾಡಿಕೊಳ್ಳಬೇಕು. ಈಗ ಅದೇ ಮಹಾರಾಷ್ಟ್ರದಲ್ಲಿ ಪ್ರತಿಯೊಂದು ಕೈಗಾರಿಕೆಗಳು ಉತ್ತಮ ಸ್ಥಿತಿಯಲ್ಲಿದೆ. ಔಷಧಿ ಅಂಗಡಿಗಳನ್ನು ಸಹಿತ ಕೋ- ಅಪರೇಟಿವ್
ಬೇಸಿನ್ ಮೇಲೆ ಮಾಡಿದ್ದಾರೆ. ಸ್ಟೀಲ್ ಅಂಗಡಿಗಳನ್ನು ಸಹಿತ ಕೋ ಆಪರೇಟಿವ್ ಬೇಸಿನ್ ಮೇಲೆ ಮಾಡಿದ್ದಾರೆ, ನಾವು ಇನ್ನು ಮುಂದೆ ಹೊರಗಿನ ದೇಶಕ್ಕೆ ಹೋಗಿ ಬರುವುದು ಬೇಕಾಗಿಲ್ಲ. ಜಪಾನ್ ಜರ್ಮನಿ ಆಸ್ಟ್ರೇಲಿಯಕ್ಕೆ ಹೋಗಬೇಕಾದ ಪ್ರಮೇಯವಿಲ್ಲ. ನಮ್ಮ ನೆರೆ ಮಹಾರಾಷ್ಟ್ರದವರು ಯಾವ ರೀತಿ ಒಕ್ಕಲುತನವಾಗಲಿ, ನೀರಾವರಿಯಾಗಲೀ ಉತ್ತಮವಾದ ಸ್ಥಿತಿಯಲ್ಲಿ ನಡೆಸುತ್ತಿದ್ದಾರೆ ಅದನ್ನು ನೋಡಿದರೆ ಸಾಕು ಇವತ್ತಿನ ದಿವಸ ಅಲ್ಲಿ ೪ ಎಕರೆ ಇದ್ದಂತಹ ಒಬ್ಬ ಮನುಷ್ಯ ಸೈಕಲ್ ಮೋಟಾರ್ ಮೇಲೆ ಓಡಾಡುತ್ತಿದ್ದಾನೆ. ಇವತ್ತು ನಮ್ಮಲ್ಲಿ ೪೦ ಎಕರೆ ಇದ್ದಂತ ಮನುಷ್ಯ ಕೂಲಿ ಮಾಡಿಕೊಂಡು ಹೋಗುತಿ ದ್ದಾನೆ. ಇದು ನಾವು ವಿಚಾರ ಮಾಡುವಂತಹ ಸಂಗತಿ? ಈ ನಮ್ಮ ಹಣ ಮಿನಿ ವಿಧಾನಸೌಧವನ್ನು ಕಟ್ಟಲಿಕ್ಕೆ ಮತ್ತು ರಂಗ ಮಂದಿರ ನಾಟ್ಯ ಮಂದಿರಕ್ಕೆ ವಿನಿಯೋಗ ಮಾಡುತ್ತೇವೆ. ಇದು ದುರ್ದೈವದ ಸಂಗತಿ. ಮೊದಲನೆಯದಾಗಿ ನಮ್ಮ ಆಹಾರದ ಸಮಸ್ಯೆ ನಮ್ಮ ದೇಶದ ಪರಿಸ್ಥಿತಿಯ ಸುಧಾರಣೆಯು ಇವತ್ತಿನ ದಿವಸ ಆಗಬೇಕು. ಆದರೆ ಇದಕ್ಕೆ ಮೊದಲು ಆದ್ಯತೆಯನ್ನು ಮಾಡಿದರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಭದ್ರವಾಗುತ್ತದೆ ನಂತರ ಬೇಕಾದರೆ ನಾಟ್ಯ ಮಂದಿರ, ರಂಗ ಮಂದಿರ ಮಾಡಿಯೆಂದು ಕೇಳಿಕೊಳ್ಳುತ್ತೇನೆ.

ಆಮೇಲೆ ಈ ನಮ್ಮ ಭೂ ಸವಕಳಿ ಸಮಗ್ರವಾಗಿ ನಮ್ಮ ರಾಜ್ಯದಲ್ಲಿ ಹರಿದುಹೋಗುತ್ತದೆ. ಅಲ್ಲಲ್ಲಿ ಬಂಡಿಗ್‌ಗಳನ್ನು ಮಾಡಬೇಕು. ೧೯೪೦ರಲ್ಲಿ ಬ್ರಿಟಿಷ್ ಕಾಲದಲ್ಲಿ ಪಾಸಮನ್ ಎಂಬ ಬ್ರಿಟಿಷ್ ಅಧಿಕಾರಿಯನ್ನು ನೇಮಿಸಿ ಒಂದು ಇಂಚು ಮಣ್ಣು ಫರ್ಟಿಲಿಟಿ ಹೋದಲ್ಲಿ ಕ್ರಮ ಕೈಗೊಂಡಿದ್ದರೂ ಇವತ್ತು ಉತ್ತಮವಾದಂತ ಮಣ್ಣಿನ ಫರ್ಟಿಲಿಟಿ ಹೋಗುತ್ತದೆ ಎಂದರೆ ಅಂತಹ ಮಣ್ಣು ತಯಾರಾಗಬೇಕಾದರೆ ೧೦೦ ವರ್ಷ ಹಿಡಿಯುತ್ತದೆ. ಇದರಿಂದ ನಮ್ಮ ಜಿಲ್ಲೆಯಲ್ಲಿ ಮಣ್ಣು ಹರಿದು ಹೋಗಿ ಬರಡಾಗತಕ್ಕ ಒಂದು ಪರಿಸ್ಥಿತಿ ಉಂಟಾಗುತ್ತದೆ. ಅದಕ್ಕೆ ಸರ್ಕಾರದವರು ಅಲ್ಲಲ್ಲಿ ಬಾಂಡ್ ಮಾಡಬೇಕು ಎಂಬುದನ್ನು ಯೋಚಿಸಬೇಕು. ಅಂತಹ ಜಮೀನುದಾರ ಮೇಲೆ ನೀವು ಈ ರೀತಿ ಮಾಡಲು ಕ್ರಮ ಕೈಗೊಳ್ಳಬೇಕು. ಇವತ್ತಿನ ದಿವಸ ಅದು ಬಹಳ ಮಹತ್ವವಾದಂತ ಸಂಗತಿ ಅದನ್ನು

ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಮಾಡಬೇಕು. ಡ್ರೈಲ್ಯಾಂಡ್ ಡೇವಲಪ್‌ಮೆಂಟ್‌ಗೆ ಹೆಚ್ಚಿನ ಆದ್ಯತೆಯನ್ನು ಸರ್ಕಾರವು ಕೊಡುತ್ತಿದೆ. ಅದರಂತೆ ಬಂಡಿಂಗ್‌ಗೆ ಹೆಚ್ಚಿನ ಮಹತ್ವ ಕೊಡಬೇಕು. ನಮ್ಮಲ್ಲಿ ಬರಗಾಲ ಬಿದ್ದಾಗ ಇವುಗಳನ್ನು ಮಾಡಲಾರದೆ ಬರೇ ರಸ್ತೆಗಳಿಗೆ ಹೆಚ್ಚು ಮಹತ್ವ ಕೊಡುತ್ತಿದ್ದೇವೆ, ಆದರೆ ಇವತ್ತಿನ ದಿವಸ ಮಹಾರಾಷ್ಟ್ರದಲ್ಲಿ ಸಾಮೂಹಿಕ ಬಾವಿಗಳನ್ನು ಹಾಗೂ ಇಂತಹ ಬಂಡಿಂಗ್‌ಗಳನ್ನು ಮಾಡಿದ್ದಾರೆ. ಇದು ಬಹಳ ಮಹತ್ವವಾಗಿದೆ. ನಾವು ಇದನ್ನು ಬಿಟ್ಟಿದ್ದೇವೆ. ಇದರಿಂದ ನಮ್ಮ ರಾಜ್ಯ ಬರಡಾಗಿ ಹೋಗುತ್ತದೆ. ಅರಣ್ಯ ಬೆಳೆಸುವಂತಹದು ಬಹಳ ಮುಖ್ಯ. ಇವತ್ತಿನ ದಿವಸ ಅರಣ್ಯ ಸಂರಕ್ಷಣೆ ಮಾಡುವಂತಹ ಅಧಿಕಾರಿಗಳು ಹೆಚ್ಚಾದ ಮೇಲೆ ಅರಣ್ಯ ಹೆಚ್ಚು ನಾಶವಾಗಿದೆಯೆಂದು ನನ್ನ ಅಭಿಪ್ರಾಯ. ಮೊದಲು ತನ್ನಷ್ಟಕ್ಕೆ ತಾವೇ ಸಂರಕ್ಷಣೆ ಆಗುತ್ತಿತ್ತು. ಯಾವಾಗ ಈ ಡಿಪಾರ್ಟ್‌ಮೆಂಟ್ ಆಯಿತು ಆಗಿನಿಂದ ಅರಣ್ಯ ನಾಶ ಹೆಚ್ಚಾಗುತ್ತದೆ. ಇದರ ಬಗ್ಗೆ ಹೆಚ್ಚು ಆದ್ಯತೆ ಕೊಡಬೇಕು. ಇವತ್ತಿನ ರಾಜಸ್ಥಾನ ತರುವಾಯ ಎರಡನೇ ಒಣ ಪ್ರದೇಶ ಅಂದರೆ ಕರ್ನಾಟಕ ಆಗಿರುತ್ತದೆ. ಆದ್ದರಿಂದ ಇದನ್ನು ಈಗ ಹಾಗೆ ಬಿಟ್ಟರೆ ಈಜಿಪ್ಟಿನ ತರಹ ಕೆಲವೊಂದು ದಿವಸದಲ್ಲಿ ಇದೂ ಕೂಡ ಬರಡು ಭೂಮಿಯಾಗಿ ಹೋಗುತ್ತದೆ. ಏಕೆಂದರೆ ಈಜಿಪ್ಟಿನಲ್ಲಿ ಅಲ್ಲಲ್ಲಿ ಕಲ್ಲಿನಲ್ಲಿ ಕೆತ್ತಿದಗಿಡ, ಮರ, ಪ್ರಾಣಿಗಳು, ಸರೋವರಗಳು ಮೊದಲು ಇದ್ದವು ಎನ್ನುವಂತೆ ಅರಣ್ಯನಾಶವಾದ ಹಾಗೆ ಮರಭೂಮಿ ಆಗಿ ಸಂವರ್ತನೆ ಆಗಿದೆ ಅಂತೆ ಒಬ್ಬರು ಶಾಂಸನ್ ಎಂಬ ತಜ್ಞರು ಹೇಳಿದ್ದಾರೆ, ಬಳ್ಳಾರಿ ಜಿಲ್ಲೆಯಲ್ಲಿ ರಾಜಸ್ಥಾನದ ಕತೆ ಆಗುವಂಥ ಪರಿಸ್ಥಿತಿ ಇದೆ ಎಂದು. ಇದನ್ನು ತಡೆಯಬೇಕಾದರೆ ಮಳೆಯನ್ನು ಹೆಚ್ಚು ಆಕರ್ಷಣೆ ಮಾಡುವಂಥ ಗಿಡಗಳನ್ನು ನೆಡಬೇಕು. ಮರಗಿಡಗಳು ಕೆಟ್ಟ ಹವೆಯನ್ನು ಸ್ವೀಕಾರಮಾಡಿ ಶುದ್ಧ ಹವೆಯನ್ನು ನಮಗೆ ಕೊಡುತ್ತವೆ ಆ ಕಡೆ ಗಿಡಗಳನ್ನು ಹಚ್ಚಿರುವುದನ್ನು ನೋಡಿದರೆ ಯಾವುದಕ್ಕೂ ಬರಲಾರದಂಥ ಗಿಡಗಳನ್ನು ಹಚ್ಚಿದ್ದಾರೆ, ನಾನು ಮೊನ್ನೆ ತಿರುಪತಿಗೆ ಹೋಗಿದ್ದಾಗ ನೋಡಿದೆ. ಅಲ್ಲಿ ದಾರಿಯಲ್ಲಿ ಬರೀ ಹುಣಸೆಗಿಡಗಳನ್ನು ಹಚ್ಚಿದ್ದಾರೆ. ಅಂಥಾದ್ದು ಒಂದು ಕೂಡ ನಮ್ಮ ಕಡೆ ಇಲ್ಲ. ಮಂತ್ರಿಗಳು ಬೇಕಾದರೆ ಅಲ್ಲಿ ಹೋಗಿ ನೋಡಲಿ, ಗೊತ್ತಾಗುತ್ತದೆ. ಹುಣಿಸೆ ಗಿಡಗಳನ್ನು ಹಾಕಿದರೆ ಮುಂದೆ ಉತ್ಪನ್ನ ಕೊಡುತ್ತದೆ. ಹೆಚ್ಚಾಗಿ ಬೇವಿನ ಗಿಡಗಳನ್ನು ಹುಣಿಸೆ ಗಿಡಗಳನ್ನು ಹಾಕಬೇಕು. ಹುಣಿಸೆ ಗಿಡ ಹಾಕಿದರೆ ಹುಣಿಸೆ ಹಣ್ಣು ಫಲ ಸಿಗುತ್ತದೆ, ಬೇವಿನ ಗಿಡ ಹಾಕುವುದರಿಂದ, ಅದರ ಎಣ್ಣೆಯಿಂದ ಸೋಪು ಕ್ರಿಮಿನಾಶಕಗಳನ್ನು ತಯಾರು ಮಾಡುತ್ತಾರೆ. ಅಂತಹ ಗಿಡಗಳನ್ನು ಹಚ್ಚಿದರೆ ಹೆಚ್ಚು ಅನುಕೂಲವಾಗುತ್ತದೆ. ಅದು ಬಿಟ್ಟು ಬರೀ ನೀಲಗಿರಿ ಗಿಡಗಳನ್ನು ನೆಡುವುದರಿಂದ ಅದು ನೆರಳು ಕೂಡ ಕೊಡುವುದಿಲ್ಲ. ನಮ್ಮ ಪೂರ್ವಜರು ಕೆಲವೊಂದು ಗಿಡಗಳನ್ನು ಪೂಜೆ ಮಾಡುತ್ತಿದ್ದರು. ಕೆಲವು ಗಿಡಮರಗಳು ಹಣ್ಣು, ಇತರ ಉಪಯುಕ್ತ ವಸ್ತುಗಳನ್ನು, ಕಟ್ಟಿಗೆ, ಕೊನೆಗೆ ನೆರಳನ್ನೂ ಕೊಡುತ್ತಿದ್ದವು ಅದಕ್ಕಾಗಿ ನಮ್ಮ ಪೂರ್ವಜರು ಪೂಜೆ ಮಾಡುತ್ತಿದ್ದರು. ಆದ್ದರಿಂದ ಆ ಗಿಡಗಳಿಗೆ ಅಷ್ಟು ಮಹತ್ವ ಕೊಡುತ್ತಿದ್ದರು. ಇವತ್ತಿನದಿವಸ ಅದನ್ನೆಲ್ಲಾ ನಿರ್ಲಕ್ಷ್ಯ ಮಾಡಿದ್ದರಿಂದ ಬರಗಾಲ ಬರುತ್ತಿದೆ. ಮಣ್ಣು ಸವಕಲಾಗುತ್ತಾ ಹೋಗುತ್ತಿದೆ. ಹಿಂದೆ ಅಮೇರಿಕಾ ಪ್ರೆಸಿಡೆಂಟೆಡ್ ರೂಜವೆಲ್ಟ್ ಪ್ರೆಸಿಡೆಂಟ್ ಚುನಾವಣೆಗೆ ಕ್ಯಾನ್‌ವಾಸ್‌ಗೆ ಹೋದಾಗ ದಾರಿಯಲ್ಲಿ ಬರಡು ಜಮೀನುಗಳನ್ನು ನೋಡಿದ್ದರಂತೆ. ಅವರು ಮುಂದೆ ಪ್ರೆಸಿಡೆಂಟ್ ಆದಮೇಲೆ ಗಿಡಗಳನ್ನು ನೆಡಲಿಕ್ಕೆ ಬೃಹತ್ ಯೋಜನೆಗಳನ್ನು ಮಾಡಿದರು ಆಗ ಪ್ರೆಸಿಡೆಂಟ್‌ಗೆ ತಲೆ ಇದೆಯೋ ಎಂದು ಕೆಲವರು ಹೇಳಿದರು. ಮುಂದೆ 10 ವರ್ಷಗಳಾದ ಮೇಲೆ ಅದು ಫಲವತ್ತಾದ ಪ್ರದೇಶವಾಯಿತು. ಹೆಚ್ಚು ಮಳೆಯಾಯಿತು, ಪಕ್ಷಿಗಳು ಬಂದು ವಾಸಮಾಡುವಂತಾಯಿತು, ಆದುದರಿಂದ ಇಲ್ಲಿ ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕು. ಆಮೇಲೆ ರಸ್ತೆ ಬದಿಯಲ್ಲಿ ತಂತಿಬೇಲಿ ಹಾಕುತ್ತಾರೆ, ಕೋಆಪರೇಟೀವ್ ಸೊಸೈಟಿಗಳಿಗೆ ಸಂಘಸಂಸ್ಥೆಗಳಿಗೆ, ಪ್ರಾಥಮಿಕ ಶಾಲೆಗಳಿಗೆ ಆ ಕೆಲಸವನ್ನು ನಿರ್ವಹಿಸಲಿಕ್ಕೆ ಕೊಟ್ಟರೆ ಹೆಚ್ಚಿನ ಅನುಕೂಲತೆಯಾಗುತ್ತದೆ.

ಇನ್ನು ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ ದೊಡ್ಡ ಕೈಗಾರಿಕೆಗಳಿಗಿಂತ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟರೆ ಹೆಚ್ಚಿನ ಅನುಕೂಲತೆಯಾಗುತ್ತದೆ. ಹೆಚ್ಚಾಗಿ ಹ್ಯಾಂಡಲೂಂ ಡೆವಲಪ್‌ಮೆಂಟಿಗೆ ಅವಕಾಶ ಮಾಡಬೇಕಾಗಿದೆ. ಇತ್ತೀಚೆಗೆ ನಾನು ಆಂಧ್ರಕ್ಕೆ ಹೋದಾಗ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇಂತಹ ಕೈಗಾರಿಕೆಗಳಿಂದ ಉತ್ಪನ್ನವಾದಂಥ ವಸ್ತುಗಳನ್ನು ಲುಂಗಿ, ಬೆಡ್‌ಶೀಟ್, ಟವಲ್‌ಗಳನ್ನು ಸಿಂಗಪೂರ್ ಮುಂತಾದ ಹೊರದೇಶಗಳಿಗೆ ಕಳುಹಿಸುತ್ತಿದ್ದೇವೆ ಎಂದು ಹೇಳಿದರು. ಅವರು ಹಳೇ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಆ ದಿಶೆಯಲ್ಲೂ ಕೂಡ ನಾವು ಸುಧಾರಣೆ ಮಾಡಬೇಕು ಎಂದು

ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಆಮೇಲೆ ಆಗ್ರೊ ಬೇಸ್ಡ್ ಇಂಡಸ್ಟ್ರೀಸ್ ಒಕ್ಕಲುತನ ಆಧಾರಿತ ಕೈಗಾರಿಕೆಗಳು, ನಮ್ಮ ಜಿಲ್ಲೆ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದ್ರಾಕ್ಷಿ ಮತ್ತು ನಿಂಬೆ ಹಣ್ಣನ್ನು ಬೆಳೆಯುತ್ತಾ ಇದ್ದೇವೆ. ಮಳೆಗಾಲದಲ್ಲಿ ನಿಂಬೆ ಹಣ್ಣುಗಳನ್ನು ೧೦ ರೂಪಾಯಿಗೆ ಸಾವಿರ ಮಾಡುವಂಥ ಪರಿಸ್ಥಿತಿ ಇದೆ, ಇದರಿಂದ ಲುಕ್ಸಾನು ಆಗುತ್ತದೆ. ಆದುದರಿಂದ ಈ ನಿಂಬೆಹಣ್ಣುಗಳನ್ನು ಸಂಗ್ರಹಿಸಿ ರಸ ತಯಾರು ಮಾಡುವಂಥ ಆಗ್ರೋಬೇಸ್ಡ್ ಇಂಡಸ್ಟ್ರೀಸನ್ನು ಮಾಡಿದರೆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ದ್ರಾಕ್ಷಿ ಬಿಜಾಪುರದಲ್ಲಿ ಅತಿ ಮುಖ್ಯವಾದಂಥ ಬೆಳೆ, ಬಹಳ ಸಿಹಿಯಾಗಿಯೂ ಇರುತ್ತದೆ. ಇವತ್ತಿನದಿವಸ ಕೇಂದ್ರ ಸರ್ಕಾರ ಸುಮಾರು ೫೦೦ ಕೋಟಿ ರೂಪಾಯಿಗಳ ದ್ರಾಕ್ಷಿಯನ್ನು ತರಿಸುತ್ತಾ ಇದೆ. ನಮ್ಮಲ್ಲಿ ದ್ರಾಕ್ಷಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಇದರ ಕಡೆ ಗಮನ ಕೊಡಬೇಕು. ಆಮೇಲೆ ಎಣ್ಣೆ ಕಾಳಿನ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಸೂರ್ಯಕ್ರಾಂತಿ ಹೆಚ್ಚಿನ ಪ್ರಮಾಣದಲ್ಲಿದೆ. ಕೋಟಿಗಟ್ಟಲೆ ಲುಕ್ಸಾನು ಆಗುವಂಥ ಪರಿಸ್ಥಿತಿ ಇತ್ತು. ನಮ್ಮ ರೈತರಿಗೆ ಒಳ್ಳೆಯ ಬೀಜ ಕೊಡುವುದಕ್ಕೆ ಆಗಲಿಲ್ಲ.

ಮಹಾರಾಷ್ಟ್ರ ಸೀಡ್ಸ್ ಕಾರ್ಪೊರೇಷನ್‌ನವರು ಎಂಹೆಚ್‌ಎಸ್–೧ ಬೀಜವನ್ನು ೧೫೦ ರೂಪಾಯಿಗಳಿಗೆ ಮಾರಾಟ ಮಾಡಿದರೆ, ಅದನ್ನು ಕರ್ನಾಟಕಕ್ಕೆ ತಂದು ೫೦೦–೬೦೦ ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಕಂಪನಿಯವರೂ ಕೂಡ ಇದೇ ರೀತಿ ಆಗಿದೆ. ನಮ್ಮಲ್ಲಿ ಉತ್ತಮವಾದಂಥ ಬೀಜ ತಯಾರಿಸುವುದಕ್ಕೆ ಆಗಿಲ್ಲ ಎಂದರೆ ಏನು ಹೇಳಬೇಕು. ಇದರ ಕಡೆ ಸರ್ಕಾರದವರು ತೀವ್ರ ಗಮನಕೊಟ್ಟು ಎಂಎಚ್‌ಎಸ್–೧ ಬೀಜವನ್ನು ರೈತರಿಗೆ ಸರಬರಾಜು ಮಾಡಬೇಕಲ್ಲದೆ, ಖಾಸಗೀ ಏಜೆಂಟರುಗಳನ್ನು ರದ್ದು ಪಡಿಸಿ ಸಹಕಾರ ಸಂಘಗಳ ಮೂಲಕ ಬೀಜ ವಿತರಣೆ ಮಾಡಬೇಕೆಂದು ಹೇಳುತ್ತೇನೆ, ೬೦೦ ರೂಪಾಯಿ ಕೊಟ್ಟು ಬೀಜ ತಂದು ಹಾಕಿದರೂ ಲುಕ್ಸಾನು ಆಗುವಂಥ ಪರಿಸ್ಥಿತಿ ಇದೆ. ಈ ವಿಚಾರದಲ್ಲಿ ಉತ್ತಮವಾದ ರೋಗ ತಡೆಯುವಂಥ ಬೀಜಗಳನ್ನು ರೈತರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮುಖ್ಯವಾಗಿ ಕಾಲೇಜುಗಳಿಗಿಂತ ಪ್ರಾಥಮಿಕ ಶಿಕ್ಷಣದಲ್ಲಿ ಸುಧಾರಣೆಯಾಗಬೇಕು. ಉತ್ತಮ ಶಿಕ್ಷಣ ಕೊಟ್ಟು ಒಳ್ಳೆಯ ನಾಗರೀಕರನ್ನು ಇವತ್ತು ನಾವು ತಯಾರು ಮಾಡಬೇಕಾಗಿದೆ. ಇವತ್ತು ನಮ್ಮ ಮಕ್ಕಳಲ್ಲಿ ದಿನೇ ದಿನೇ ಶಿಸ್ತು ಕಡಿಮೆಯಾಗುತ್ತಿದೆ. ಪ್ರೊಫೆಸರುಗಳನ್ನು ಹೆದರಿಸಿ ಪಾಸು ಮಾಡಿಸಿಕೊಳ್ಳುವಂಥ ಮಟ್ಟಕ್ಕೆ ವಿದ್ಯಾರ್ಥಿಗಳು ಬಂದಿದ್ದಾರೆ. ಇಂಥ ಮಕ್ಕಳು ಒಳ್ಳೆಯ ನಾಗರೀಕರಾಗುವುದಕ್ಕೆ ಸಾಧ್ಯವಿಲ್ಲ. ಇದನ್ನು ಹೋಗಲಾಡಿಸಬೇಕಾದರೆ, ಪ್ರಾಥಮಿಕ ಮಟ್ಟದಲ್ಲಿ ನೀತಿ ಭೋದಕ, ಕವನ ಮತ್ತು ಕವಿತೆಗಳನ್ನು, ದೇಶ ಪ್ರೇಮ ಹುಟ್ಟುವಂತ ಪಠ್ಯ ಪುಸ್ತಕಗಳನ್ನು ಮಕ್ಕಳಿಗೆ ಒದಗಿಸುವಂಥ ವ್ಯವಸ್ಥೆಯಾಗಬೇಕು. ಪರೀಕ್ಷೆಯಲ್ಲಿ ೫೦ ಅಂಕಗಳಿಗಿಂತ ಕಡಿಮೆ ತೆಗೆದುಕೊಂಡರೆ ಅಂಥವರು ಕಾಲೇಜಿಗೆ ಹೋಗಬಾರದು. ಅಂತಹವರನ್ನು ಅನರ್ಹಗೊಳಿಸಿ, ದುಡಿಮೆ ಮಾರ್ಗವನ್ನು ಹಿಡಿಯುವಂತೆ ಮಾಡಬೇಕು. ಸಸಿ ಒಳ್ಳೆಯದಿದ್ದರೆ ಬೆಳೆ ಚೆನ್ನಾಗಿ ಬರುತ್ತದೆ, ಅದೇರೀತಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಟ್ಟರೆ ಮುಂದೆ ಒಳ್ಳೆಯ ಪ್ರಜೆಗಳಾಗುತ್ತಾರೆ. ನಮ್ಮಲ್ಲಿ ಮೊದಲು ಮುಲ್ಕಿ ಪರೀಕ್ಷೆ ಎಂದು ಇತ್ತು. ಸ್ಕಾಲರ್ ಪರೀಕ್ಷೆ ಎಂದು ಇತ್ತು. ಇವತ್ತು ಎಂ, ಎ. ಪದವಿ ಪಡೆದವರಿಗೂ ಇಲ್ಲದಂಥ ಜ್ಞಾನ ಆ ಪರೀಕ್ಷೆ ಮಾಡಿದವರಿಗೆ ಇತ್ತು. ಅಂಥ ಒಂದು ವ್ಯವಸ್ಥೆಯು ತೀವ್ರವಾಗಿ ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಗಂಗಾನದಿ ಸ್ವಚ್ಛ ಮಾಡುವುದಕ್ಕೆ ಹೊರಟಿದ್ದೇವೆ ಮೊದಲು ಮಕ್ಕಳ ಮನಸ್ಸನ್ನು ಸ್ವಚ್ಛ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಕಳೆದ ೪–೫ ವರ್ಷಗಳಿಂದ ನಮ್ಮ ರೈತರು ಸತತವಾಗಿ ಬರಗಾಲಕ್ಕೆ ಗುರಿಯಾಗಿದ್ದಾರೆ. ಇವತ್ತು ಸರ್ಕಾರ, ಅವರ ಸಾಲವನ್ನು ಮನ್ನಾ ಮಾಡಿರುವುದಕ್ಕಾಗಿ ರೈತರ ಪರವಾಗಿ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ),—ಸನ್ಮಾನ್ಯ ಅಧ್ಯಕ್ಷರೆ, ೧೯೮೮–೮೯ನೇ ವರ್ಷದ ಆಯುವ್ಯಯ ಪತ್ರವನ್ನು ಚರ್ಚೆ ಮಾಡತಕ್ಕ ಈ ಸಂದರ್ಭದಲ್ಲಿ, ಮಾನ್ಯ ರಾಮಕೃಷ್ಣಹೆಗಡೆಯವರು ಕಡಿಮೆ ಪಕ್ಷ ಅರ್ಥಮಂತ್ರಿಯಾಗಿ ಆಯುವ್ಯಯ ಪತ್ರವನ್ನು ಕರ್ನಾಟಕ ರಾಜ್ಯದ ಜನರಿಗೆ ಕೊಡುತ್ತಾರೆ. ನಾನು ಬಾರಿ ಆಸೆ ಮಾಡಿಕೊಂಡಿದ್ದೆ. ಈ ಪತ್ರವನ್ನು ನೋಡಿದಮೇಲೆ ಆಯುವ್ಯಯ ಪತ್ರಕ್ಕಿಂತಲೂ ಜಾಸ್ತಿಯಾಗಿ ಒಂದು ಸರ್ಕಾರಿಯಾ ಕಮೀಷನ್ ಮೇಲೆ ವೈಟ್ ಪೇಪರ್‌ನ್ನು ಈ ಸದನದಲ್ಲಿ ಆಯುವ್ಯಯ ಪತ್ರದ ಮುಖವಾಡದಲ್ಲಿ ಈ ಸದನಕ್ಕೆ ಮಾತ್ರವಲ್ಲ; ಕರ್ನಾಟಕಕ್ಕೆ ಮಾತ್ರವಲ್ಲ; ಇಡೀ ರಾಷ್ಟ್ರಕ್ಕೆ

ಒಪ್ಪಿಸಿದ್ದಾರೆನ್ನುವುದು ನನ್ನ ಭಾವನೆ. ಏಕೆಂದರೆ, ಈ ಸದನದಲ್ಲಿ ವೈಟ್ ಪೇಪರ್‌ನ್ನು ಸರ್ಕಾರಿಯಾ ಕಮೀಷನ್ ಜನವರಿ ೧೯೮೮ರಂದು ವರದಿ ಒಪ್ಪಿಸಿದ ಮೇಲೆ ಅದು ಪ್ರಕಟ ಆದಮೇಲೆ ಸನ್ಮಾನ್ಯ ಮುಖ್ಯ ಮಂತ್ರಿಯವರು ಈ ಅವಕಾಶವನ್ನು ಉಪಯೋಗ ಮಾಡಿಕೊಂಡು ಈ ಪತ್ರವನ್ನು ಈ ಸದನಕ್ಕೆ ಒಪ್ಪಿಸಿದ್ದಾರೆ. ಆದರೆ ಈ ಕರ್ನಾಟಕ ರಾಜ್ಯದ ಜನತೆಯಮಟ್ಟಿಗೆ ಇದೊಂದು ಬ್ಲಾಕ್ ಪೇಪರ್ ಆಗಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಯಾವುದೇ ಒಂದು ಆಯವ್ಯಯ ಪತ್ರ ಎಂದು ಹೇಳಿದರೆ ಆ ಆಯವ್ಯಯ ಪತ್ರ ಆ ವರ್ಷದ ಆದ್ಯತೆಗಳನ್ನು ಬೆಟ್ಟುಮಾಡಿ ತೋರಿಸಬೇಕಾಗುತ್ತದೆ. ಎಲ್ಲೆಲ್ಲಿ ಅದು ಜನರ ಮಧ್ಯೆ ಇರಬಹುದು ಅಥವಾ ಪ್ರಾದೇಶವಾರಾಗಿ ಇರಬಹುದು, ಅಲ್ಲಿ ತಲೆದೋರಿರತಕ್ಕ ಅಸಮಾನತೆಗಳನ್ನು ಸ್ಪಷ್ಟವಾಗಿ ಗುರುತಿಸಿ ಅವುಗಳನ್ನು ಪರಿಹಾರ ಮಾಡತಕ್ಕ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಅಷ್ಟು ಮಾತ್ರವಲ್ಲದೆ ಇದು ಒಂದು ರೀತಿ ಚಲಿಸುವ ರಥ ಒಂದು ರಾಜ್ಯದ ಪ್ರಗತಿ. ಇದು ಹಂಪೆಯಲ್ಲಿರತಕ್ಕಂಥ ಚಲಿಸದ ಕಲ್ಲುಬಂಡೆ ರಥ ಆಗಬಾರದು ಅದು ಬಹುಶಃ ಪ್ರಾಚೀನ ಕಲೆ ನೆನಪು ಮಾಡಲಿಕ್ಕೆ ಆಗಬಹುದೇ ಹೊರತು ಆರ್ಥಿಕ ಸಾಮಾಜಿಕ ಶಕ್ತಿಯನ್ನು ಕೊಡತಕ್ಕಂತಹ ಒಂದು ಪ್ರೇರಕ ಶಕ್ತಿ ಈ ಒಂದು ಆಯವ್ಯಯ ಪತ್ರದಲ್ಲಿ ಆದ ಹಾಗೆ ನನಗೆ ಕಂಡುಬರುವುದಿಲ್ಲ ಹಿಂದಿನ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಹರ್‌ಲಾಲ್ ನೆಹರೂರವರು ಒಂದು ಮಾತನ್ನು ಹೇಳಿದರು. ಹಿಂದುಳಿದ ಅಥವಾ ಮುಂದುವರಿಯುತಕ್ಕ ರಾಷ್ಟ್ರಗಳು ಅಂದರೆ ಅವು ಒಂದು ಹುಲಿಯ ಮೇಲೆ ಸವಾರಿಯನ್ನು ಮಾಡಿದ ಹಾಗೆ ಹುಲಿ ಮೇಲೆ ಸವಾರಿ ಮಾಡಿದ ಮೇಲೆ ವೇಗವನ್ನು ಜಾಸ್ತಿ ಮಾಡಿಕೊಂಡು ಹೋಗಬೇಕು. ಆ ವೇಗವನ್ನು ಕಡಿಮೆ ಮಾಡಿದರೆ ಹುಲಿ ನುಂಗಿಬಿಡುತ್ತದೆ, ಆ ಹುಲಿಯ ಮೇಲೆ ಸವಾರಿ ಮಾಡಲಿಕ್ಕೆ ಸಾಮರ್ಥ್ಯ ಬರುವುದಿಲ್ಲ, ಪ್ರತಿವರ್ಷ ಯೋಜನೆಯನ್ನು ಅನುಷ್ಠಾನ ಮಾಡಿದಾಗ ಯೋಜನಾ ಚೌಕಟ್ಟಿನಲ್ಲಿ, ಅದು ಏಳನೇ ಯೋಜನೆ ಆಗಿದೆ, ಆ ಚೌಕಟ್ಟಿನಲ್ಲಿ ನಾವು ಕೆಲಸ ಮಾಡುವಾಗ ಒಂದು ಸೀಮಿತವಾದಂಥ ಒಂದು ವೇಗವನ್ನು ಯೋಜನಾ ಗಾತ್ರದಲ್ಲಿ ಯೋಜನಾ ಪ್ರಗತಿಯಲ್ಲಿ ನಾವು ಅನುಸರಿಸಿಕೊಂಡು ಹೋಗದೆ ಇರುವುದರ ಬಗ್ಗೆ ತಮಗೆ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಅಭಿವೃದ್ಧಿಯನ್ನು ಅದು ನುಂಗಿ ಹಾಕುತ್ತದೆ, ಅದರಿಂದ ಸ್ಥಗಿತವಾಗುತ್ತದೆ ಹಿಮ್ಮುಖವಾಗುತ್ತದೆ. ಒಂದು ಪಂಚವಾರ್ಷಿಕ ಯೋಜನೆಯು ಹಿಂಜರಿತ ಆದರೆ ಅದರಿಂದ ಹದಿನೈದು ವರ್ಷಗಳ ಹಿಂದೆ ನಮ್ಮನ್ನು ದೂಡಿದಂಥ ತಳ್ಳಿದಂಥ ಪರಿಸ್ಥಿತಿ ಉದ್ಭವವಾಗುತ್ತದೆ ಎಂಬ ಬಗ್ಗೆ ನಾನು ಅನೇಕ ಸಂದರ್ಭಗಳಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದು ಇದೆ. ಏಕೆಂದರೆ ನಾವು ಏಳನೇ ಯೋಜನೆಯನ್ನು ರೂಪಿಸಿದ ಕೂಡಲೇ ನಾನು ಒಂದು ಪ್ರತಿಕ್ರಿಯೆಯನ್ನು ಕೊಟ್ಟಿದ್ದೆ. ಆ ಒಂದು ಪ್ರತಿಕ್ರಿಯೆ ಪ್ರಕಾರ ಈ ಸದನದಲ್ಲಿ ಒಂದು ಎಚ್ಚರವನ್ನು ಕೂಡ ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಟ್ಟಿದ್ದೆ. ಇದನ್ನು ಸರಿಪಡಿಸದೇ ಇದ್ದರೆ, ರಾಜ್ಯದ ಪ್ರಗತಿ ಸಂಪೂರ್ಣವಾಗಿ ಕುಂಠಿತವಾಗುವುದು ಮಾತ್ರವಲ್ಲದೆ ನಾವು ಸುಧಾರಿಸಲಿಕ್ಕೆ ಆಗದ ಮಟ್ಟಕ್ಕೆ ಹೋಗಲಿಕ್ಕೆ ಸಾಧ್ಯವಿದೆ ಆದ್ದರಿಂದ ಇದನ್ನು ಈಗಲೇ ಸರಿಪಡಿಸಲೇಬೇಕೆಂದು, ಏಳನೇ ಯೋಜನೆಯ ಗಾತ್ರ ನಮ್ಮ ರಾಜ್ಯಕ್ಕೆ ಬಂದಕೂಡಲೇ ಈ ವಿಚಾರವನ್ನು ಈ ಸದನದ ಮುಂದೆ ನಾನು ತಂದಿದ್ದೆ, ರಾಜ್ಯದ ಗಮನಕ್ಕೂ ಕೂಡ ತಂದಿದ್ದೆ.

೧೨-೩೦ ಪಿ.ಎಂ.

ಪರ್ ಕ್ಯಾಪಿಟಾ ಪ್ಲಾನ್ ಔಟ್‌ಲೇ ಪ್ರಕಾರ ೬ನೇ ಯೋಜನೆಯಲ್ಲಿ ನಮ್ಮ ಸ್ಥಾನ ಇಡೀ ದೇಶದಲ್ಲಿ ೬ನೇ ಸ್ಥಾನದಲ್ಲಿದ್ದುದು ೭ನೇ ಯೋಜನೆ ಬರುವಾಗ ೯ನೇ ಸ್ಥಾನಕ್ಕೆ ದೂಡಲ್ಪಟ್ಟಿದೆ. ನಮ್ಮ ಇಡೀ ದೇಶದ ಯೋಜನೆಯಲ್ಲಿ ೫ ಮತ್ತು ೬ನೇ ಯೋಜನೆಯಲ್ಲಿ ಕರ್ನಾಟಕದ ಪಾಲು ೫.೯ ಪರ್ಸೆಂಟ್ ಇದ್ದರೆ ೭ನೇ ಯೋಜನೆಯಲ್ಲಿ ೪.೯ ಪರ್ಸೆಂಟ್ ಆಗಿದೆ. ಇಲ್ಲಿ ೧ ಪರ್ಸೆಂಟ್ ಎಂದರೆ ೨೦೦೦ ಕೋಟಿ ರೂಪಾಯಿಗಳು. ಈ ೨ ಸಾವಿರ ಕೋಟಿ ರೂಪಾಯಿಗಳಲ್ಲಿ ನಾವು ಅನೇಕ ಯೋಜನೆಗಳನ್ನು ಮುಗಿಸಬಹುದಿತ್ತು, ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಬಹುದಿತ್ತು. ಆದರೆ ಇದನ್ನು ಸರಿಪಡಿಸುವುದಕ್ಕೆ ನಾವು ಹೋಗಲಿಲ್ಲ. ಇದಕ್ಕೆ ಬದಲಾಗಿ ನಾವು ಪ್ರತಿವರ್ಷ ಈಗ ಅನುಷ್ಠಾನವಾಗತಕ್ಕ ಯೋಜನೆಯ ಗಾತ್ರವನ್ನು ನೋಡಿದರೆ ಗೊತ್ತಾಗುತ್ತದೆ. ನಾನು ವಿವರಕ್ಕೆ ಹೋದರೆ ಬಹಳ ಸಮಯ ತೆಗೆದುಕೊಳ್ಳುತ್ತದೆ. ಆದ್ದರಿಂದ ಬಹಳ ಸೂಕ್ಷ್ಮವಾಗಿ ಹೇಳುತ್ತೇನೆ. ಡೆವಲಪ್‌ಮೆಂಟ್ ಸ್ಕೀಂ ಎಂದು ಏನಿದೆ ಅದನ್ನು ತಾವು ಪರಾಂಬರಿಸಿದರೆ ನಾವು ಯಾವರೀತಿ ಹಿನ್ನಡೆಗೆ ಹೋಗಿದ್ದೇವೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ೮೭-೮೮ರ ವಿಚಾರವನ್ನು ನೋಡಿದರೆ ನಾವು ಹಿನ್ನಡೆಯನ್ನು ನಡೆದಿದ್ದೇವೆ, ಒಂದು ಸಾರಿ ೪೦ ಕೋಟಿ ರೂಪಾಯಿ ಹೆಚ್ಚಳ, ಇನ್ನೊಂದು ಸಾರಿ ೫೦ ಕೋಟಿ ರೂಪಾಯಿ

ಹೆಚ್ಚಳ, ಹೀಗೆ ಯೋಜನಾ ..ರ್ಥಿಕ ವೆಚ್ಚ ಪ್ರತಿವರ್ಷ ಕಡಿಮೆಯಾಗಿದೆ. ೮೬–೮೭ನೇ ಯೋಜನಾ ವೆಚ್ಚ ೭೯೭ ೧೩ ಕೋಟಿ ಆದರೆ ೮೭–೮೮ಕ್ಕೆ ಯೋಜನೆಯ ಗಾತ್ರ ೯೧೫ ಕೋಟಿ. ಇದು ಬಹಳ ಕಡಿಮೆ. ಆದರೆ ಇದನ್ನಾದರೂ ಮಾಡುತ್ತಾರೆಯೋ ಎಂದರೆ ಈಗ ೮೭೦.೨೯ ಕೋಟಿಗೆ ರಿವೈಸ್ಡ್ estimate for 1987-88. ಈಗ ಮತ್ತೆ ೯೦೦ ಕೋಟಿಗೆ ಆಗಿದೆ. ಇದು ರಿವೈಸ್ ಆಗುವಾಗ ಯಾವರೀತಿ ಆಗುತ್ತದೆಂದು ನಾನು ಈಗ ವಿಶ್ಲೇಷಣೆ ಮಾಡುತ್ತೇನೆ. ೮೩–೮೪ರಲ್ಲಿ ಇದೇ ಪರಿಸ್ಥಿತಿ, ೫೭೫ ಕೋಟಿ ರೂ. ೧೯೮೨–೮೩ರಲ್ಲಿ ೫೫೩.೯೩ ಕೋಟಿ ರೂಪಾಯಿ.

ಇನ್ನು ಗ್ರಾಮೀಣ ಅಭಿವೃದ್ಧಿಗೆ ನಾವು ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಜಿಲ್ಲಾ ಪರಿಷತ್ತುಗಳಲ್ಲಿ ಯಾವ ರೀತಿಯ ಕಾರ್ಯ ಚಟುವಟಿಕೆಗಳು ನಡೆಯುತ್ತಿವೆ ಎಂಬುದನ್ನು ನಾನು ವಿಶ್ಲೇಷಣೆ ಮಾಡುತ್ತೇನೆ. ೮೭–೮೮ರಲ್ಲಿ ಜಿಲ್ಲಾ ಪರಿಷತ್ತುಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಇದಕ್ಕೆ ನಾವು ಆದ್ಯತೆಯನ್ನು ಕೊಡಬೇಕು. ಒಮ್ಮೆ ಏನಾದರೂ ಈ ಜಿಲ್ಲಾಪರಿಷತ್ತು ವಿಫಲವಾದರೆ ಮತ್ತೆ ಚೇತರಿಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ೮೬–೮೭ರಲ್ಲಿ ೬೭.೮೩ ಕೋಟಿ ರೂಪಾಯಿಗಳನ್ನು ರೂರಲ್ ಡೆವಲಪ್‌ಮೆಂಟ್‌ಗೆ ಖರ್ಚುಮಾಡಿದರೆ ೮೭–೮೮ರ ರಿವೈಸ್ಡ್ ಪ್ಲಾನ್ ಪ್ರಕಾರ ೭೮ ಕೋಟಿ ರೂಪಾಯಿಗಳು ಮಾತ್ರ. ೮೮–೮೯ರಲ್ಲಿ ೬೬ ಕೋಟಿ ರೂಪಾಯಿ ಎಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳ ಬಗ್ಗೆ ನಿಮಗೆ ವಿಶ್ವಾಸ ಇದೆಯೋ ? ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳು ಇಡೀ ಗ್ರಾಮೀಣ ಪ್ರದೇಶಗಳ ರೂಪುರೇಷೆಗಳನ್ನು ಬದಲಾವಣೆ ಮಾಡತಕ್ಕವು. ಇದು ಒಂದು ವಿಶೇಷ ಯೋಜನೆ. When you have heralded a sort of Revolution according to you ೭೩ ಕೋಟಿ ರೂಪಾಯಿ ಇದ್ದುದು ೬೬ ಕೋಟಿ ರೂಪಾಯಿಗೆ ಇಳಿದಿದೆ ಎಂದರೆ ಸುಮಾರು ೭ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೇ ಇನ್ನು ಇರಿಗೇಷನ್ ಎಂದರೆ ಸಣ್ಣ ಮತ್ತು ಮಧ್ಯಮ ನೀರ ವರಿ ಯೋಜನೆಗಳು. ಇವು ಕೃಷಿಯ ಜೀವಾಳ ನಮ್ಮ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ. ಇವು ಪ್ರಾಣ ಪಕ್ಷಿ, ರೈತರ ಅಳಿವು ಉಳಿವು ಇದರಲ್ಲಿರುವುದು. ಆದರೆ ಆ ಪ್ರಾಣ ಪಕ್ಷಿಯನ್ನು ಹಿಚುಕುತ್ತಾ ಇದ್ದೀರಿ. ಆದರೆ ಇನ್ನು ಪ್ರಾಣ ಹೋಗಿಲ್ಲ. ತಮ್ಮ ಕಾಲದಲ್ಲಿ ಆ ಮಟ್ಟಕ್ಕೆ ಬಂದಿದೆ. ಈ ನೀರಾವರಿ ಯೋಜನೆಗಳು ರೈತರ ಪ್ರಾಣ ಪಕ್ಷಿ ಅಥವಾ ಕರ್ನಾಟಕ ರಾಜ್ಯದ ಸಮಸ್ತ ಅಭಿವೃದ್ಧಿಯ ಪ್ರಾಣ ಪಕ್ಷಿ ಎಂದು ಇಟ್ಟುಕೊಳ್ಳೋಣ. ೧೯೮೫–೮೬–೮೭ರಲ್ಲಿ ನೀರಾವರಿ ಯೋಜನೆಗಳಿಗೆ ಆದ ವೆಚ್ಚ ೧೦೪ ೧೧ ಕೋಟಿ ಆದರೆ ೧೯೮೭–೮೮ಕ್ಕೆ ೩೦೦ ಕೋಟಿ ವೆಚ್ಚಮಾಡುತ್ತೇವೆಂದು ತಾವು ಹೇಳಿದ್ದು. ಬಜೆಟ್‌ನಲ್ಲಿ ಹೇಳಿದಮೇಲೆ ಅಷ್ಟು ಖರ್ಚುಮಾಡಬೇಕಾಗಿತ್ತು. ಆದರೆ ಬಜೆಟ್‌ನಲ್ಲಿ ಹೇಳುವುದು ಮಾತ್ರ ಆಗುತ್ತದೆ ಹೊರತು ಖರ್ಚು ಮಾಡುವುದಕ್ಕೆ ಆಗುವುದಕ್ಕೆ ನಿಮಗೆ ಆ ಸಾಮರ್ಥ್ಯವಿಲ್ಲ. ಇದನ್ನು ನೋಡಿದರೆ Of course, not as a professor of Doom ತರಹ ನೀವು ನಡೆಯತಕ್ಕಂಥ ಕ್ರಮ ಎಂದೆನಿಸುತ್ತದೆ. ೧೯೮೫–೮೬–೮೭ಕ್ಕೆ ಈ ಯೋಜನೆಗೆ ೧೦೭ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದರೆ ಖರ್ಚಾಗಿರುವುದು ೯೩.೯೫ ಕೋಟಿ ಅಂದರೆ ೧೧–೧೨ ಕೋಟಿ ರೂಪಾಯಿಗಳು ಕಡಿಮೆಯಾಯಿತು. ಈ ವರ್ಷಕ್ಕೆ ೧೨೫ ೭೦ ಕೋಟಿ ೧೯೮೮–೮೯ಕ್ಕೆ ಅಂದರೆ ಮುಂದೆ ನೀವು ಸುಧಾರಿಸುತ್ತೀರಿ ಎಂದರೆ ನೀವು ಇರುವಷ್ಟು ದಿವಸಗಳು ಸಂಧಾರಿಸುವುದಿಲ್ಲವೆಂದು ಕರ್ನಾಟಕ ರಾಜ್ಯದ ಜನತೆಗೆ ಸ್ಪಷ್ಟವಾಗಿ ತೋರುತ್ತದೆ. ಕಳೆದ ವರ್ಷ ೪೮೦ ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಕೊಟ್ಟೇಕೆ ೧ಡತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಸನ್ಮಾನ್ಯ ದೇವೇಗೌಡರೂ ಕೂಡ ಹೇಳುತ್ತಾ ಹೋದರು. ಇಷ್ಟು ಕಾರ್ಯಕ್ರಮಗಳನ್ನು ನಾನು ಮಾಡದೇ ಇದ್ದರೆ ಒಂದು ನಿಮಿಷ ಮಂತ್ರಿಪದವಿಯಲ್ಲಿ ಇರುವುದಿಲ್ಲವೆಂದು ಹೇಳಿದ್ದರು. ಪಾಪ, ಅವರ ಮೇಲೆ ಅನುಕಂಪವನ್ನು ತೋರಿಸಬೇಕಾಗಿದೆ. ಅವರ ಪರಿಸ್ಥಿತಿ ಆ ರೀತಿಯಲ್ಲಿದೆ. ರಾಜಿನಾಮೆ ಕೊಡುವಂತೆಯೂ ಇಲ್ಲ ಮತ್ತೆ ಇಲ್ಲಿ ಇರುವಂತೆಯೂ ಇಲ್ಲ ತ್ರಿಶಂಕು ಪರಿಸ್ಥಿತಿಯಲ್ಲಿ ಅವರು ಇದ್ದಾರೆ. Even on the question of energy ತಾವು ೧೪೨.೮೦ ಕೋಟಿ ಕಡಿತ ಮಾಡಿದ್ದಕ್ಕೆ ಮಾನ್ಯ ಜೆ.ಎಚ್. ಪಟೇಲ್‌ರವರಿಗೆ ಅಭಿನಂದಿಸಬೇಕು. ಏತಕ್ಕೆಂದರೆ You have not become an administrative or political target of this Government. Mr. Devegowda has become both political and administrative target.

SRI J.H. PATEL.—For Whom ?

SRI M. VEERAPPA MOILY.—I do not know ಕಡಿತ ನಾವು ಮಾಡಿದ್ದು ನೀವು ಎಲ್ಲಿ ಮಾಡುತ್ತೀರಿ. However you are very safe. Your landing is very safe Mr. Devegowda is still not able to land.

SRI J.H. PATEL.—Sir, the priority to be given in the budget does not depend upon the protfolio or the Minister. It depends upon the priority sector. Power sector is a priority sector.

ಶ್ರೀ ಎಂ. ವೀರಪ್ಪ ಮೊಯಿಲಿ —ತಾವು ಹೇಳುವುದನ್ನು ಒಪ್ಪಿಕೊಳ್ಳಬಹುದು. ನೀರಾವರಿ ಮತ್ತು ಪವರ್ ಎರಡು ಇದ್ದೇ ಇರಬೇಕು. ಎರಡು ಅವಳಿ ಜವಳಿ ಇದ್ದ ಹಾಗೆ. ಒಂದು ಅವಳಿಯನ್ನು ಕತ್ತರಿಸಿಬಿಟ್ಟರೆ ಜವಳಿಯನ್ನು ಬೆಳೆಸುವುದಕ್ಕಾಗುವುದಿಲ್ಲ. ಎರಡು ಇದ್ದು ಪುಷ್ಟವಾಗಿ ಬೆಳೆಯಬೇಕು.

ಶ್ರೀ ಜೆ ಎಚ್. ಪಟೇಲ್.—ನೀರಾವರಿಗೆ ಪ್ರಾಮುಖ್ಯತೆ ಕಡಿಮೆ ಎಂದು ಹೇಳಲಿಲ್ಲ. ನೀರಾವರಿಗಿಂತ ಹೆಚ್ಚು ನಾವು ವಿದ್ಯುತ್ತಿಗೆ ಆದ್ಯತೆಯನ್ನು ಕೊಡಬೇಕಾಗಿದೆ. ಸಮಗ್ರ ಬದಲಾವಣೆ ಆಗಬೇಕಾದರೆ ಮೊದಲನೆಯದಾಗಿ ವಿದ್ಯುತ್ತಿಗೆ ಆದ್ಯತೆಯನ್ನು ಕೊಡಬೇಕೆಂದು ನಾವು ಹೇಳಿದ್ದೆವು.

SRI A. LAKSHMI SAGAR.—Let us be very clear about the basic. If you kindly have a look on page-12 of the Budget speech, you will come to know that there has been an increase in the approved outlays and what was actually spent in 1983-84, 1984-85, 1985-86 and 1986-87. I want you to kindly bear this in mind.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀರಾವರಿ......

ಶ್ರೀ ಎ. ಲಕ್ಷ್ಮೀಸಾಗರ್.—ನೀರಾವರಿ ಅಲ್ಲ, ಟೋಟಲ್ ಪಿಕ್ಚರ್.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಯಾವ ವರ್ಷದ್ದು ಹೇಳುತ್ತಿದ್ದೀರಿ? ನಾನು ೧೯೮೭-೮೮ರದ್ದು ಹೇಳುತ್ತಿರುವುದು. What is approved is Rs. 917 crores and what is revised and also stands today is Rs. 820.92 crores. ನೀವೇ ಹೇಳಿದಿರಿ ಕಡಿತ ಮಾಡಿದ್ದೇವೆ ಎಂದು. I will come back to that. ಎನರ್ಜಿ ಬಗ್ಗೆ ಕೂಡ ೨೦೭ ಕೋಟಿ ರೂಪಾಯಿ ಇಟ್ಟಿದ್ದರೆ ಅದರಲ್ಲಿ ಖರ್ಚು ಮಾಡಿರುವುದು ೨೦೬ ಕೋಟಿ ರೂಪಾಯಿ ಮಾತ್ರ. ಅದಕ್ಕಿಂತ ಕಡಿಮೆ ಖರ್ಚು ಮಾಡಿದರೇ ಹೊರತು ಹೆಚ್ಚು ಮಾಡಲಿಲ್ಲ. ಈ ವರ್ಷ ೨೬೩.೭೩ ಕೋಟಿ ರೂಪಾಯಿ ಎಷ್ಟರಮಟ್ಟಿಗೆ ಖರ್ಚಾಗುತ್ತದೋ ಗೊತ್ತಿಲ್ಲ. ನನಗೆ ಇದರ ಬಗ್ಗೆ ಅನುಮಾನ ಇದೆ.

ಶ್ರೀ ಜೆ. ಹೆಚ್. ಪಟೇಲ್.—ನಿಮ್ಮ ಸಂಶಯವನ್ನು ನಾವು ನಿವಾರಣೆ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ —ಅದು ನಿವಾರಣೆಯಾಗುವುದಿಲ್ಲ. ನೀವು ನನ್ನ ಬಡ್ಜೆಟ್ ಸ್ಪೀಚನ್ನು ನೋಡಿ. ಅದರಲ್ಲಿ ನೂರಕ್ಕೆ ನೂರು ಪಾಲು ಸತ್ಯವಾಗಿದೆ. ಆದರೆ ನೀವು ಏನು ಸತ್ಯ ಹೇಳುತ್ತೀರಿ ಅದರಲ್ಲಿ ಆ ಸೂಕ್ಷ್ಮತೆ ಇಲ್ಲ. ಬದಲಾವಣೆ ಆಗಬೇಕು ರಾಜ್ಯದ ಹಿತಾಸಕ್ತಿಯನ್ನು ನೋಡಬೇಕು ತಮಗೆ ಇದು ಬೇಕಾಗಿಲ್ಲ. ನೀವು ಅಂದರೆ ಇಡೀ ಸರ್ಕಾರಕ್ಕೆ. ನಿಮ್ಮ ಬಡ್ಜೆಟ್ಟನಲ್ಲಿ ೮೬-೮೭ರಲ್ಲಿ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಹಾಗೆ ೧೧.೯೦ ಕೋಟಿ ರೂಪಾಯಿ ಇದ್ದರೆ ೮೭-೮೮ರಲ್ಲಿ ರಿವೈಸ್ಡ್ ಎಸ್ಟಿಮೇಟ್ ೫.೧೧ ಕೋಟಿ ಆಗಿದೆ. ಅಂದಾಗ ಅರ್ಧಕರ್ಧ ಖೋತಾ ಆಗಿದೆ. ಹೀಗಾದರೆ ಯಾರು ಕೈಗಾರಿಕೆಗಳನ್ನು ಮಾಡುವುದಕ್ಕೆ ಮುಂದೆಬರುತ್ತಾರೆ. ಕೈಗಾರಿಕೆಯ ಪ್ರಗತಿ ಸಂಪೂರ್ಣವಾಗಿ ಕುಂಠಿತವಾಗಿದೆ. ನಿಮಗೆ ಕೈಗಾರಿಕೆಗಳನ್ನು ಬೆಳೆಸಲು ಮನಸ್ಸಿಲ್ಲ ಅಥವಾ ನಿಮಗೆ ಸಾಮರ್ಥ್ಯ ಕೂಡ ಇಲ್ಲವೆಂದು ಹೇಳಬಹುದು. ಈ ವರ್ಷ ೫.೨೫ ಕೋಟಿ ರೂಪಾಯಿಗಳ ಯೋಜನಾ ವೆಚ್ಚವನ್ನು ಕೈಗಾರಿಕೆಯಲ್ಲಿ ಕೂಡ ಸೇರಿಸಿಕೊಂಡಿದ್ದೀರಿ. ಯಾವ ಒಂದು ಸರ್ಕಾರವನ್ನು ತೆಗೆದುಕೊಂಡರೂ ಸೋಷಿಯಲ್ ಸೆಕ್ಯೂರಿಟಿ ಅಂಡ್ ವೆಲ್‌ಫೇರ್ ಮಾಡುತ್ತೇವೆ, ಸಮಾಜ ಕಲ್ಯಾಣ ಮಾಡುತ್ತೇವೆ, ನ್ಯಾಯ ಕೊಡುತ್ತೇವೆಂದು ಹೇಳತಕ್ಕವರು they have provided Rs. 10.66 crores in 1987-88 and what is revised will be spent now is Rs. 2.96 crores.

ಹೋದ ಸಾರಿ ಹತ್ತೊಂಬತ್ತುವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಈ ಸಾರಿ ೯ ಕೋಟಿ ರೂಪಾಯಿಗೆ ಡೈವರ್ಟ್ ಮಾಡಿಬಿಟ್ಟಿದ್ದೀರಿ. ಯಾವುದು ಸಾಮಾಜಿಕ ನ್ಯಾಯ ? ಬಡವರ ಬಗ್ಗೆ ನಿಮಗೆ ಅನುಕಂಪ ಇಲ್ಲ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಡ. ೧೯೮೭-೮೮ಕ್ಕೆ ೧೧.೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಆಯಿತು ನಿಮ್ಮ ಕೆಲಸ. ಇದು ನಿಮಗೆ ಬಡವರ ಮೇಲೆ ಇರತಕ್ಕ ಅತ್ಯಂತ ಅನುಕಂಪದ ನಿರ್ದಿಷ್ಟ ನಿದರ್ಶನ. ಅದೇ ರೀತಿ ಬೇರೆ ಬೇರೆ ಪ್ರಾವಿಷನ್‌ಗಳನ್ನು ಮಾಡಿದ್ದೀರಿ. ಇವರ ಕಾರ್ಯಕ್ರಮ ಭೂಸುಧಾರಣೆಯಲ್ಲಿ ಕೂಡ ಎಷ್ಟರಮಟ್ಟಿಗೆ ಇದೆ ಅಂದರೆ, ಭೂಮಾಲೀಕರಿಗೆ ಕೊಡತಕ್ಕ ಪರಿಹಾರದ ಬಗ್ಗೆ ಹೇಳುವುದಾದರೆ ೧೯೮೫-೮೬ರಲ್ಲಿ ನೂರು ಕೋಟಿ ರೂಪಾಯಿ ಅಲೋಕೇಷನ್ ಇದ್ದರೆ ಅದರಲ್ಲಿ ೬೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡದೆ ಹಾಗೆ ಉಳಿಸಿಕೊಂಡಿದ್ದಾರೆ. ಇದೇ ರೀತಿ ಯಾವ ಬಾಬಿನಲ್ಲಿ ತೆಗೆದುಕೊಂಡರೂ ಕೂಡ ಇವರು ಸರಿಯಾದ ಖರ್ಚನ್ನು ಮಾಡುವುದಕ್ಕೆ ಹಣ ಇಲ್ಲ. ಖರ್ಚನ್ನೂ ಇವರು ಮಾಡಿಲ್ಲ. ಕರ್ನಾಟಕ ರಾಜ್ಯ ಈಗ ಆರ್ಥಿಕವಾಗಿ ಅತ್ಯಂತ ಹೀನ ಸ್ಥಿತಿಯಲ್ಲಿದೆ. ನಾನು ಅನೇಕ ಬಾರಿ ಈ ಸದನದಲ್ಲಿ ಹೇಳಿದ್ದುಂಟು. ರಾಜಸ್ವದಲ್ಲಿ ಸರ್‌ಪ್ಲಸ್ ಇರಬೇಕಾಗುತ್ತದೆ. At least, there should be a break-even. The financial discipline depends upon the proper revenue account management. It is the foundation of the finances of the State. If this foundation is not sound, you are bound to collapse in capital account. In 1981-82, the revenue account was +142 crores. In 1982-83 it was +47.50 cro es. These people came to power. Thereafter, the revenue account has nose-dived. In 1983-84, revenue account was -10 crores, 1984-85 - minus 97 crores. In 198 -87, it is minus. In 1987-88 it was minus 60.96 crores and estimated plus 25 crores I doubt about this account. If there is a plus in 1987-88, how can there be a minus 184.55 crores in revenue account deficit projected for 1988-89. In 1988-89 by keeping a highest ever deficit of minus 184.55 crores, they are building a castle without any foundation, The entire budget will collapse. The whole edifice of this budget will collapse and nobody can sustain it. This revenue account deficit of Rs, 184.50 is bound to go up not less than 200 crores minus revenue deficit. ಈ ಆಧಾರ ಇಟ್ಟುಕೊಂಡು ನಾವು ಯಾವ ತರಹದ ಬಜೆಟ್ ನೋಡಬೇಕು? ಇದರಿಂದ ಏನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆ ? ಇವರದು ಬರೀ ಆರ್ಥಿಕ ದಿವಾಳಿ ಮಾತ್ರವಲ್ಲ ಸೈದ್ಧಾಂತಿಕ ದಿವಾಳಿ ಕೂಡ ಆಗಿದೆ. ಇದನ್ನು ಸಂಪೂರ್ಣವಾಗಿ ಆಯವ್ಯಯದಲ್ಲಿ ಕಾಣುತ್ತಿದ್ದೇವೆಂಬುದಕ್ಕೆ ಅನೇಕ ನಿದರ್ಶನಗಳನ್ನು ಖಂಡಿತವಾಗಿ ನಾನು ಕೊಡಬಲ್ಲೆ. ಕ್ಯಾಪಿಟಲ್ ಅಕೌಂಟಿನಲ್ಲಿ ಒಂದು ವರ್ಷ ಆದರೂ ಪ್ಲಸ್ ಕ್ಯಾಪಿಟಲ್ ಅಕೌಂಟ್ ಇದ್ದದ್ದಿದೆಯೇ ? ದಯಮಾಡಿ ನೋಡಿ. ಹೆಚ್ಚು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ೧೯೮೭-೮೮ರಲ್ಲಿ -೧೪೭.೯೫ ಎಸ್ಟಿಮೇಟ್ ಇದ್ದರೆ ರಿವೈಸ್ಡ್ ಎಸ್ಟಿಮೇಟಿನಲ್ಲಿ -೧೨೦.೭೧ ಕೋಟಿ ಇದೆ. ೧೫೨ ಕೋಟಿ ರೂಪಾಯಿ ಯೋಜನಾ ಕಡಿತ ಮಾಡಿದರೆ ಡೆಫಿಸಿಟ್ -೨೭೨ ಕೋಟಿ ಆಗಬೇಕಾಗಿತ್ತು. -೧೨೦.೭೧ ಕೋಟಿ ಅಲ್ಲ. The clear picture for 1988-89 should have been minus 327.88 crores plus the component of the plan expenditure, namely, Rs. 152 crores. Therefore, the deficit of minus 480 crores is the real picture before the Karnataka. We cannot expcet anything from this budget.

ಅನೇಕ ಸಂದರ್ಭದಲ್ಲಿ ಇದನ್ನೇ ಹೇಳುವುದು ಅವರಿಗೆ ಅಭ್ಯಾಸ ಆಗಿಹೋಗಿದೆ, ಅದನ್ನೇ ಇವತ್ತಿನ ಆಯವ್ಯಯದಲ್ಲೂ ಕಾಣಿಸಿದ್ದಾರೆ ಪ್ಯಾರಾಗ್ರಾಫ್ ೧೪ರಲ್ಲಿ

> ''ನಮ್ಮ ಸರ್ಕಾರ ೧೯೮೩ರಲ್ಲಿ ಅಧಿಕಾರ ವಹಿಸಿಕೊಂಡಾಗ ೧೧೩.೨೫ ಕೋಟಿರೂಪಾಯಿಗಳಷ್ಟು ಕೊರತೆ ಇತ್ತು. ಇದರ ಜೊತೆಯಲ್ಲಿ ೬೨.೮೦ ಕೋಟಿ ರೂಪಾಯಿಗಳಷ್ಟು ಸಂದಾಯ ಮಾಡದ ಬಿಲ್ಲುಗಳಿದ್ದವು''

ಎಂಬುದಾಗಿ ಹೇಳಿದ್ದಾರೆ. ಇದನ್ನು ಅವರ ಪ್ರತಿ ಬಡ್ಜೆಟ್ಟಿನಲ್ಲೂ ಬರೆದದ್ದೆ ಬರೆದದ್ದು. ಇದನ್ನು ನೋಡಿದಾಗ ನನಗನ್ನಿಸುವುದೇನೆಂದರೆ, ಸನ್ಮಾನ್ಯ ಅರ್ಥ ಮಂತ್ರಿಗಳೂ ಹಾಗೂ ಮುಖ್ಯಮಂತ್ರಿಯವರು ಬಾಕಿ ಬಡ್ಜೆಟ್ ಡಾಕ್ಯುಮೆಂಟ್ ನೋಡುವುದು ಇಲ್ಲವೆಂದು ನನಗೆ ಖಾತರಿಯಾಯಿತು. He does not go through these papers. ಕೊನೆಯಪಕ್ಷ ಅಧಿಕಾರಿಗಳಾದರೂ ನೋಡಬೇಕಲ್ಲ. ಏಕೆಂದರೆ ಯಾರೂ ಇದನ್ನು ನೋಡಿಲ್ಲ ಎಂಬುದು ಇದರಿಂದ ಅರ್ಥವಾಗುತ್ತದೆ. ಆ ಬಗ್ಗೆ ನಾನು ಕೆಲವು ಡಾಕ್ಯುಮೆಂಟ್‌ಗಳನ್ನು ತಂದಿದ್ದೇನೆ. ಅದರ ಬಗ್ಗೆ ಹೇಳಲೇಬೇಕಾಗುತ್ತದೆ. ಯಾವಾಗಲೂ ಸಾರಾಸಗಟಾಗಿ ಹೇಳುತ್ತಲೇ ಬಂದಿದ್ದಾರೆ. ೧೯೮೨-೮೩ರ ಬಡ್ಜೆಟ್ಟಿನಲ್ಲಿ ಏನು ಹೇಳಿದ್ದೇವೆಂದು ಹೇಳುತ್ತೇನೆ. ಏಕೆಂದರೆ ಇವರು ಯಾವಾಗಲೂ ಪೋತ ವಿಚಾರವನ್ನೇ ಹೇಳುತ್ತಿದ್ದಾರೆ. I am referring to the page 30 of Finance Accounts 1982–83. "No overdraft was outstanding at the commencement of the year". That means as on 1–4–83 no overdraft was outstanding. Further,

> "Rs. 316·60 crore were obtained during the year as Overdraft (1982-83) and the entire overdraft was repaid during that year leaving no balance of OD at the end of the year."

How can it remain? ಹಾಗಾದರೆ ಅದು ಉಳಿದುಕೊಳ್ಳುವುದು ಹೇಗೆ when there was nothing? This is referred to by the Accountant General in the Finance Accounts of 1982–83. ೧೯೮೩-೮೪ರಲ್ಲಿ ಬಳುವಳಿಯಾಗಿ ಹೇಗೆ ಬಂತು? There was O.D. at that time. ೧೯೮೨-೮೩ರಲ್ಲಿ ಏನು ಓ.ಡಿ. ಇರಲಿಲ್ಲ, ಆಗಿನ ರೆಗ್ಯುಲೇಷನ್ ಪ್ರಕಾರ ಓ.ಡಿ. ಇರಲಿಲ್ಲ. ೧೯೮೫ರಲ್ಲಿ ೭ದಿವಸಕ್ಕಿಂತ ಹೆಚ್ಚು ಅವಧಿ ಓ.ಡಿ.ಯನ್ನು ಇಟ್ಟುಕೊಳ್ಳಬಾರದು ಎಂಬುದಾಗಿ ರೆಗ್ಯುಲೇಷನ್ ಬಂದದ್ದು ಆಗ. ಮೊದಲು ಆ ರೀತಿಯ ರೆಗ್ಯುಲೇಷನ್ ಇರಲಿಲ್ಲ. ಹಾಗಾದರೆ ೧೯೮೨-೮೩ರಲ್ಲಿ ಓ.ಡಿ. ಇರಲಿಲ್ಲ. ಅದು ಹೇಗೆ ಬಂತು? ಅದನ್ನು ಪುನಃ ಪುನಃ ಹೇಳಬೇಕಾಗುತ್ತದೆ, ಕೆಲವು ಸಾರಿ ಸರ್ಕಾರ ಕಿವುಡಾದರೂ ನಾವು ಹೇಳುವ ಕೆಲಸವನ್ನು ಮಾಡಲೇಬೇಕು. ಜನತೆಗೆ ಅದು ತಿಳಿಯಬೇಕಾಗುತ್ತದೆ. ಆದರೆ ಈ ಸರ್ಕಾರ ಕಲ್ಲುಬಂಡೆಯಾಗಿದೆ ನಮ್ಮಲ್ಲಿ ಜೀವಂತ ಇರತಕ್ಕ ಸರ್ಕಾರ .....

ಶ್ರೀ ವೈ. ಕೆ. ರಾಮಯ್ಯ.—ಬಹುಶಃ ನನಗೆ ತಿಳಿದ ಮಟ್ಟಿಗೆ ಒಬ್ಬ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ತನ್ನ ಪಕ್ಷದಿಂದ ಬದಲಾವಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು ಸನ್ಮಾನ್ಯ ಸದಸ್ಯರಿಗೆ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ, ಮಾನ್ಯ ಮೊಯ್ಲಿಯವರು ಮಾತನಾಡಿದ್ದನ್ನು ನಾನು ಮೊದಲಿನಿಂದಲೂ ಕೇಳುತ್ತಿದ್ದೇನೆ. ಈ ರಾಷ್ಟ್ರದ ಯೋಜನಾ ವೆಚ್ಚದಲ್ಲಿ ಅದೇ ರೀತಿ ರಾಜ್ಯದ ಯೋಜನಾ ವೆಚ್ಚದಲ್ಲಿ ಕಡಿತವನ್ನು ಮಾಡಿದ್ದರಿಂದ ರಾಜ್ಯದ ಅಭಿವೃದ್ಧಿ ಅಧೋಗತಿಗೆ ಕಾರಣವಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ನಮಗೆಲ್ಲರಿಗೂ ಗೊತ್ತಿರುವ ಹಾಗೆ, ಯಾವುದು ಆಗಬೇಕಾಗಿತ್ತೋ ಅದು ಆಗಲಿಲ್ಲ. ಯಾವುದಕ್ಕೆ ಹಣವನ್ನು ತೊಡಗಿಸಬೇಕೋ ಅದಕ್ಕೆ ಹಣವನ್ನು ತೊಡಗಿಸಲಿಲ್ಲ. ಯಾರಿಗೆ ಅಧಿಕಾರವನ್ನು ಕೊಡಬೇಕಾಗಿತ್ತೋ ಅವರಿಗೆ ಅಧಿಕಾರವನ್ನು ಕೊಡಲಿಲ್ಲವೆಂಬುದು ನನ್ನ ಒಂದು ನಂಬಿಕೆ. ಮಾನ್ಯ ಮೊಯ್ಲಿಯವರು ಹಿಂದೆ ೪-೬ ವರ್ಷಗಳ ಕಾಲ ರಾಜ್ಯದ ಆರ್ಥಿಕ ಮಂತ್ರಿಗಳಾಗಿದ್ದವರು. ವಿಷಯವನ್ನು ಬಹಳ ಗಂಭೀರವಾಗಿ ಹೇಳುತ್ತಿದ್ದಾರೆ. ನನ್ನ ಈ ಪ್ರಶ್ನೆಗೆ ಅವರಿಂದ ಸಕಾರಣಗಳು ಸಿಕ್ಕುತ್ತವೆ ಎಂಬ ಉದ್ದೇಶದಿಂದ ಕೇಳುತ್ತಿದ್ದೇನೆ. ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ತೊಡಗಿಸುವ ಸಂದರ್ಭದಲ್ಲಿ ಪ್ರಿಯಾರಿಟೀಸನ್ನು ಗುರುತಿಸುವ ಸಂದರ್ಭದಲ್ಲಿ ನನ್ನವರೆಟ್ಟಿಗೆ ಹೇಳುವುದಾದರೆ, ಈ ರಾಷ್ಟ್ರದಲ್ಲಿ ರಾಕೆಟ್ಟನ್ನು ತಯಾರು ಮಾಡುವುದಕ್ಕೆ ಹಣ ತೊಡಗಿಸಿದ್ದಾರೆ, ಆದರೆ ಈ ರಾಜ್ಯದಲ್ಲಿರತಕ್ಕ ರಾಷ್ಟ್ರದಲ್ಲಿರತಕ್ಕ ಪ್ರಾಥಮಿಕ ಶಾಲಾ ಕಟ್ಟಡವನ್ನು ಕಟ್ಟುವುದಕ್ಕೆ ದುಡ್ಡು ಕೊಟ್ಟಿಲ್ಲ. There is distorted development, ಅಭಿವೃದ್ಧಿಯಾಗಿಲ್ಲ ಅಂತ ಅಲ್ಲ. ಅಭಿವೃದ್ಧಿಯಾಗಿದೆ. ಎಷ್ಟುಮಟ್ಟಿನ ಅಭಿವೃದ್ಧಿಯಾಗಬೇಕೋ ಆ ಮಟ್ಟದಲ್ಲಿ ಅಭಿವೃದ್ಧಿಯಾಗಿಲ್ಲ. ಅವರು ಆಡುವ ಮಾತಿನಲ್ಲೇ ನನ್ನ ತರಹ ದ್ವಂದ್ವ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ಮುಂದಿನ ಸಾರಿ ಇವರನ್ನು ಪಾರ್ಲಿಮೆಂಟಿಗೆ ಕಳುಹಿಸೋಣ. ಇದನ್ನು ಅವರು ಪಾರ್ಲಿಮೆಂಟಿನಲ್ಲಿ ಮಾತನಾಡಿದರೆ ಉಪಯೋಗವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ರಾಮಯ್ಯನವರು ಸರ್ವೇಸಾಧಾರಣವಾದ ಈ ಗಾಳೀರೂಪದ ತತ್ವಗಳನ್ನು ನಮ್ಮ ಸದನದ ಮುಂದೆ ಇಟ್ಟಿದ್ದಾರೆ, ಅವರು ನೇರವಾಗಿ ನಮಗೆಲ್ಲಾ ಅರ್ಥ ಆಗುವ ರೀತಿಯಲ್ಲಿ ಯಾರ ಕೈಯಲ್ಲಿ ಅಧಿಕಾರ ಹೋಗಬೇಕಾಗಿತ್ತು. ಯಾರ ಕೈಗೆ ಅಧಿಕಾರ ಹೋಗಿಲ್ಲ, ಯಾರು ಮಾಡಬೇಕಾಗಿತ್ತು, ಯಾರು ಮಾಡಬೇಕಾಗಿಲ್ಲ ಎಂದಿದ್ದಾರೆ. ಅಧಿಕಾರ ಸ್ವಾತಂತ್ರ್ಯ ಬಂದಾಗಲೇ ಹೋಗಬೇಕಾಗಿತ್ತೆ? ಹಿಂದೆ ಹೋಗಬೇಕಾಗಿತ್ತೇ, ಮುಂದೆ ಹೋಗಬೇಕಾಗಿತ್ತೇ, ಈಗ ಬರಬೇಕಾಗಿತ್ತೇ ಅಥವಾ ನಾಳೆ ಬರಬೇಕೇ ?

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಸದಸ್ಯರಿಂದ ನಮ್ಮ ಚಿಂತನೆಗೆ ಏನಾದರೂ ಪ್ರೋತ್ಸಾಹ ದೊರಕುತ್ತದೆಯೋ ಎಂದು ಹೇಳಿದೆ. ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ತೊಡಗಿಸುವ ಸಂದರ್ಭದಲ್ಲಿ ಕಡಿಮೆ ಹಣವನ್ನು ತೊಡಗಿಸಲಾಗಿದೆ ಎಂದು ಹೇಳಿದ್ದಾರೆ. ಅವರು ನೀರಾವರಿ ಬಗ್ಗೆ, ವಿದ್ಯುತ್ ಬಗ್ಗೆ ಹೇಳಿದ್ದಾರೆ. ಹಾಗೂ ಅದೇ ಸಂದರ್ಭದಲ್ಲಿ ಸಾಮಾಜಿಕ ಭದ್ರತೆ ಬಗ್ಗೆ ಕೂಡಾ ಮಾತನಾಡಿದ್ದಾರೆ. ಸಾಮಾಜಿಕ ಭದ್ರತೆಗೆ ಹಣವನ್ನು ಖರ್ಚು ಮಾಡಿರುವ ಬಗ್ಗೆ ಹೇಳಿದ್ದಾರೆ. ಸರ್ಕಾರ ಯಾವುದೇ ವ್ಯವಸ್ಥೆಯಲ್ಲಿ ಎರಡನ್ನೂ ಒಟ್ಟುಗೂಡಿಸಿಕೊಂಡು ಹೋಗುವುದಕ್ಕೆ ಕಷ್ಟ ಇದೆ. ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಹಣವನ್ನು ಇಟ್ಟಾಗ ಸಾಮಾಜಿಕ ಭದ್ರತೆಗೆ ಹಣ ಖರ್ಚು ಮಾಡುವುದು ಕಡಿಮೆ ಆಗುತ್ತದೆ. ಹಾಗೆಯೇ ಇದಕ್ಕೆ ಹೆಚ್ಚು ಹಣ ಇಟ್ಟಾಗ ಅದಕ್ಕೆ ಕಡಿಮೆ ಆಗುತ್ತದೆ. ಈ ಎರಡರ ಬಗ್ಗೆಯೂ ಅವರು ಮಾತನಾಡಿದ್ದಾರೆ ಈ ಎರಡರಲ್ಲಿ ಯಾವುದಕ್ಕೆ ಪ್ರಾತಿನಿಧ್ಯ ಕೊಡಬೇಕೆಂಬುದು ನಾನು ಕೇಳಿದೆ. ಯಾವುದಕೆ ಆದ್ಯತೆ ಕೊಡಬೇಕು ? Whether we have to earmark more money for development activities such as construction of dams for power and irrigation or for more social securities as we have been directed by the Directive Principles of the Indian Constitution? This is only in academic interest. ಅವರು ಮಾತನಾಡುತ್ತಿದ್ದುದನ್ನು ನಾನು ಕೇಳುತ್ತಿದ್ದೇನೆ. ನನ್ನ ಪ್ರಶ್ನೆ ಇಷ್ಟೇ. ಅಭಿವೃದ್ಧಿ ಕೆಲಸಗಳಿಗೆ ಹಣ ಖರ್ಚು ಮಾಡಿ ಸಾಮಾಜಿಕ ಭದ್ರತೆಗೆ ಖರ್ಚು ಕಡಿಮೆ ಮಾಡಬೇಕೇ ? ಈ ಬಗ್ಗೆ ನಾನು ತಮ್ಮನ್ನು ಕೇಳುತ್ತೇನೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರ ಚಿಂತನೆ ಬಹಳ ಸ್ವಾಗತಾರ್ಹವಾದುದು. ಆದರೆ ಒಂದು ವಿಚಾರವನ್ನು ಅವರು ತಿಳಿದುಕೊಳ್ಳಬೇಕು. ಒಂದೊಂದು ರಾಜ್ಯದ ಆದ್ಯತೆ ಒಂದೊಂದು ರೀತಿ ಇರುತ್ತದೆ. ಕೆಲವು ರಾಜ್ಯಗಳಲ್ಲಿ ವಿದ್ಯುತ್ ಹಾಗೂ ನೀರಾವರಿ ಯೋಜನೆಗಳು ಸಾಕಷ್ಟು ಮುಗಿದಿದ್ದರೆ ಅಂತಹ ಕಡೆ ನೀರಾವರಿ ಮತ್ತು ವಿದ್ಯುತ್‌ಗೆ ಹೆಚ್ಚಿನ ಆದ್ಯತೆ ಇರುವುದಿಲ್ಲ ಇದರಲ್ಲಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವ್ಯತ್ಯಾಸ ಇರುತ್ತದೆ. ಅದೇ ರೀತಿ ದೇಶದಲ್ಲೂ ಕೂಡಾ ಒಂದೊಂದು ಸಮಸ್ಯೆಗಳು ಬಂದಾಗಲೂ ಆದ್ಯತೆ ಬದಲಾವಣೆ ಆಗಬೇಕಾಗುತ್ತದೆ. ಮಾನ್ಯ ಸದಸ್ಯರು ರಾಕೆಟ್ ವಿಚಾರ ಹೇಳಿದರು. ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಬಡತನ ಇದ್ದರೆ ಅದು ನಮ್ಮ ದೇಶದಲ್ಲಿರುವ ಬೌದ್ಧಿಕ ಸಂಪನ್ಮೂಲಗಳ ಕೊರತೆಯಿಂದಲ್ಲ ಅಥವ ಮಾನವ ಸಂಪನ್ಮೂಲದ ಕೊರತೆಯಿಂದಲ್ಲ, ವೈಜ್ಞಾನಿಕವಾಗಿ ಈ ಎರಡರ ಮಧ್ಯೆ ಒಂದು ಸೇತುವೆ ರಚಿಸತಕ್ಕ ಕೊರತೆಯಿಂದ ಮಾತ್ರ ಇವತ್ತು ಬಲಿಷ್ಠ ರಾಷ್ಟ್ರವಾಗಿ ನಮ್ಮ ದೇಶ ಆಗಿಲ್ಲ. ಬಹುಶಃ ಇವತ್ತು ತಾವು ಇಲ್ಲಿಸ್ಟ್ರೇಟೆಡ್ ವೀಕ್ಲಿಯಲ್ಲಿ ಒಂದು ಆರ್ಟಿಕಲ್ ಬಂದಿರುವುದನ್ನು ನೋಡಿದ್ದೀರೇನೋ ಗೊತ್ತಿಲ್ಲ. ಆರ್ಥಿಕ ತಜ್ಞ Batra has said that India will be the strongest nation industrially, agriculturally and politically and it will beat even USA. ಎಂದು ಹೇಳಿದ್ದಾರೆ. ಬಹುಶಃ ಆ ಲಕ್ಷಣಗಳು ಇಲ್ಲದೇ ಇದ್ದರೆ ದೇಶ ಆ ರೀತಿಯಲ್ಲಿ ಆ ಒಂದು ಮಟ್ಟಕ್ಕೆ 2000 ಎ.ಡಿ.ಯಲ್ಲಿ ಆ ಮಟ್ಟಕ್ಕೆ ರಾಷ್ಟ್ರವನ್ನು ಕೊಂಡು ಹೋಗತಕ್ಕ ಒಂದು ವಾತಾವರಣ ಬಹುಶಃ ನಮ್ಮ ರಾಷ್ಟ್ರವನ್ನು ಆಳತಕ್ಕ ಒಂದು ಪಕ್ಷ ಅಥವಾ ಒಂದು ಸರ್ಕಾರ ಮಾಡದೇ ಇದ್ದರೆ how can the eminent economist like Batra, who is as popular as Keynes can say that India can even beat USA in that level?

೧-೦೦ ಪಿ. ಎಂ.

ಆದ್ದರಿಂದ ದೇಶಕ್ಕೆ ಇರತಕ್ಕಂತಹದ್ದು ರಾಜ್ಯಕ್ಕೆ ಇರಲಿಕ್ಕೆ ಸಾಧ್ಯ. ಆದರೆ ರಾಜ್ಯಕ್ಕೆ ಇಗತಕ್ಕದ್ದು ದೇಶಕ್ಕೆ ಇರಲಿಕ್ಕಿಲ್ಲ ಅದನ್ನು ನೀವು ತಿಳಿದುಕೊಂಡು ಕೆಲಸ ಮಾಡಬೇಕು. ಇವತ್ತು ನೀವು ಜಿಲ್ಲಾ ಪರಿಷತ್‌ನ ಸಭೆಗಳಿಗೆ ಹೋಗುತ್ತೀರೆಂದು ಕಾಣುತ್ತದೆ. ಅಲ್ಲಿ ಕೇಂದ್ರ ಸರ್ಕಾರದಿಂದ ಏನು ಡೈರೆಕ್ಷನ್ ಬಂದಿದೆ ಅಂದರೆ ಸೆಂಟ್ರಲ್ ಸೆಕ್ಟರ್ ಯೋಜನೆಯ ಗಾತ್ರವನ್ನು ಹೆಚ್ಚಿಸಿ ಸ್ಟೇಟ್ ಸೆಕ್ಟರ್ ಯೋಜನೆಯ ಗಾತ್ರವನ್ನು ಹೆಚ್ಚಿಸಬೇಡಿಯೆಂದು ಡೈರೆಕ್ಷನ್ ಬಂದಿದೆ. A Directive has been sent to the planning department to each or the district. That means you are incapable of increasing the plan outlay. The centre is in a position to increase the outlay. ರೂರಲ್ ಡೆವಲಪ್‌ಮೆಂಟ್ ಇಲಾಖೆಯನ್ನು ತೆಗೆದುಕೊಳ್ಳಿ. ಗ್ರಾಮೀಣಾಭಿವೃದ್ಧಿಗೆ ಆದ್ಯತೆಯನ್ನು ರಾಜ್ಯಸರ್ಕಾರ ಕೊಟ್ಟಹಾಗೆ ಆಯಿತೇ? ಕೇಂದ್ರಸರ್ಕಾರ ಕೊಟ್ಟಹಾಗೆ ಆಯಿತು. ಈ ಬಗ್ಗೆ ತಾವೇ ಪ್ರಶ್ನೆಯನ್ನು ಹಾಕಿಕೊಳ್ಳಿ. It is your own admission, rather I treat it is confession on the part of the State Government to let down the rural people and a commendation by the State Government to the centre for having given more allocation under the central sector to the rural development. ಈಗ ನಜೀರ್‌ಸಾಬ್‌ರವರು ಈ ರೀತಿ ಸರ್ಕ್ಯುಲರ್ ಕಳುಹಿಸಿ ಅವರು ಯಾವ ಮುಖದಿಂದ ರೂರಲ್‌ಡೆವಲಪ್‌ಮೆಂಟ್ ಬಗ್ಗೆ ಭಾಷಣ ಮಾಡುವುದಕ್ಕೆ ಸಾಧ್ಯವಿದೆ ? ಸೆಂಟ್ರಲ್ ಬಡ್ಜೆಟ್‌ನ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ನಿಮ್ಮ ಮನಸ್ಸಿನಲ್ಲಿ ಪ್ರಶ್ನೆಗಳ ಸರಮಾಲೆಗಳು ಏಳುತ್ತಿವೆ, ಆ ಬಗ್ಗೆ ಸ್ವಲ್ಪ ಸಮಯ ಸಿಕ್ಕರೆ ಮಾತನಾಡಬೇಕೆಂದಿದ್ದೇನೆ absolutely central budget by the Government you just imagine. Central budget $16\frac{1}{2}\%$ growth rate as far as plan allocation is concerned. ಇದು ತಮ್ಮದೇ ಪ್ಲಾನ್ ಅಲೋಕೇಷನ್ That is minus. It may be minus 10.15%. It is plus $16\frac{1}{2}\%$ growth rate as far as the Central Government is concerned. Do you call that Government, a robust Government, yours weakling when compared to the plus $16\frac{1}{2}\%$ growth rate maintained. ಗ್ರೋತ್ ರೇಟ್ ಹೇಳುತ್ತೇವೆ ತಾವು ದಯಮಾಡಿ ನೋಡಬೇಕು. ಇಂಡಸ್ಟ್ರಿಯಲ್ ಗ್ರೋತ್ ರೇಟ್ ತಮ್ಮದು ೧೦.೫ ಪರ್ಸೆಂಟ್

SRI Y. K. RAMAIAH.—Differennce is only degree.

SRI M. VEERAPPA MOILY.—As an academician, try to understand ಪರ್‌ಫಾರ್ಮೆನ್ಸ್ ದಯಮಾಡಿ ನೋಡಿ. ಈಗಲೇ ಈ ವಿಚಾರವನ್ನು ಎತ್ತಿದ್ದರಿಂದ ನಾನು ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ ಈಗ ಗ್ರಾಸ್ ನ್ಯಾಷನಲ್ ಪ್ರಾಡೆಕ್ಟ್ ಅಟ್ ೧೯೮೦-೮೧. ೧೯೭೯ರಲ್ಲಿ ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ it was minus 4.7. Then it went on picking up 2.6 ೧೯೮೨-೮೩ರಲ್ಲಿ ೨.೬, ೧೯೮೩-೮೪ರಲ್ಲಿ ೭.೭, ೧೯೮೪-೮೫ರಲ್ಲಿ ೩.೧. ೧೯೮೫-೮೬ರಲ್ಲಿ ೪.೯, ೧೯೮೬-೮೭ರಲ್ಲಿ ೪.೧೮ ಇದಕ್ಕೆ ಏನು ಹೇಳುತ್ತೀರಿ ? ದೇಶದ ಸೂತ್ರ ಯಾರ ಕೈಯಲ್ಲಿರಬೇಕೋ ಅವರ ಕೈಯಲ್ಲಿರಬೇಕು ಅಧಿಕಾರದ ಸೂತ್ರ ನಿಮ್ಮ ಕೈಯಲ್ಲಿ ಇದ್ದರೆ ಮೈನಸ್ ೨೫ಕ್ಕೆ ಹೋಗುತ್ತಿದ್ದಿರೇನೋ ಗೊತ್ತಿಲ್ಲ ಅದಕ್ಕೆ ನಾನು ಹೇಳುವುದು ನಿಮಗೆ ಕಷ್ಟ, ೧೯೭೯ರಲ್ಲಿ ಕೇಂದ್ರದಲ್ಲಿದ್ದದನ್ನು ರಾಜ್ಯದಲ್ಲಿ ಮರುಕಳಿಸುತ್ತಿದ್ದೀರಾ ಎಂದು ನನಗೆ ಬೇಸರ, ರಾಜ್ಯದ ಹಿತದೃಷ್ಟಿಯಿಂದ ತಮ್ಮ ಹತ್ತಿರ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರ್ ಎಲ್. ಜಾಲಪ್ಪ.—ಆಗ ರೂಪಾಯಿ ವ್ಯಾಲ್ಯು ಏನಿತ್ತು ?

SRI M. VEERAPPA MOILY.—To Consider the rupee value you are not a student of economics.

SRI R. L, JALAPPA.—I am not only student of economics but also a student of psychology. Let him know.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಧ್ಯಕ್ಕೆ ನಿಮ್ಮ ಕೈಯಲ್ಲಿ ಬಡಿಗೆ ಇದೆ ಅದನ್ನು ನಿಬಾಯಿಸಿ ಕೊಂಡು ಹೋಗಿ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಗ್ರಿಕಲ್ಚರಲ್ ಪ್ರೊಡಕ್ಷನ್ ೧೯೭೯ರಲ್ಲಿ you are not a party in 1979. ನೀವು ಏತಕ್ಕೆ ಕಳವಳ ಪಡುತ್ತೀರಿ? We should have complimented

ಶ್ರೀ ಆರ್. ಎಲ್. ಜಾಲಪ್ಪ.—ಇವರ ಕೈಯಲ್ಲಿ ರಾಷ್ಟ್ರವಿದ್ದರೆ ಬಹಳ ದಿವಸ ಉಳಿಯುವುದಿಲ್ಲ

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಒಳ್ಳೆಯ ಕೆಲಸ ಮಾಡುತ್ತಾ ಇದ್ದರೆ ನಾವು ಅಭಿನಂದಿಸ ಬಹುದಿತ್ತು. ಆದರೆ ನಿಮ್ಮಿಂದ ಏನೂ ಬದಲಾವಣೆ ಮಾಡುವುದಕ್ಕೆ ಆಗಿಲ್ಲವೆಂದು ಹೇಳುತ್ತೇನೆ. ಈಗ ಅಗ್ರಿಕಲ್ಚರಲ್ ಪ್ರೊಡಕ್ಷನ್ ೧೫.೨ ೭೯ರಲ್ಲಿ. ೮೩-೮೪ರಲ್ಲಿ ೧೩.೭ ಪರ್ಸೆಂಟ್ ಆಮೇಲೆ ಫುಡ್ ಪ್ರೊಡಕ್ಷನ್ (—)೧೬ ಪರ್ಸೆಂಟ್ ಇತ್ತು, 85-86 we have brought upto 3 4% Industrial production was (—) 1.7% and today it is 10.2% ಇದಕ್ಕೆ ಏನು ಉತ್ತರ ಕೊಡುತ್ತೀರಿ? ಯಾವ ವಿಚಾರದಲ್ಲಿ ನೋಡಿದರೂ ಕೂಡ ಹೀಗೆ ಇದೆ. ಅಧ್ಯಕ್ಷರೇ, ನಮ್ಮ ರೆಪ್ಯುಟೇಶನ್ ಏನೆಂದು ಹೇಳಿದರೆ 'ಪ್ಲಸ್' ಆದರೆ ಇವರ ರೆಪ್ಯುಟೇಶನ್ ಏನೆಂದರೆ 'ಮೈನಸ್' ಶ್ರೀ ರಾಮಯ್ಯನವರೇ ಈ ಸರ್ಕಾರದಲ್ಲಿ ತಮ್ಮಂಥ ಚಿಂತನಶೀಲರು ಇರುವಾಗ ಸ್ವಲ್ಪ ಕುಳಿತುಕೊಂಡು ಎಲ್ಲೆಲ್ಲಿ ಕಿವಿ ಹಿಂಡಬೇಕು, ಎಲ್ಲಿ ಶಾಕ್‌ವೇವ್ ಮಾಡಬೇಕೋ ಅದನ್ನು ಮಾಡಿ. ಇದನ್ನು ಮಾಡುವುದಕ್ಕೆ ನೀವು ಹೆದರಬೇಡಿ. ರಾಜ್ಯದ ಜನರ, ರೈತರ ಹಿತಾಸಕ್ತಿಯನ್ನು ಕಾಪಾಡಲು ಹೆಚ್ಚಿನ ಆದ್ಯತೆಯನ್ನು ನೀವು ಕೊಡಬೇಕು. ಅದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಅದಕ್ಕಾಗಿ ಸಂಘರ್ಷಣೆಯನ್ನು ಒಳಗೂ ಮಾಡಬೇಕು ಮತ್ತು ಹೊರಗೂ ಮಾಡಬೇಕು. ಏಕೆ ಈ ಪರಿಸ್ಥಿತಿ ಆಗುತ್ತಿದೆ ? Why you are landing in that ? People have witnessed nightmare in industrial production, agricultural production and the whole economy of the country. Why you are making the people feel that it is repeating in Karnataka. ಇದನ್ನು ನೀವು ಬದಲಾವಣೆ ಮಾಡಬೇಕೆಂದು ಹೇಳಿದ್ದರಿಂದ ಹೇಳಿದ್ದೇನೆಯೇ ಹೊರತು, ಇಲ್ಲದಿದ್ದರೆ ಹೇಳುತ್ತಿರಲಿಲ್ಲ. ನೀವು ಪ್ರಸ್ತಾಪ ಮಾಡಿದ್ದರಿಂದ ಈ ವಿಷಯವನ್ನು ತಂದಿದ್ದೇನೆ, ಇಲ್ಲದಿದ್ದರೆ ತರುತ್ತಿರಲಿಲ್ಲ. It will be a bulky affair. I never wanted to bring it. ಈಗ ನೀವು ೮೩ರಲ್ಲಿ ಇಷ್ಟು ಹಣ ಬಾಕಿ ಇಟ್ಟು ಹೋದರು ಎಂದು ಹೇಳಬಹುದು. It is according to the AG's accounts only. ಲೋನ್ಸ್ ಅಂಡ್ ಅಡ್ವಾನ್ಸ್‌ನಲ್ಲಿ ಡೆಟ್ ಪೊಜಿಷನ್ ಹೇಳಬಹುದು. ಅಥವಾ ಆರ್. ಬಿ. ಐ. ದು ಅಲ್ಲ. ಇವರಿಗೆ ಗವರ್ನಮೆಂಟ್ ಆಫ್ ಇಂಡಿಯಾದವರು ಸಾಲ ಕೊಟ್ಟಿದ್ದು ೮೦ ಕೋಟಿಯಷ್ಟಿತ್ತು. ಇದನ್ನು ನಾವು ಸಂದಾಯ ಮಾಡಬೇಕಾದ ಪರಿಸ್ಥಿತಿ ಬಂತು ಎಂದು ಹೇಳಬಹುದು. ಆದರೆ ಅಂಡರ್ ದಿ ಟೇಬಲ್ ಕೊಟ್ಟಿದ್ದು ಎಂದು ಹೇಳುವುದಕ್ಕೆ ಆಗುವುದಿಲ್ಲ. It should be either loan side or RBI. I can tell you the debt position. It is again the Finance's accounts of various years, ೧೯೮೦-೮೧ ರದ್ದು ತೆಗೆದುಕೊಳ್ಳಬೇಕಾದರೆ ೮೦-೮೧ರಲ್ಲಿ Receipts during the year. Ways and means advances from RBI 44 crores. Loans and advances from Govt. of India 147.50 crores. ಈ ಡಿಪ್ರೆಶನ್ ಅನ್ನು ನೀವು ತೆಗೆದುಕೊಳ್ಳಬೇಕಾಗಿಲ್ಲ. ಏಕೆಂದರೆ ಇದು ನಾರ್ಮಲ್ loans and advances either from the Govt. of India or from RBI can you find any abnormality ನಿಮ್ಮನ್ನು ಸಾಲಗಾರರನ್ನಾಗಿ ಮಾಡಿಹೋಗಿದ್ದಾರೆ ಎಂದು ಹೇಳುವುದಕ್ಕೆ ಒಂದು ಬೇಸಿಸ್ ಬೇಕಲ್ಲ ? ೮೧-೮೨ರ ways and means advances 464.24 crores, Loans and advances 134.30 crores. ಇದೆಲ್ಲ ನಾರ್ಮಲ್. ಅಂತಹ ಏರಿಕೆಯೂ ಇಲ್ಲ, ಕಡಿಮೆಯೂ ಇಲ್ಲ. ೮೨-೮೩ it is a relevant period. Ways andmeans advances 436.76 crores. 81-82 RBI loans advances 175 crores. Even this is absolutely normal. ಇವರದ್ದು ೬೩,......................೧೫೩ ಕೋಟಿ. ಇವರ ಕಾಲಕ್ಕೆ ಬರೋಣ, 1-4-84 was absolutely your period. Ways and means advances from RBI 662.55 crores as against 436 crores.

Rs. 250 crores more they have borrowed by way of ways and means from the Reserve Bank of India. In 1983-84 from the Government of India it is Rs. 225·67 crores as against Rs· 175·41 crores· Graph goes on like this. In 1984-85 Rs.886 crores from the RBI andRs·371 crores from the Government of India. In 1985-86 it is Rs.675 crores from RBI and from the Government of India it is Rs. 710 crores. ಹಾಗಾದರೆ ಸಾಲಗಾರರನ್ನಾಗಿ ನೀವು ಮಾಡಿದಿರೋ ಅಥವಾ ನಾವು ಮಾಡಿದೆವೋ ? ಒಟ್ಟಾರೆ ಸಾಲದ ಬಲೆಯಲ್ಲಿ ಕರ್ನಾಟಕ ರಾಜ್ಯದ ಜನರನ್ನು ಬಂಧಿಸಿರುವವರು ನೀವೇ ವಿನಹ ಕಾಂಗ್ರೆಸ್ ಸರ್ಕಾರವಲ್ಲ. ವರ್ಷೇವರ್ಷೇ ಎಷ್ಟು ಸಾಲ ತೆಗೆದುಕೊಂಡಿದ್ದೀರಿ, ಎಷ್ಟು ರೀಪೇಮೆಂಟ್ ಮಾಡಿದ್ದೀರಿ ಇವತ್ತು ಕರ್ನಾಟಕ ರಾಜ್ಯದ ಸರ್ಕಾರವನ್ನು ಚಲಿಸದ ಸರ್ಕಾರವನ್ನಾಗಿ ಮಾಡಬೇಕೆಂಬ ಸಂಚು ಇದೆ. ರೈತರಿಗೆ ಯಾವುದೇ ರೀತಿಯ ಸಹಾಯ ಮಾಡುವುದಕ್ಕಾಗಿಲ್ಲ. ಹೀಗಾಗಿ ಇಡೀ ಕರ್ನಾಟಕ ರಾಜ್ಯವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಸದೆಬಡಿಯುವ ಘಾತುಕ ಕೆಲಸವನ್ನು ಮಾಡುತ್ತಿದ್ದೀರಿ ಎಂದು ಹೇಳಿದರೆ, ಅದು ಸಣ್ಣ ಮಾತಾಗುವುದಿಲ್ಲ. It fits into your activities... ಹೀಗಾದರೆ ಏನು ಡೆವಲಪ್‌ಮೆಂಟ್ ಮಾಡುವುದಕ್ಕೆ ಬರುತ್ತದೆ. You are doubling it. It is going by geographical progression. The dominant and the exclusive reason is the total gross mismanagement of your finances. ನೀವು ಮಾಡುವ ಕ್ರಮ ಇದು ನೀವು ಎಷ್ಟು ಸಾಲ ತೆಗೆದುಕೊಂಡಿದ್ದೀರಿ ಜನರನ್ನು ಎಷ್ಟು ಸಾಲಗಾರರನ್ನಾಗಿ ಮಾಡಿದ್ದೀರಿ ? ಕರ್ನಾಟಕದ ರೈತರನ್ನು ಸಾಲಗಾರರನ್ನಾಗಿ ಮಾಡಿ, ಅದನ್ನು ತಪ್ಪಿಸುವುದಕ್ಕೆ ಈ ರೀತಿ ಹೇಳುತ್ತಿದ್ದೀರಿ. This is from the finance accounts of the Accountant General. It is not mine. Following years' statistics. ನನ್ನ ಹತ್ತಿರವಿದೆ. ಅದನ್ನು ಈಗ ವಿವರಿಸುವುದಕ್ಕೆ ಹೋಗುವುದಿಲ್ಲ. ತಮ್ಮ ಯಾವುದೇ ಒಂದು ಕಂಪನಿಯಾಗಲೀ ಅಥವಾ ಕೆ. ಇ. ಬಿ ಆಗಲೀ ಯಾವ ತರಹದಲ್ಲಿ ನಡೆಸಿಕೊಂಡು ಹೋಗುತ್ತಿದ್ದೀರಿ ಎಂಬುದಕ್ಕೆ ಒಂದೆರಡು ಉದಾಹರಣೆ ಕೊಡುತ್ತೇನೆ. ನಿಮ್ಮ ಕೈಗೆ ಸರ್ಕಾರ ಬಂದಾಗ, ಏಕೆ ಈ ಬದಲಾವಣೆ ಆಗಿದೆ ಎಂಬುದನ್ನು ತಾವು ಹೇಳಬೇಕು· ಸನ್ಮಾನ್ಯ ಲಕ್ಷ್ಮೀನರಸಿಂಹಯ್ಯನವರೂ ಇಲ್ಲಿಯೇ ಇದ್ದಾರೆ. ನಾವು ೧೯೮೩–೮೪ ರಲ್ಲಿ ಅಧಿಕಾರ ಬಿಟ್ಟುಕೊಟ್ಟಾಗ, ಕೆ. ಇ. ಬಿ, ನಲ್ಲಿ ೧೯೭೯–೮೦ ರಲ್ಲಿ it was +Rs. 19.37 crores profit· In 1980-81 it was +Rs.9.18 crores, in 1981-82 it was Rs. 10.20 crores profit, in 1982-83 it was +Rs. 19 37 crores. ನಿಮ್ಮ ಕೈಗೆ ಅಧಿಕಾರ ಬಂದೇ ಬಂತು, ಮೈನಸ್ ಆಗುತ್ತಾ ಹೋಯಿತು. ಇದನ್ನು ಸುಧಾರಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ಒಂದು ವರ್ಷ ಪ್ರಯತ್ನ ಪಟ್ಟಿರಿ. In 1983-84 it was —Rs, 17.55 crores, in 1984-85 it was —Rs· 22.64 crores, in 1985-86 it was —Rs. 63 crores, in 1986-87 it was —Rs· 102.37 crores· Afterwords it became Rs.150 crores and Rs. 180 crores. ೨೦೦ ಕೋಟಿ ನಷ್ಟ. ಇದು ತಾವು ಮಾಡತಕ್ಕಂಥ ಕಾರ್ಯ ನಿರ್ವಹಣೆ, ಅಥವಾ ಆಡಳಿತ ವೈಖರಿ ಎಂದು ಹೇಳಲೇ ? ಈ ರಾಜ್ಯವನ್ನು ಕಟ್ಟತಕ್ಕ ಪ್ರಯತ್ನದಲ್ಲಿ ಒಂದು ಸಂಘರ್ಷಣೆಯ ದಾರಿಯಲ್ಲಿ ಇರತಕ್ಕ ಪ್ರಯತ್ನ ಎಂದು ಹೇಳಲೇ ? ತಾವು ಉತ್ತರ ಕೊಡುವುದಕ್ಕೆ ಮುಂಚೆ ಇದನ್ನು ಮ್ಯಾನೇಜ್ ಮಾಡುವುದಕ್ಕೆ ಪ್ರಯತ್ನ ಮಾಡಿ. ಈ ಅಂಕಿ ಅಂಶಗಳನ್ನು ನಾನು ಹೇಳಬೇಕಾಗಿಲ್ಲ· It is so evedent. ನಿಮ್ಮ ಎದುರಿಗಿರತಕ್ಕ ಕನ್ನಡಿಯಲ್ಲಿ ನೋಡತಕ್ಕ ಮುಖ. ಇದು ನಿಮ್ಮ ಮುಖ ಅಲ್ಲವೆಂದು ಹೇಳುತ್ತೀರಾ ? Do you say 'it is not my face and somebody else's face' ? It is so clear. ಏನಾದರೂ ಇಂಪ್ರೂಮೆಂಟ್ ಮಾಡಿದ್ದೀರಾ ? T and D losses ಬಗ್ಗೆ In 1983-84 it was 21·47% in 1984-85 it was 22% ೧೯೮೪/೧೯೮೫ ರಲ್ಲಿ ೨೨ ಪರ್ಸೆಂಟ್, ೮೫–೮೬ ರಲ್ಲಿ ೨೨.೫೦ ಪರ್ಸೆಂಟ್ ಮತ್ತು ೧೯೮೬–೮೭ ರಲ್ಲಿ ೨೩ ಪರ್ಸೆಂಟ್, ಈಗ ಟಿ ಅಂಡ್ ಡಿ, ಲಾಸ್ ೨೫ ಪರ್ಸೆಂಟ್ ಆಗಿರಬಹುದು. Look at the graph. ನಿಮ್ಮ ಕಛೇರಿಯಲ್ಲಿ ಒಂದು ಗ್ರಾಫ್ ಇಟ್ಟುಕೊಳ್ಳಿ, ಪ್ರತಿದಿನ ಗ್ರಾಫ್ ನೋಡಿಕೊಂಡು ಬನ್ನಿ. ಆಗ ಬಹುಶಃ ನೀವು ನಮ್ಮ ಜೊತೆ ಇಲ್ಲಿ ಬಂದು ವಾದಕ್ಕೆ ಇಲ್ಲವೇ ಚರ್ಚೆಗೆ

ಇಳಿಯುವುದಿಲ್ಲ. ಆಗಲಿ ಒಂದು ವೇಳೆ ಕೆ. ಇ. ಬಿ. ಯಲ್ಲಿ ಪಂಪ್‌ಸೆಟ್ಸ್ ಜಾಸ್ತಿಕೊಟ್ಟಿದ್ದೇವೆ, ಅಭಿವೃದ್ಧಿ ಮಾಡಿದ್ದೇವೆ ಎಂದರೆ, ಅಂತಹದೇನಾದರೂ ಇದ್ದರೆ ಅದು ಪಾಸಿಟೀವ್ ಆನ್ಸರ್. ಈಗ ಕೆ. ಇ. ಬಿ. ಯಲ್ಲಿ ಡೆವಲಪ್‌ಮೆಂಟಲ್ ಕ್ಯಾಪಿಟಲ್ ಔಟಲೇ ೧೯೮೨ ರಲ್ಲಿ ೬೨ ಕೋಟಿ ೮೩ ರಲ್ಲಿ ೬೮ ಕೋಟಿ ೮೪ ರಲ್ಲಿ ೭೦ ಕೋಟಿ ೮೫ ರಲ್ಲಿ ೭೫ ಕೋಟಿ ಹೀಗೆ ಕೇವಲ ೨ ಕೋಟಿ, ೫ ಕೋಟಿ, ೩ ಕೋಟಿ ಜಾಸ್ತಿ ಹೀಗೆ ಹೋಗುತ್ತಿದೆ. Gradually it is going down. It cannot even contain the inflation. ಅಭಿವೃದ್ಧಿಗಾದರೂ ಹೆಚ್ಚು ಹಣ ಹಾಕಿದ್ದಾರೆಯೇ ಎಂದರೆ ಅದೂ ಇಲ್ಲ. ಇವತ್ತು. the some thing is going on with the Karnataka Power Corporation. ೧೯೮೧-೮೨ ರಲ್ಲಿ ಪ್ಲಸ್ ೨೭ ಕೋಟಿ ಲಾಭ ಆಗಿದೆ. ನೆಕ್ಸ್ಟ್ ಇಯರ್ ಮೈನಸ್ ೫.೯೭ ಕೋಟಿ ೧೯೮೪-೮೫ ರಲ್ಲಿ ಪ್ಲಸ್ ೧೫ ಕೋಟಿ ೧೯೮೫-೮೬ ರಲ್ಲಿ ಮೈನಸ್ ೨೨ ಕೋಟಿ ೧೯೮೬-೮೭ ನಲ್ಲಿ ಮೈನಸ್ ೩೨ ಕೋಟಿ, ೧೯೮೭-೮೮ ನಲ್ಲಿ ಮೈನಸ್ ೬.೦೯ ಕೋಟಿ ಆದುದರಿಂದ ಇದನ್ನೆಲ್ಲಾ ನೋಡಿದರೆ ಯಾವುದೂ ಕೂಡಾ ಅಷ್ಟೇ ಆಗಿದೆ. ಯಾವುದರಿಂದ ಪ್ರಾಮುಖ್ಯವಾಗಿ ಕರ್ನಾಟಕ ರಾಜ್ಯವನ್ನು ಕಟ್ಟಲಿಕ್ಕೆ ಸಾಧ್ಯ ಇದೆ, ಕೆ. ಇ. ಬಿ. ಇರಬಹುದು, ಕೆ. ಪಿ. ಸಿ. ಇರಬಹುದು, ಕೆ. ಎಸ್. ಆರ್. ಟಿ. ಸಿ. ಇರಬಹುದು, ಈ ಸಂಸ್ಥೆಗಳು ಇವತ್ತು ಕರ್ನಾಟಕ ರಾಜ್ಯವನ್ನು ಆರ್ಥಿಕವಾಗಿ ಸುದೃಢವಾಗಿ ಕಟ್ಟಲು ಕಾರಣೀಭೂತವಾದಂಥ ಸಂಸ್ಥೆಗಳಾಗಿವೆ. ಇದೆಲ್ಲಾ instead of contributing to the strength they are going minus side. They are not contributing to the plan. ಅವರು ಪ್ಲಾನ್ ಮಾಡಲಿಕ್ಕೆ ಆಗುತ್ತಿಲ್ಲ. ಇವತ್ತಿನ ಮಟ್ಟಿಗೆ ಎಲ್ಲಾ ಮುಖ್ಯವಾದ ಪಬ್ಲಿಕ್ ಸೆಕ್ಟರ್‌ಗಳೆಲ್ಲಾ ಲಾಸ್‌ನಲ್ಲಿವೆ ನಾನು ಎಲ್ಲಾ ಪಬ್ಲಿಕ್ ಸೆಕ್ಟರ್‌ಗಳ ಬಗ್ಗೆ ಹೇಳುವುದಿಲ್ಲ. ಕೈಗಾರಿಕೆಗಳು, ಹೌಸಿಂಗ್ ಬೋರ್ಡ್, ಕೆ. ಇ. ಬಿ., ಕೆ. ಪಿ. ಸಿ., ಕೆ. ಎಸ್. ಆರ್. ಟಿ. ಸಿ. ಇದನ್ನೆಲ್ಲಾ ತೆಗೆದುಕೊಂಡರೆ ಇವತ್ತು ಸುಮಾರು ೩೦೦ ಕೋಟಿ ರೂಪಾಯಿ every year they should have contributed and planned Karnataka's development. ೩೦೦ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಖಜಾನೆಯಿಂದ ಕೊಡಬೇಕು, ಇಲ್ಲದೇ ಹೋದರೆ ಕಾರ್ಯಕ್ರಮ ಇಲ್ಲ. Just imagine. That means they should have contributed, Rs. 300 crores, instead of minus Rs. 300 crores. It is an erosion of Rs. 600 crores which otherwise should have come for the development of the state. Look at the tragedy of this state. ಇದನ್ನು ರಿಯಲೈಸ್ ಮಾಡಿಕೊಳ್ಳತಕ್ಕ ಒಂದು ವಿಚಾರ ಕೂಡಾ ನೀವು ಮಾಡುತ್ತಿಲ್ಲ ಎಂದರೆ ನಾವು ಯಾವ ಪರಿಸ್ಥಿತಿಗೆ ಬಂದಿದ್ದೇವೆ: Just imagine. ೪-೫ ಪಬ್ಲಿಕ್ ಸೆಕ್ಟರ್‌ಗಳಲ್ಲಿ ಆರುನೂರು ಕೋಟಿ ರೂಪಾಯಿಗಳು ಒಂದು ಕಡೆ ಸೋರಿ ಹೋಗುತ್ತದೆ ಎಂದು ಹೇಳಿದರೆ, ಕರ್ನಾಟಕವನ್ನು ಕಟ್ಟತಕ್ಕಂಥ ಆಧಾರ ಸ್ಥಂಭಗಳಾದ ಇವುಗಳನ್ನು ಇವತ್ತು they are being ruined. They are being destroyed and you want to enjoy on the ruins of these pillars of development. ಇದು ನಡೆಯುತ್ತಿದೆ. ಇದು ನಿಮ್ಮ ಸ್ಥಿತಿ. I say absolutely on facts, and absolutely no exagration whatsoever. ಇದನ್ನು ಕಟ್ಟಲಿಕ್ಕೆ ಏತಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. When I was the Finance Minister. ಆಗ ಅಶ್ವಥ್‌ರೆಡ್ಡಿಯವರು ಪವರ್ ಮಿನಿಸ್ಟರ್ ಆಗಿದ್ದರು. Even though it was not my portfolio I used to review KEB every 15 days. I used to request Sri Ashwath Reddy to be present. ನಾನು ಕೆ. ಇ. ಬಿ. ಯನ್ನು ೧೫ ದಿವಸಕ್ಕೆ ಒಂದು ಸಲ ರಿವ್ಯೂ ಮಾಡುತ್ತಿದ್ದೆ I knew I have got to build these institutions. ಆದರೆ ಇವರು ಯಾವಾಗ ರಿವ್ಯೂ ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. According to me Hon. Chief Minister, as a Finance Minister has no time at all. ಈ ದೇಶದ ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ ಇರುವ, ರಾಜಕೀಯ ಕ್ಷೇತ್ರದಲ್ಲಿ ಅವರು ಇರುವಾಗ, ಈ ಆರುನೂರು ಕೋಟಿ, ಸಾವಿರ ಕೋಟಿ ಕರ್ನಾಟಕ ರಾಜ್ಯದ್ದು ಯಾವ ಲೆಕ್ಕ ಅವರಿಗೆ. ಅವರು ಇದನ್ನು ಹೇಳಬಹುದು. ಆದುದರಿಂದ ಇದಕ್ಕೆ ಇವತ್ತು ತಾವು ಏನು ಉತ್ತರ ಕೊಡುತ್ತೀರಿ ಜಾಲಪ್ಪನವರೇ ?

ಶ್ರೀ ಎ. ಲಕ್ಷ್ಮೀಸಾಗರ್,— ಉತ್ತರ ಕೊಡೋಣ.

ಶ್ರೀ ಎಂ. ವೀರಪ್ಪಮೊಯಿಲ್ಲಿ.—ನೀವು ಹಿಂದೆ ಉತ್ತರ ಕೊಟ್ಟಿರುವುದದು ನೋಡಿದ್ದೇನೆ. ಇದರ ಪರಿಜ್ಞಾನ ಕೂಡ ನಿಮಗೆ ಇಲ್ಲ. ಆದ್ದರಿಂದ ನೀವು ಉತ್ತರ ಕೊಡುವುದು ಬೇಡ ಅದು ದೊಡ್ಡ ಪ್ರಶ್ನೆಯಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಹಣಕಾಸಿನ ಮಂತ್ರಿಗಳಾಗಿದ್ದವರು, ತಮಗೆಲ್ಲಾ ಅಂಕಿ ಅಂಶಗಳು ಗೊತ್ತಿವೆ. ನಮಗೆ ಗೊತ್ತಿಲ್ಲ. ಬಡ್ಜೆಟ್ ಮಂಡಿಸುವಾಗ ಫಾರಿನ್‌ನಿಂದ ಹಣ ತಂದರು. ೨೫೨೦ ಕೋಟಿ ರೂಪಾಯಿಗಳಷ್ಟು ರೇಟ್ ಜಾಸ್ತಿ ಮಾಡಿಕೊಂಡರು. ಪೆಟ್ರೋಲ್, ಡೀಸಲು ಇತ್ಯಾದಿ ಗಳ ಮೇಲೆ. ಆ ಮೇಲೆ ೪ ಸಾವಿರ ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ಸ್ ಅಲ್ಲಿವೆ. The entire country is in doldrmms................ಕೇಂದ್ರ ಸರ್ಕಾರವಾಗಬಹುದು, ಯು. ಪಿ. ಸರ್ಕಾರವಾಗಿರಬಹುದು, ಮಹಾರಾಷ್ಟ್ರ ಸರ್ಕಾರವಾಗಿರಬಹುದು, ಆಂಧ್ರ ಪ್ರದೇಶದ ಸರ್ಕಾರ ವಾಗಿರಬಹುದು, ಅಂಕಿ ಅಂಶಗಳು ನಮಗೆ ಗೊತ್ತಿಲ್ಲ. ಆದರೂ ತಿಳಿದು ಕೊಳ್ಳುವಷ್ಟು ಅಲ್ಪ ಸ್ವಲ್ಪ ಜ್ಞಾನ ಇದೆ, ಸೋಮವಾರ ಉತ್ತರ ಕೊಡೋಣ,

ಶ್ರೀ ಎಂ. ವೀರಪ್ಪಮೊಯ್ಲಿ.—ಯಾವ ಮುಖ ಇಟ್ಟುಕೊಂಡು ಉತ್ತರ ಕೊಡುವುದು. you are all paper tigers.

ಛೇರ್ಮನ್.—ತಾವು ಈಗ ಒಂದು ಗಂಟೆ ಮಾತನಾಡಿದ್ದೀರಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಕ್ಷಮಿಸಿ, ನಾನು ವಿಷಯ ಆರ್ಗನೈಜ್ ಮಾಡಿ ಬಹಳ ಸೂಕ್ಷ್ಮ ವಾಗಿ ಹೇಳಬೇಕೆಂದು ಇದ್ದೆ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಭಾಷಣ ಮಾಡಿ ನಾನು ಹೋಗಬೇಕಾಗಿದ್ದವನು ಇಲ್ಲೇ ಇದ್ದೇನೆ, ನಿಮ್ಮ ಭಾಷಣ ಕೇಳಲು,

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈಗ ಪಬ್ಲಿಕ್ ಸೆಕ್ಟಾರ್‌ನಲ್ಲಿ ಡೆವಲಪ್ ಮೆಂಟಲ್ ಔಟ್‌ಲೇ ಮತ್ತು ನಾನ್ ಡವಲಪ್‌ಮೆಂಟ್‌ಲ್ ಔಟ್‌ಲೇ ಯಲ್ಲಿ ಕೇಂದ್ರ ಸರ್ಕಾರದು ಬಿಟ್ಟು ನೀವು ಏನು ಮಾಡಿದ್ದೀರಿ ? ೧೯೮೨-೮೩ನೇ ಸಾಲಿನಲ್ಲಿ ನಾನ್ ಡೆವಲಪ್‌ಮೆಂಟಲ್ ಎಕ್ ಪೆಂಡೀಚರ್ ೨೯.೧ ಪರ್ಸೆಂಟಿನಷ್ಟು ಮಾಡಿದ್ದೀರಿ. I have brought to the less. may be a record in the country.

ಆ ಮೇಲೆ ೧೯೮೩-೮೪ನೇ ಸಾಲಿನಲ್ಲಿ ೩೧ ಪರ್ಸೆಂಟ್ ನಾನ ಡೆವಲಪ್‌ಮೆಂಟ್ expenditure ಅದೇ ರೀತಿ ೧೯೮೫-೮೬ನೇ ಸಾಲಿನಲ್ಲಿ ೩೪ ಪರ್ಸೆಂಟ್ ಆ ಮೇಲೆ ೧೯೮೬-೮೭ನೇ ಸಾಲಿನಲ್ಲಿ ೩೪ ಪರ್ಸೆಂಟ್.ನಾನ್ ಡವಲಪ್‌ಮೆಂಟ್ ನಲ್ಲಿ ಖರ್ಚು ಮಾಡಿರತಕ್ಕಂಥಾದ್ದು, ಇನ್ನು ಜಲವಿದ್ಯುತ್ ಮತ್ತು ಅಭಿವೃದ್ಧಿಗೆ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. Both power and Irrigation. II am telling-y u. ೧೯೮೨-೮೩ನೇ ಸಾಲಿನಲ್ಲಿ ಪ್ರೈವೈಡ್ ಮಾಡಿದ್ದು ೪೪.೧೨ ಪರ್ಸೆಂಟ್. ಪೊ ಮೇಲೆ ಅದು ಕಡಿಮೆಯಾಗುತ್ತಾ ಬಂತು. ೧೯೮೩-೮೪ನೇ ಸಾಲಿನಲ್ಲಿ ೩೬.೯೧ ಪರ್ಸೆಂಟ್. ೧೯೮೪-೮೫ನೇ ಸಾಲಿನಲ್ಲಿ ೩೪.೯೧ ಪರ್ಸೆಂಟ್. ೧೯೮೫-೮೬ನೇ ಸಾಲಿನಲ್ಲಿ ೩೪.೯ ಪರ್ಸೆಂಟ್ ೧೯೮೬-೮೭ನೇ ಸಾಲಿನಲ್ಲಿ ೩೭ ಪರ್ಸೆಂಟ್. ರಿವೈಜ್ ಮಾಡಿದಂತೆ ಕಡಿಮೆ ಆಯಿತು. ೧೯೮೭-೮೮ರಲ್ಲಿ ಎಷ್ಟು ಎಂದು ಗೊತ್ತಿದೆ ಇದಕ್ಕೆ ಏನು ಹೇಳುತ್ತೀರಿ.

ಶ್ರೀ ವೈ. ಕೆ. ರಾಮಯ್ಯ.—ಈ ಸಾರಿ ೪೪ ಪರ್ಸೆಂಟ್.

ಶ್ರೀ ಎಂ. ವೀರಪ್ಪಮೊಯ್ಲಿ.—ಮೇಜರ್ ಅಂಡ್ ಮೀಡಿಯಂ ಇರಿಗೇಶನ್‌ಗೆ ೨೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ ೯೩ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಯಾವುದಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಿರಿ ? ಇರಿಗೇಶನ್‌ಗೆ ಯಾವ ರೀತಿ ಅಭಿವೃದ್ಧಿ ಮಾಡಿದ್ದಾರೆನ್ನುವುದಕ್ಕೆ ನಾನು ಇಷ್ಟೇ ಹೇಳುತ್ತೇನೆ.ಹೆಚ್ಚು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. Annual rate-potential which is created in the irrigation is 0.4%, annual rate-potential utilised is only 1.6%. It will take 25 years to create potential and 63 years for complete utilisation of water.

ಅಂದರೆ, ಈಗ ಹೋಗುತ್ತಿರುವ ಧಾಟಿಯಲ್ಲೇ ಇನ್ನು ಮುಂದೆ ನೀವು ಹೋಗುವುದಾದರೆ ಇನ್ನೊಂದು ಶತಮಾನವಾದರೂ ರಾಜ್ಯ ಮುಂದುವರಿಯುವುದಿಲ್ಲ. you require another 25 years...

ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ನಿಧಾನವಾದ ಪರಿಸ್ಥಿತಿಯಲ್ಲಿ ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿದ್ದೀರಿ. We have a sense of fulfilment and satisfaction...... ಎಂದು ಸನ್ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದನ್ನು ಯಾರ ಹಿತಕ್ಕಾಗಿ ಹೇಳಿದ್ದೀರಿ ? ನಿಮ್ಮ ಹಿತಕ್ಕೋಸ್ಕರ, ನಿಮ್ಮ ಉಳಿವಿಗೋಸ್ಕರ ಮಾತ್ರ ಕೆಲಸ ಮಾಡುತ್ತಿದ್ದೀರಿ. ಇನ್ನು ಮುಂದಾದರು ಜನತೆಯ ಬಗ್ಗೆ ಚಿಂತನೆ ಮಾಡುವ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡುತ್ತೀರೆಂದು ನಾನು ತಿಳಿದುಕೊಳ್ಳುತ್ತೇನೆ.

(ಅಧ್ಯಕ್ಷರು.—ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರೇ, ಅಡಿಷನಲ್ ರಿಸೋರ್ಸಸ್ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ೩೧-೩-೮೮ ರೊಳಗೆ ಬರಬೇಕಾಗಿರುವ ಬಾಕಿ ಹಣವು ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಸೇಲ್ಸ್ ಟ್ಯಾಕ್ಸ್‌ನಿಂದ ಸರ್ಕಾರಕ್ಕೆ ಇನ್ನೂ ಬರಬೇಕಾದ ಹಣ ಬಹಳ ಇದೆ. ಸುಮಾರು ೧೦೦ ಕೋಟಿ ರೂಪಾಯಿಗಳು ಬರಬೇಕಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಸುಮಾರು ೩೩.೩೨ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರಬೇಕಾಗಿದೆ. ಈ ಅರಿಯರ್ಸ್ ಹಣವನ್ನು ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊಂಡು ವಸೂಲು ಮಾಡುತ್ತಿಲ್ಲ. ನೀವು ಆಗರ್ಭ ಶ್ರೀಮಂತರಾಗಿದ್ದೀರಿ, ಹಣಕಾಸಿನ ದೃಷ್ಟಿಯಲ್ಲಿ ನಿಮ್ಮ ಸರ್ಕಾರ ಬಲಿಷ್ಟವಾಗಿದೆಯೆಂದು ಕಾಣುತ್ತದೆ. ಆದಕ್ಕೆ, ನೀವು ಈ ಹಣವನ್ನು ವಸೂಲಿ ಮಾಡುತ್ತಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ ನನಗೆ ಈಗ ಸ್ವಲ್ಪ ಹೊತ್ತಿಗೆ ಮುಂಚೆ ನನ್ನ ಕ್ಷೇತ್ರದಿಂದ ಫೋನ್ ಬಂದಿತ್ತು, ನನ್ನ ಕ್ಷೇತ್ರದ ನಿಟ್ಟೂರು ಹೋಬಳಿ ಕಾರಹಳ್ಳಿಯಲ್ಲಿ ರೆವಿನ್ಯೂ ಅಧಿಕಾರಿಗಳು ಜನತಾ ಮನೆಗಳಿಗೆ ನುಗ್ಗಿ ಒಂದು ಚೂರು ಸಾಮಾನುಗಳನ್ನು ಬಿಡದೆ ಬಾಚಿಕೊಂಡು ಹೋಗಿದ್ದಾರಂತೆ. ಜನತಾ ಮನೆ ಕಟ್ಟಿಕೊಳ್ಳುವುದಕ್ಕೆ ಹಣ ಕೊಟ್ಟಿರುವುದನ್ನು ವಾಪಸ್ ಕೊಟ್ಟಿಲ್ಲವೆಂದು ಈ ಹರಿಜನರಿಗೆ ಇಂಥ ತೊಂದರೆ ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ.—ಬೆಂಗಳೂರು ನಗರದ ಕಾರ್ಪೊರೇಷನ್‌ನಲ್ಲಿ ಬಜೆಟ್ ವಿಷಯದ ಮೇಲೆ ಚರ್ಚೆ ನಡೆಯುತ್ತಿರುವಾಗ ಇಡೀ ಅಪೋಸಿಷನ್ ಕಾರ್ಪೊರೇಟರುಗಳನ್ನೆಲ್ಲಾ ಅರೆಸ್ಟ್ ಮಾಡಿದ್ದಾರೆ. ಈ ತರದ ಅರೆಸ್ಟ್ ಎಂದೂ ಮಾಡಿರಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ,—ಆ ವಿಷಯ ನನಗೆ ಗೊತ್ತಿಲ್ಲ.

ಶ್ರೀ ಧರ್ಮಸಿಂಗ್,—ನಿಮಗೆ ಗೊತ್ತಿಲ್ಲದೆ ಏನೂ ಆಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮ ಸರ್ಕಾರ ಇದ್ದಾಗ ೧೮೩ ಜನ ರೈತರುಗಳಿಗೆ ಗುಂಡು ಹೊಡಸಿದಿರಿ. ಈಗ ಮಾನ್ಯ ಮರ್ಯಾದೆ ಇಲ್ಲದೆ ಕಾರ್ಪೊರೇಟರುಗಳನ್ನು ಅರೆಸ್ಟ್ ಮಾಡಿಸಿದ್ದೀರಿ ಎಂದು ಹೇಳುತ್ತಿದ್ದಾರೆ ಇವರು ಹೇಳುತ್ತಿರುವುದು ದೆವ್ವ ವೇಧ ಹೇಳಿದ ಹಾಗಿದೆ. ನೀವು ಮಾಡಿರುವುದು ಯಾರಿಗೂ ಗೊತ್ತಿಲ್ಲ ಎಂದು ಕೊಂಡಿದ್ದೀರಾ ?

ಶ್ರೀ ಧರ್ಮಸಿಂಗ್.—ನೀವು ಎಲ್ಲಾ ಹಳೇ ಕಥೆ ಹೇಳುತ್ತೀರಿ. ನಾಚಿಕೆ ಬರಬೇಕು ನಿಮಗೆ. ಅಪೋಸಿಷನ್ ಕಾರ್ಪೊರೇಟರುಗಳನ್ನೆಲ್ಲಾ ಅರೆಸ್ಟ್ ಮಾಡಿ ಇಲ್ಲಿ ಕುಳಿತಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ಕಾರ್ಪೊರೇಟರ್ ಆಗಿರಲೀ, ಯಾರೇ ಆಗಿರಲೀ ತಪ್ಪು ಮಾಡಿದಾಗ ಅರೆಸ್ಟ್ ಮಾಡಲೇಬೇಕಾಗುತ್ತದೆ. ನೀವು ನಮ್ಮ ಸ್ಥಾನದಲ್ಲಿ ಇದಿದ್ದರೆ ಅವರನ್ನು ಸುಮ್ಮನೆ ಬಿಟ್ಟು ಬಿಡ್ತಾ ಇದ್ದಿರಾ ?

ಶ್ರೀ ಧರ್ಮಸಿಂಗ್.—ಬಜೆಟ್ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಇಡೀ ಕಾರ್ಪೊರೇಟರುಗಳನ್ನು ಅರೆಸ್ಟ್ ಮಾಡಿರುವುದು ಇತಿಹಾಸದಲ್ಲೇ ಎಲ್ಲೂ ಆಗಿಲ್ಲ. ಆದರೆ ನಾವು ಮಾಡಿದ್ದೀವಿ ಎಂದು ಹಳೇ ಕಥೆ ಹೇಳುವುದಕ್ಕೆ ಬರುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಯಾರನ್ನೋ ಒಳಗೆ ಹೋಗುವುದಕ್ಕೆ ತೊಂದರೆ ಮಾಡಿರಬಹುದು, ಅದಕ್ಕೆ ಅರೆಸ್ಟ್ ಮಾಡಲಾಗಿದೆ.

ಶ್ರೀ ಧರ್ಮಸಿಂಗ್,—ನೀವು ಗೃಹ ಮಂತ್ರಿಗಳಾಗಿದ್ದೀರಿ. ಅಲ್ಲಿ ಏನು ನಡೆದಿದೆ ಎಂಬ ಬಗ್ಗೆ ಇನ್‌ಫರ್ಮೇಷನ್ ತರಿಸಿಕೊಳ್ಳುವುದಕ್ಕೆ ನಿಮಗೆ ಆಗಲಿಲ್ಲ. ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಬಜೆಟ್ ಮೇಲೆ ಚರ್ಚೆ ಮೇಲೆ ನಡೆಯುವಾಗ ವಿರೋಧ ಪಕ್ಷದ ಎಲ್ಲ ಕಾರ್ಪೊರೇಟರುಗಳನ್ನು ಅರೆಸ್ಟ್ ಮಾಡಲಾಗಿದೆ. ಅದರ ಬಗ್ಗೆ ಏನು ಇನ್‌ಫರ್ಮೇಷನ್ ತರಿಸಿದ್ದರೆ ಅದನ್ನು ಹೇಳಿ

೧-೩೦ ಪಿ. ಎಂ.

ಗೃಹ ಮಂತ್ರಿಗಳಾಗಿ ತಮಗೆ ಬೆಂಗಳೂರು ಕಾರ್ಪೋರೇಷನ್ನಿನ ಕಾಂಗ್ರೆಸ್ ಐ ಸದಸ್ಯರನ್ನು ಅರೆಸ್ಟ್ ಮಾಡಿದ ಬಗ್ಗೆ ಮಾಹಿತಿ ಬಂದಿದೆಯೋ ಹೇಗೆ ?

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ...

ಶ್ರೀ ಪಟವಂಕ್ಕಿ ರತ್ನಾಕರ್.— ಅಧ್ಯಕ್ಷರೆ, ಮಾನ್ಯ ಜಾಲಪ್ಪನವರು ಸಹಕಾರ ಇಲಾಖೆ ಬಿಟ್ಟ ಮೇಲೆ, ಆಪರೇಷನ್ ಶುರು ಮಾಡಿದ್ದಾರೆ...

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಧರ್ಮಸಿಂಗ್‌ರವರು ಮಂತ್ರಿಗಳಾಗಿದ್ದವರು, ತಮಗೆ ಇಷ್ಟು ಕೂಡ ಗೊತ್ತಿರುವುದಿಲ್ಲವೇ ?

ಶ್ರೀ ಧರ್ಮಸಿಂಗ್.— ಕಾರ್ಪೋರೇಟರ್ಸನ್ನು ಅರೆಸ್ಟ್ ಮಾಡಿದ್ದು...

ಶ್ರೀ ಪಟವಂಕ್ಕಿ ರತ್ನಾಕರ್.— ನೀವು ಹೀಗೇನೆ ಇಲ್ಲಿ ಪುಂಗಿ ಊದುತ್ತಾ ಇರುತ್ತೀರಿ...

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ,— ನಿಮಗೇನು ಗೊತ್ತಿದೆ...

ಶ್ರೀ ಧರ್ಮಸಿಂಗ್.— ಆ ವಿಚಾರದ ಕುರಿತು ನಿಮಗೆ ಉತ್ತರ ಕೊಡತಕ್ಕಂಥ ಶಕ್ತಿ ಇಲ್ಲವೇ ?

ಅಧ್ಯಕ್ಷರು.— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ವೀರಪ್ಪಮೊಯಿಲಿಯವರೇ, ತಾವು ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಬಿ. ಆರ್. ನೀಲಕಂಠಪ್ಪ.— ಅಧ್ಯಕ್ಷರೇ, ಬಜೆಟ್ ಮೇಲೆ ಭಾಷಣ ಮಾಡುವಾಗ ಮಾತನಾಡುವವರನ್ನು ಬಿಟ್ಟು, ಬೇರೆಯವರು ಸಂಬಂಧಪಡದ ವಿಷಯಗಳ ಮೇಲೆ ಮಾತನಾಡುತ್ತಾ ಇದ್ದಾರೆ...

ಶ್ರೀ ಧರ್ಮಸಿಂಗ್.— ಕಾನೂನಿನ ವಿಚಾರ ಬಂದಾಗ ಬೆಂಗಳೂರಿನ ಕಾರ್ಪೋರೇಷನ್ ಸದಸ್ಯರನ್ನು ಅರೆಸ್ಟ್ ಮಾಡಿರುವ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ...

ಶ್ರೀ ಆರ್. ಎಲ್. ಜಾಲಪ್ಪ.— ಬಜೆಟ್ ಭಾಷಣಕ್ಕೂ, ಕಾರ್ಪೋರೇಶನ್ ಸದಸ್ಯರ ಅರೆಸ್ಟಿಗೂ ಏನೂ ಸಂಬಂಧವಿಲ್ಲ. ಆದರೂ ಮಾನ್ಯ ಧರ್ಮಸಿಂಗ್‌ರವರು ಕ್ಯಾಜುವಲ್ ಆಗಿ ಮಾತನಾಡಿದ್ದಾರೆ.

ಶ್ರೀ ಆರ್. ಎನ್. ನಾಯಕ್.— ಅಧ್ಯಕ್ಷರೇ...

ಅಧ್ಯಕ್ಷರು.— ತಾವುಗಳೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು...

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಧರ್ಮಸಿಂಗ್‌ರವರು ಬಹಳ ಗುರುತರವಾದಂಥ ಹಾಗೂ ಜವಾಬ್ದಾರಿಯುಳ್ಳಂಥ ಸದಸ್ಯರಾಗಿದ್ದಾರೆ. ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಅವರ ಮನಸ್ಸಿನಲ್ಲಿ ಇದೆ. ಆದರೆ ಈ ಸಭೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಕೆಲವು ವಿಧಿ-ವಿಧಾನಗಳು ಇವೆ, ಆ ಪ್ರಕಾರ ಅವರು ತಮಗೆ ಬೇಕಾದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲು ನೋಟೀಸ್ ಕಳುಹಿಸಿ ಕೊಡಲಿ, ನಿಯಮಗಳ ಪ್ರಕಾರ ಪ್ರಸ್ತಾಪ ಮಾಡ

ಬಹುದು. ಇವೊತ್ತು ಮಾನ್ಯ ಮೊಯಿಲಿಯವರು ಬಹಳ ಚೆನ್ನಾಗಿ ಮಾತನಾಡುತ್ತಾ ಇದ್ದಾರೆ. ಬಹಳ ವಿಚಾರ ಪೂರ್ಣವಾದಂಥ ವಿಚಾರಗಳ ಬಗ್ಗೆ ಅವರು ಮಾತನಾಡುತ್ತಿರುವುದನ್ನು ಕೇಳಬೇಕಾಗಿದೆ...

ಶ್ರೀ ಧರ್ಮಸಿಂಗ್.— ಅಧ್ಯಕ್ಷರೆ...

ಅಧ್ಯಕ್ಷರು.— ತಾವು ದಯಮಾಡಿ ಕುಳಿತುಕೊಳ್ಳಿ. ಇಲ್ಲದಿದ್ದರೆ ತಾವು ಮಾತನಾಡಿದುದು ರಿಕಾರ್ಡ್‌ಗೆ ಹೋಗುವುದಿಲ್ಲ ಎಂದು ಹೇಳಬೇಕಾಗುತ್ತದೆ...

ಶ್ರೀ ಧರ್ಮಸಿಂಗ್.— ಅವರು ಪ್ರಸ್ತಾಪ ಮಾಡಿದ ಮೇಲೆ ನಾನು ವಿಚಾರ ಎತ್ತಿದ್ದೇನೆ...

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಮೊಯಿಲಿಯವರು ಚೆನ್ನಾಗಿ ಮಾತನಾಡುವುದು ಅವರಿಗೆ ಬೇಕಾಗಿಲ್ಲ ಎಂದು ಕಾಣುತ್ತದೆ.

ಶ್ರೀ ಧರ್ಮಸಿಂಗ್.— ಜಾಲಪ್ಪನವರೇ, ನಾವು ಅಷ್ಟು ಸಣ್ಣತನವನ್ನು ತೋರಿಸುವವರು ಅಲ್ಲ. ಇಂಥ ಮಾತುಗಳನ್ನು ಏಕೆ ಆಡುತ್ತಿದ್ದೀರಿ?

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಬಜೆಟ್ ಭಾಷಣದ ಮೇಲೆ ಮಾತನಾಡುವಾಗ ಕಾನೂನನ್ನು ಯಾವುದಕ್ಕಾಗಿ ಉಪಯೋಗ ಮಾಡುತ್ತಿದ್ದಾರೆ ಎಂಬುದಕ್ಕೆ ಉದಾಹರಿಸಿದೆ. ಕಾರ್ಪೋರೇಷನ್ ಸದಸ್ಯರನ್ನು ಅರೆಸ್ಟ್ ಮಾಡಿದ ಬಗ್ಗೆ ಪ್ರಸ್ತಾಪ ಮಾಡಿದೆ. ಆ ಕುರಿತು ದಯಮಾಡಿ ಈವೊತ್ತಿನ ಸದನದ ಕಾರ್ಯಕಲಾಪ ಮುಗಿಯುವುದರೊಳಗಾಗಿ ಒಂದು ವರದಿಯನ್ನು ಕೊಡಿ.

ಇನ್ನು ನಮ್ಮಲ್ಲಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಗುತ್ತದೆ. ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೋಸ್ಕರವಾಗಿ ಸಂಪನ್ಮೂಲಗಳ ಅವಶ್ಯಕತೆ ಇದ್ದೇ ಇದೆ. ಅದಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತೀರಾ ? ಈ ಕುರಿತು ವಿವರವಾಗಿ ನಾನು ಹೋಗದಿದ್ದರೂ ಕೂಡ ಒಂದೆರಡು ಮಾತನ್ನು ಈ ಬಗ್ಗೆ ಹೇಳುತ್ತೇನೆ. ತಮಗೆ ಗೊತ್ತಿರುವ ಹಾಗೆ ಅರ್ರ್ಯಾಕ್ ಕಂಟ್ರಾಕ್ಟ್ ಕೇಸ್‌ನಲ್ಲಿ ಸುಪ್ರೀಮ್ ಕೋರ್ಟ್‌ನವರ ತೀರ್ಮಾನ ಆಗಿದೆ ಮತ್ತು ಅದರಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆ ವರದಿ ಬಂದ ಮೇಲೆ ಏನು ಮಾಡಿದರು ಎಂಬುದು ಬೇಕಲ್ಲವೇ ? ಏಕೆಂದರೆ ಇವರೇ ಹೇಳಿದ್ದಾರೆ they are the villan of the piece in the bottling contract...... ಎಂದು ಬಾಟ್ಲಿಂಗ್ ಕಾಂಟ್ರಾಕ್ಟ್ ಬಗ್ಗೆ ಹೈಕೋರ್ಟ್‌ನವರು ಸುಪ್ರೀಂ ಕೋರ್ಟ್‌ನವರು ತೀರ್ಮಾನ ಕೂಡ ಕೊಟ್ಟಿದ್ದಾರೆ. ಇವರಿಗೆ ಬೇಕಾದ ಎಕ್ಸೈಸ್ ಕಂಟ್ರಾಕ್ಟರ್‌ಗಳಿಗೆ ಕೊಡಬೇಕೆಂದು ರೂಲ್ಸನ್ನೇ ಬದಲಾವಣೆ ಮಾಡಿದರು, ಬಾಟ್ಲಿಂಗ್ ಕಾಂಟ್ರಾಕ್ಟ್ ಅನ್ನು ರದ್ದು ಮಾಡಬೇಕೆಂದು ಹೈಕೋರ್ಟ್, ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟ ಮೇಲೆ ೫೦–೬೦ ಕೋಟಿ ರೂಪಾಯಿ ವ್ಯವಹಾರ ಏಸಿದೆ, ಅದು ಕಾನೂನು ಪ್ರಕಾರ ಆಗಬೇಕಾಗಿತ್ತು. ಆದರೆ ಇಲ್ಲಿ ಏನು ಮಾಡಿದರೆಂದರೆ ಒಂದೂವರೆ ವರ್ಷಗಳ ಕಾಲ ಟೆಂಪೊರರಿಯಾಗಿ ಈ ವ್ಯವಹಾರಗಳನ್ನು ಕೊಟ್ಟರು. ಏನು ಪರಿಸ್ಥಿತಿ ಎಂದು ನಮಗೆ ಗೊತ್ತಾಗಲಿಲ್ಲ. ವಿಲನ್ ಪಾರ್ಟ್ ಹೀರೋ ಪಾರ್ಟ್ ಎರಡನ್ನೂ ಕೂಡ ಜನತಾ ಪಕ್ಷ ಒಬ್ಬರೇ ಮಾಡುವುದೆಂದಾಯಿತು. ಹೀರೋ ಆದವರು ವಿಲನ್ ಆಗುತ್ತಾರೆ ವಿಲನ್ ಆದವರು ಹೀರೋ ಆಗುತ್ತಾರೆ ಇದು ಏನು ವೈಚಿತ್ರ್ಯವೋ ನಮಗೆ ತಿಳಿಯುವುದಿಲ್ಲ. ಅದು ನಿಮಗೇ ತಿಳಿಯತಕ್ಕದ್ದು ಮತ್ತು ನೀವೇ ಅನುಭವಿಸತಕ್ಕದ್ದೇ ಹೊರತು ನಾವಲ್ಲ. ನಮಗಂತೂ ಇದರ ವೈಚಿತ್ರ್ಯ ಅರ್ಥವಾಗುವುದಿಲ್ಲ. ವಿಲನ್ ಆಗಿದ್ದವರನ್ನು ಸ್ವಲ್ಪ ದಿವಸ ಹೀರೋ ಮಾಡಿಕೊಂಡಿದ್ದೀರಿ. ಇಲ್ಲಿ ವಿಲನ್ ಆದವರೆಲ್ಲಾ ನಿಮ್ಮಲ್ಲಿ ಹೀರೋಗಳು. ನಮ್ಮಲ್ಲಿ ಈಗ ಯಾರಾದರೂ ವಿಲನ್ ಆಗಿ ಹೋದರೆ ಅವರನ್ನು ಹೀರೋಗಳನ್ನಾಗಿ ತಬ್ಬಿಕೊಳ್ಳುವುದಕ್ಕೆ ತಯಾರಾಗಿದ್ದೀರಿ. ಇವತ್ತು ಇಡೀ ರಾಷ್ಟ್ರದಲ್ಲಿ ನಡೆಯುತ್ತಿದೆ ಇಲ್ಲಿ ಮಾತ್ರವಲ್ಲ. ಇದು ಜನರಲ್ ರೆಫರೆನ್ಸ್.

ಶ್ರೀ ಆರ್. ಎಲ್. ಜಾಲಪ್ಪ.— ಆ ಮಾತನ್ನು ನನಗೆ ಹೇಳಲಿಲ್ಲ ತಾನೆ. ಈ ಕಡೆ ವಿಲನ್‌ಗಳಾಗಿದ್ದರೆ ಅದೆಲ್ಲಾ ಅಲ್ಲಿಂದ ಕಲಿತುಕೊಂಡು ಬಂದಿದ್ದು, ನಾವೆಲ್ಲಾ ನಿಮ್ಮ ಜೊತೆಯಲ್ಲಿದ್ದವರು ತಾನೆ?

ಶ್ರೀ ಎಂ. ವೀರಪ್ಪಮೊಯಿಲಿ.— ಇಲ್ಲಿ ಕಲಿತ ಒಳ್ಳೆಯದನ್ನು ಮರೆತು ಕೆಟ್ಟದ್ದನ್ನು ಮಾತ್ರ ಅಲ್ಲಿ ಮಾಡುತ್ತಿದ್ದೀರಿ. ಯಾವ ಡಿಸ್ಟಿಲರೀಸ್‌ಗಳು ಎಕ್ಸೈಸ್ ಕಂಟ್ರಾಕ್ಟರ್ಸ್‌ಗಳು ಸರಕಾರಕ್ಕೆ ಮೋಸ ವಂಚನೆ ಮಾಡುತ್ತಾರೆ, ಯಾರು ಶುದ್ಧ ಅರ್ರ್ಯಾಕ್ ಅನ್ನು ಕೊಡಬೇಕೆಂದು ಕಾನೂನು ಇದೆ ಅದಕ್ಕೆ ತದ್ವಿರುದ್ಧವಾಗಿ ಒಂದೂವರೆ ವರ್ಷಗಳ ಕಾಲ ಈ ಕಾರ್ಯಕ್ರಮವನ್ನು ಜಾರಿ ಮಾಡಿದಿರಿ. ಎಕ್ಸೈಸ್

ಕಮೀಷನರ್ ತಮ್ಮ ಇಚ್ಛಾನುಸಾರ ಕಂಟ್ರಾಕ್ಟ್ ಕೊಡುವಂತೆ ಮಾಡಿದ್ದೀರಿ, ಯಾವುದನ್ನೂ ಸರಿಯಾಗಿ ಡಿಸೈಡ್ ಮಾಡದೇ ಟೆಂಡರ್ ಕಾಲ್‌ಫರ್ ಮಾಡದೇ, ಆಕ್ಷನ್ಸ್ ಪ್ರೊಸೀಜರ್ ಕೂಡ ಇಲ್ಲದೇ ಮಾಡಿದ್ದೀರಿ. ಯಾವುದನ್ನು ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಖಂಡಿಸಿದ್ದಾರೆ ದೂಷಣೆ ಮಾಡಿದ್ದಾರೆ, ಅದನ್ನು ಲೆಕ್ಕಿಸದೇ ತಮ್ಮ ಇಚ್ಛಾನುಸಾರ ಕಾನೂನನ್ನು ತಿರುಚಿ ಮಾಡಿದ್ದೀರಿ ಎಂದು ಅವರು ಹೇಳಿದರೂ ಕೂಡ ಅದನ್ನೇ ಮಾಡುತ್ತಿದ್ದೀರಿ ಇದಕ್ಕೆ ಏನು ಹೇಳಬೇಕು ? ಸರಕಾರದ ಆದಾಯವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಅಥವಾ ಒಳ್ಳೆಯ ಆಡಳಿತವನ್ನು ಕೊಡುವುದರಲ್ಲಿ ಇವರಿಗೆ ಯಾವರೀತಿಯ ನಂಬಿಕೆಯಾಗಲೀ ವಿಶ್ವಾಸವಾಗಲಿ ಇಲ್ಲವೆಂದು ಹೇಳುವುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಎಲ್ಲಿ ಇದೆ. ಹೈಕೋರ್ಟ್‌ನಲ್ಲಿ ಏನು ಹೇಳಿದ್ದಾರೆ ಅದನ್ನು ಇವರು ಒಪ್ಪಿಕೊಂಡಿದ್ದಾರೆ ಕರ್ನಾಟಕ ರಾಜ್ಯಕ್ಕೆ ಎಷ್ಟು ಬೇಕು ಅಷ್ಟು ಬಾಟಲಿಂಗ್ ಮಾಡತಕ್ಕಂತಹ ಶಕ್ತಿ ಮೈಸೂಗರ್ ಕಂಪೆನಿಗೆ ಇದೆ, ಅವರಿಗೇ ಈ ೭೦ ಕೋಟಿ ರೂಪಾಯಿಯ ವ್ಯವಹಾರವನ್ನು ಒಪ್ಪಿಸಿದ್ದಿದ್ದರೆ ಆ ಕಂಪೆನಿ ಬೆಳೆಯುತ್ತಿತ್ತು, ಸರಕಾರಕ್ಕೆ ಡಿವಿಡೆಂಡ್ ಬರುತ್ತಿತ್ತು. ಅದೂ ಕೂಡ ಚೆನ್ನಾಗಿ ನಡೆಯುತ್ತಿತ್ತು. ೧೯ ಜಿಲ್ಲೆಗಳಿಗೆ ಬಾಟ್ಲಿಂಗ್ ಕಂಟ್ರಾಕ್ಟ್ ಮಾಡುವ ಬಾಟಲ್‌ಗಳನ್ನು ಸಪ್ಲೈ ಮಾಡತಕ್ಕಂತಹ ಶಕ್ತಿ ಸಾಮರ್ಥ್ಯ ಮೈಸೂಗರ್ ಕಂಪೆನಿಗೆ ಇತ್ತು ಅವರು ಸಪ್ಲೈ ಮಾಡುತ್ತಿದ್ದರು ಇದನ್ನು ಏಕೆ ಮಾಡಬಾರದಾಗಿತ್ತು. ಈಗ ಕೂಡ ತಮ್ಮ ಇಚ್ಛಾನುಸಾರವಾಗಿ ಕಂಟ್ರಾಕ್ಟ್‌ಗಳನ್ನು ಕೊಟ್ಟಿದ್ದಾರೆ. ಇಷ್ಟು ಮಾತ್ರವಲ್ಲ ಪ್ರತಿ ಜಿಲ್ಲೆಯಲ್ಲಿ ಫೀಡಿಂಗ್ ಸೆಂಟರ್ ಇದೆ.

ಈ ರೆಕ್ಟಿಫೈಡ್ ಸ್ಪಿರಿಟ್ ಫೀಡಿಂಗ್ ಸೆಂಟರ್‌ಗೆ ಹೋಗುತ್ತದೆ. ಅಲ್ಲಿ ಬಾಟ್ಲಿಂಗ್ ಮಾಡುವುದು ಇಷ್ಟೆ. ಇದಕ್ಕೆ ನೋ-ಹೌ ಎಂತಹದ್ದು ? ಆ ಫೀಡಿಂಗ್ ಸೆಂಟರ್‌ಗೆ ಒಬ್ಬ ಏಜೆಂಟ್, ಅವನಿಗೆ ಕಮಿಷನ್ ಕೋಟ್ಯಾಂತರ ರೂಪಾಯಿಗಳಷ್ಟು ಹೋಗುತ್ತದೆ. ಬಾಟ್ಲಿಂಗ್ ಕಂಟ್ರಾಕ್ಟರ್ ಅದನ್ನು ಫೀಡಿಂಗ್ ಸೆಂಟರ್‌ಗೆ ತೆಗೆದುಕೊಂಡು ಹೋಗಿ ಕಾರ್ಕ್ ಹಾಕಿ ಕೊಡಬೇಕು, ಇದಕ್ಕೆ ನೋ-ಹೌ ಏನು ಇದೆ. ಈ ಹಣವನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲವೇ ? ನಿಮಗೆ ನಿಜವಾಗಿ ರಾಜ್ಯದ ಹಿತಾಸಕ್ತಿ ಇದ್ದಿದ್ದರೆ ಬಾಟ್ಲಿಂಗ್ ವ್ಯವಸ್ಥೆ ಬಂದ ಕೂಡಲೇ ಫೀಡಿಂಗ್ ಸೆಂಟರ್‌ನ್ನು ಅಬಾಲಿಷ್ ಮಾಡಬಹುದಾಗಿತ್ತು; The same contractor should have been entrusted with it, ರಾಮಯ್ಯನವರೇ ತಾವು ಇದಕ್ಕೆ ಏನು ಹೇಳುತ್ತೀರಿ ?

SRI Y. K. RAMAIAH.—I plead my ignorance of the subject.

ಶ್ರೀ ಎಂ ವೀರಪ್ಪ ಮೊಯಿಲಿ.—ಅವರು ಇವತ್ತು ೪೦ ಲಕ್ಷ ಲೀಟರ್ ಸಪ್ಲೈ ಮಾಡತಕ್ಕಂಥದ್ದರಲ್ಲಿ ಲೀಟರಿಗೆ ಬರೀ ೧೦ ಪೈಸೆ ಮಾತ್ರ ಸರ್ಕಾರಕ್ಕೆ ಕೊಡುವುದು. ಅವರಿಗೆ ಎರಡು ರೂಪಾಯಿ ಸಿಗುತ್ತದೆ. ಎರಡು ರೂಪಾಯಿ ತೆಗೆದುಕೊಳ್ಳುವುದಕ್ಕೆ ಏನು ಕೆಲಸ ಅವರಿಗೆ ? ಈಗ ಇದನ್ನು ಆಂಧ್ರಪ್ರದೇಶ ಗೌರ್ನಮೆಂಟ್ ಅವರೇ ಸ್ವಂತ ಮಾಡುತ್ತಿದ್ದಾರೆ ಬಾಟ್ಲಿಂಗ್ ಕೆಲಸವನ್ನು. ಇದನ್ನು ಕರ್ನಾಟಕ ಸರ್ಕಾರ ಏತಕ್ಕೆ ಮಾಡಬಾರದು ? ಅದನ್ನು ನೀವು ಮಾಡುವುದಿಲ್ಲ. ಇದು ಮಾತ್ರವಲ್ಲ ಈ ಬಾಟ್ಲಿಂಗ್ ಇವರಿವರೊಳಗೆ ವ್ಯವಹಾರ. ಏಕೆಂದರೆ ಬಾಟ್ಲಿಂಗ್‌ನ್ನು ಸಪ್ಲೈ ಏನು ಮಾಡುತ್ತಾರೆ, ಸರಿಯಾಗಿ ಇದರ ಬಗ್ಗೆ ತನಿಖೆ ಮಾಡುವುದು ಇದ್ದರೆ ೧೦–೧೯ ಜಿಲ್ಲೆಗಳೊಳಗೆ ಲೂಸ್ ಅರ್ರಾಕ್ ಸಪ್ಲೈ. ಎಲ್ಲಾ ತಾಲ್ಲೂಕುಗಳಲ್ಲಿಯೂ ಲೂಸ್ ಅರ್ರಾಕ್ ಸಪ್ಲೈ ಮಾಡುತ್ತಿದ್ದಾರೆ. ಇದಕ್ಕೆ ಯಾರು ಜವಾಬ್ದಾರಿ ? ಇದರ ವಿಚಾರ ಏನಾಗಿದೆ ಎಂದರೆ ಅವರೊಳಗೆ ಈ ಲಾಭ ಎಲ್ಲಾ ಕಡೆ ಹಂಚಿ ಹೋಗುವ ಒಂದು ಪರಿಸ್ಥಿತಿಯನ್ನು ಅಲ್ಲಿ ಕಾಣಬಹುದು, ಫೀಡಿಂಗ್ ಸೆಂಟರ್‌ನಲ್ಲಿ ಬರೀ ನೀರು ಮಾತ್ರ ಹಾಕುವುದು. ಬೇರೆ ಏನೂ ಹಾಕುವುದಿಲ್ಲ. ರೆಕ್ಟಿಫೈಡ್ ಸ್ಪಿರಿಟ್‌ಗೆ ನೀರು ಹಾಕಿ ಬಹುಶಃ ಅದನ್ನು ೪೦–೫೦ ದಿವಸಗಳ ಕಾಲ ಇಡುತ್ತಾರೆ, That becomes arrack. ಇದಕ್ಕೆ ನಿಮಗೆ ಏನು 'ನೋ–ಹೌ' ಬೇಕು. ನಿಮಗೆ ಯಾವುದನ್ನು ಮಾಡಲಿಕ್ಕೆ ಆಗುತ್ತದೆ ಎಂಬುದನ್ನು ಸ್ಪಷ್ಟವಾಗಿ ನಾವು ತಿಳಿದುಕೊಳ್ಳಬೇಕಾಗುತ್ತದೆ. ಬೆಂಗಳೂರು ಟೋಡಿ ಒಂದು ಹರಾಜು ಆಯಿತು. ಬೆಂಗಳೂರು ಟಾಡಿ ಮೇ ೪ನೇ ತಾರೀಖೋ ಏನೋ ಹರಾಜು ಆಯಿತು. ಸಕ್ಸಸ್‌ಫುಲ್ ಬಿಡ್ಡರ್ ೫೨ ಲಕ್ಷ ರೂಪಾಯಿಗಳಿಗೆ ಅದನ್ನು ತೆಗೆದುಕೊಂಡರು. ಆದರೆ ಅದರಿಂದ ಆ ಕಂಟ್ರಾಕ್ಟರ್‌ಗೆ ಅನುಕೂಲ ಬರಲಿಲ್ಲ. ಏಕೆಂದರೆ he wented to manipulate kept quiet for 2 months and thereafter the Government itsel an innovation declaring that Particular contractor is de

They make an innovation. The same contractor was there for light districts ಆ ಮೇಲೆ ಏನು ಮಾಡಿದರು ಎಂದರೆ the contractor was not declared defaulter. ಬೆಂಗಳೂರು ಮಾತ್ರ ಡಿಫಾಲ್ಟರ್ ಆಗಿದೆ ಎಂದರೆ ಅಲ್ಲಿ ೫೨ ಲಕ್ಷ ರೂಪಾಯಿಗಳು ಆಯಿತಲ್ಲಾ, ಈಗ ಅದನ್ನು the vary same person who was successful for 36 lakhs of rupees was given. ಇಷ್ಟು ಓಪನ್ ಆಗಿ ಇದನ್ನು ಮಾಡಿದ್ದಾರೆ. ಇದು ನಿಜವಾಗಿಯೂ ಹಗಲು ದರೋಡೆ. ಇದಕ್ಕಿಂತ ಹಗಲು ದರೋಡೆ ಬೇರೆ ಇಲ್ಲ. ೩೬ ಲಕ್ಷ ರೂಪಾಯಿಗಳಿಗೆ ಟೆಂಪೊರರಿಯಾಗಿ ಕೊಟ್ಟರು, ಆ ವಿಚಾರ ಹೈಕೋರ್ಟ್‌ಗೆ ಮುಂದೆ ಹೋಯಿತು. ಆ ಮೇಲೆ ಅದು ಹೈಕೋರ್ಟ್‌ಗೆ ಹೋದ ಮೇಲೆ ಎಂಟು ಡಿಸ್ಟ್ರಿಕ್ಟ್‌ದು ಡಿಫಾಲ್ಟರ್ ಎಂದು ಕನ್‌ಸಿಡರ್ ಆಯಿತು. ಆ ಮೇಲೆ ಇಲ್ಲಿಯವರೆಗೆ ಕೂಡಾ ಕೊಡಬಾರದು ಎಂದು ಹೇಳಿ ಆಯಿತು. Again it was reauctioned. ಅದಕ್ಕಾಗಿ ಅದರ ಬಗ್ಗೆ ಸಮಗ್ರವಾದಂಥ ತನಿಖೆಯಾಗಬೇಕು. ಎಷ್ಟು ಹಣ ಸೋರಿ ಹೋಗಿದೆ ಎಂಬುದು ಗೊತ್ತಾಗಬೇಕು. ಇದನ್ನು ಏತಕ್ಕೆ ಮಾಡಿದ್ದಾರೆ. There was another bidder who was declared as benami ಆದ್ದರಿಂದ ಇವೊತ್ತು ಇದರ ಬಗ್ಗೆ ಸಂಪೂರ್ಣವಾದಂತಹ ಚರ್ಚೆ ಆಗಬೇಕು, The successful bidder had put a benamidar. That is accepted and he became a successful contractor. The Government had lost Rs.60 lakhsfor a period of 4 months. Apart from that there are other irregularities. ಈ ನಷ್ಟವನ್ನು ಯಾರು ಭರ್ತಿ ಮಾಡಿಕೊಡಬೇಕು. ಯಾರಾದರೂ ಬಡವರಿಗೆ ಮನೆ ಕಟ್ಟಲಿಕ್ಕೆ ಹಣ ಕೊಟ್ಟಿದ್ದೀರಾ. ನಿಮ್ಮ ಕಾನ್ಸಿಟ್ಯೂಯೆನ್ಸಿಯಲ್ಲಿ ಅಥವಾ ನಮ್ಮ ಕಾನ್ಸಿಟ್ಯೂಯೆನ್ಸಿಯಲ್ಲಿ. ಯಾವ ಯಾವ ಕೆಲಸಕಾರ್ಯಗಳಿಗೆ ಎಷ್ಟು ಖರ್ಚು ಮಾಡಿದ್ದಾರೆಂದರೆ ೬೪ ಕೋಟಿ ರೂಪಾಯಿಗಳು. ಆ ಮೇಲೆ ರಿಟ್ ಹಾಕಿದ್ದರಿಂದ ೬ ಕೋಟಿ ರೂಪಾಯಿ ಉಳಿತಾಯ ಆಗುತ್ತದೆ. ಇಲ್ಲದಿದ್ದರೆ ಕರ್ನಾಟಕ ರಾಜ್ಯದ ಖಜಾನೆಗೆ ೬ ಕೋಟಿ ರೂಪಾಯಿ ನಷ್ಟವಾಗುತ್ತದೆ, but for the writ filed by some other contractor. ಇಲ್ಲದಿದ್ದರೆ ಹಾಗೆ ಸೋರಿ ಹೋಗುತ್ತಾ ಇತ್ತು. ಈಗ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಅದು ಇವರು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದು. ಈವೊತ್ತು ಇವರಿಗೆ ಹೈಕೋರ್ಟ್ ಜಡ್ಜ್‌ಮೆಂಟ್ ಮೇಲೆ ಲಕ್ಷ್ಯ ಇಲ್ಲ; ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ವರದಿಯ ಮೇಲೆ ಲಕ್ಷ್ಯ ಇಲ್ಲ. ಒಂದು ವಿಚಾರವನ್ನು ಹೇಳುತ್ತಿದ್ದೇನೆ ಏನೆಂದರೆ, on 2nd September 1987 there was a judgement given by Justice Ramajoi ಬಜೆಟ್ ಮಂಡನೆ ಮಾಡುತ್ತಾರೆ. ಸ್ಟಾಂಕ್ಟಿಟಿ ಇದೆ. ಇಲ್ಲಿ ಪರ್ ಲೀಟರ್ ಫೀ ಎಂದು ೪ ರೂಪಾಯಿ ಇದ್ದದನ್ನು ಬಜೆಟ್‌ನಲ್ಲಿ ೬ ರೂಪಾಯಿ ಮಾಡಿದ್ದಾರೆ. ತಾವು ಬೇಕಾದರೆ ಬಜೆಟ್ ಸ್ಪೀಚ್ ತರಿಸಿಕೊಂಡು ನೋಡಿ. In the Budget speech I think it was in 1984 or 1985 there was an increase. ಇನ್‌ಕ್ರೀಸ್ ಆದ ಮೇಲೆ ರೂಲ್ ಆಗಬೇಕು ಎಂದು ...The Excise Commissioner will issue some arrack excise duty of Rs.4 to 6 per litre of IML. ಈ ಮೆಸೇಜ್ ಅನ್ನು ರೂಲ್ ಆಗುವ ಮೊದಲೇ...The direction was sent. Against the executive direction there was a challenge by some other arrack contractor before the High Court. ಅದು ಆದ ಮೇಲೆ the rule was finalised. ಡ್ರಾಫ್ಟ್ ರೂಲ್ಸ್ ಕೊಟ್ಟಮೇಲೆ ಇಂತಿಷ್ಟು ರೇಟ್ ಆಯಿತು. There was no stay as against the final rules. They could have gone ahead in implementing it and the writ would have become infructuous. ಅದು ಮಾಡಲ್ಲೇ ಇಲ್ಲ. The Excise Commisssoner or this Government kept quiet ಅದರ ಮೇಲೆ ಇವರು ಏನು ಹೇಳುತ್ತಾರೆ ಅಂದರೆ ನಾನು ಆ ಭಾಗವನ್ನು ಮಾತ್ರ ಓದುತ್ತೇನೆ ಯಾಕೆಂದರೆ ಜಡ್ಜ್‌ಮೆಂಟ್ ಬಹಳ ಉದ್ದ ಇದೆ :—

"The valicity of these rules has not been challenged in any of these petitions. There is no stay of this notification. Even so, the Excise Commissioner who issued

the message without the authority of law with outmost expedition failed to issue any message or direction to collect the excise duty at the rate of Rs.6 per bulk litre in accordance with the rule as amended. As a result the Department is collecting exise duty at the rate of Rs.4 per bulk litre till now on the ground that the message of the exise Commissioner giving effect to the draft rules has been stayed by this court. The result brought about is a failure to collect the exise duty at the rate of Rs.6 per litre even after the rule was awarded. As a consequence, as indisputedly pointed out the consumption or arrack is of the order of 3o lakh litres per month, the difference of exise duty amount to Rs.60 lakhs per month has not been collected for the last more than 2 years which comes to approximately more than Rs.14 crores."

Rs.14 crores just across the table passed over to the arrack contractors. ಇದಕ್ಕಿಂತ ದೊಡ್ಡ ನಾಚಿಕೆಗೇಡು ಇದೆಯೇ ? Is It not a fraud on this House. ಈಗ ೪ ರೂಪಾಯಿ ಲೀಟರ್ ಫೀ ಇದೆ. ಅದು ಹೆಚ್ಚು ಮಾಡಬೇಕು. ೬ ರೂಪಾಯಿ ಮಾಡಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಮಂಡನೆ ಸಮಯದಲ್ಲಿ ಹೇಳಿದಾಗ ನಾವು ಸ್ವಾಗತ ಮಾಡಿದೆವು. ನಾವು ಬಜೆಟ್ ಅನ್ನು ಮಂಜೂರು ಮಾಡಿದೆವು. We approved it on the floor of this House. The manoeuvered i. e., the Government manoeuvered. Some lobby must have played its own invisible role. The Excise Commissioner issues a message before the rules amending enhancement from Rs.4 to 6 Naturally it is an illegal massage.

As against that, the excise contractors want to the High Court. The High Court, naturally, issued a Stay. In the meanwhile, within 10-15 days, the rules were finalised. No writ petition was filed against that final order enhancing from Rs. 4 to 6. It has a force of law and there was no stay against that. There is an understanding between the seat of power here and the Excise Contractors and no Caveat was also filed. ಆದರೆ ಸ್ಟೇ ವೆಕೇಟ್ ಮಾಡಿಸಲು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. No effort was made to vacate the stay. ಈ ಮಾತನ್ನು ಜಡ್ಜ್‌ಮೆಂಟ್ ನಲ್ಲಿಯೇ ಹೇಳಿದ್ದಾರೆ. ಇದರಿಂದ ಸರ್ಕಾರಕ್ಕೆ ೧೭ ಕೋಟಿ ರೂಪಾಯಿಗಳು ನಷ್ಟವಾಗಿದೆ. ಈ ಪವಿತ್ರವಾದಂಥ ವಿಧಾನಸಭೆಯಲ್ಲಿ ಒಂದು ಒಳ್ಳೆಯ ಕೆಲಸ ಮಾಡುತ್ತೇವೆಂದು ಹೇಳಿ ಮಂಜೂರಾತಿ ಪಡೆದುಕೊಂಡ ಮೇಲೆ ಈ ರೀತಿ ಮಾಡುವುದು ಸರಿಯೇ ? Why should I do this dudget speech ? You are playing fraud on the provisions of the Constitution. You are playing fraud on the people, apart from playing fraud on all the legislators. With best of intention, this was passed and allowed you to enhance. ಈ ೧೭ ಕೋಟಿ ರೂಪಾಯಿಗಳ ನಷ್ಟದ ಬಗ್ಗೆ ನೀವು ಯಾರನ್ನು ಜವಾಬ್ದಾರನನ್ನಾಗಿ ಮಾಡಿದ್ದೀರಿ ? who is responsible ? Have you instituted any enquiry ? ಇದಕ್ಕೆ ಯಾರು ಕಾರಣ ಎಂದು ತಿಳಿಯಲು ಏತಕ್ಕೆ ನ್ಯಾಯಾಂಗ ತನಿಖೆ ಮಾಡಲಿಲ್ಲ ? I don't want to blame an official because I

know. ಅಧಿಕಾರ ಪೀಠದಲ್ಲಿರುವ ನಿಮ್ಮ ಆಶೀರ್ವಾದ ಇಲ್ಲದಿದ್ದರೆ ಯಾವ ಅಧಿಕಾರಿ ಸಹ ಇಂತಹ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. Let me not unnecessarily criticise the Officers I hold the person who is holding the Finance portfolio responsible for getting away the enhancement and committed fraud on the people of Karnataka and took advantage of this House. ಈ ಸದನವನ್ನು ಇಷ್ಟೊಂದು ರೀತಿಯಲ್ಲಿ ದುರುಪಯೋಗಮಾಡಿಕೊಂಡು ತಮ್ಮ ಸ್ವಾರ್ಥಕ್ಕಾಗಿ ಲಾಭ ಮಾಡಿಕೊಳ್ಳುವುದಾದರೆ, ಈ ಸದನಕ್ಕೆ ಏನು ಬೆಲೆ ಇರುತ್ತದೆ ? ತಾವು ಮಸೂದೆಯನ್ನು ಪಾಸ್ ಮಾಡುವಾಗ ಮಸೂದೆ ಪರವಾಗಿ ಯಾರಿದ್ದಾರೆ, ಅದರ ವಿರುದ್ಧ ಯಾರಿದ್ದಾರೆಂಬುದನ್ನು ತಿಳಿದು ಕೊಳ್ಳುತ್ತೀರಿ. ಇವರು ಈ ರೀತಿ ಮಾಡಿದರೆ ಇಂತಹ ಮಸೂದೆಗಳಿಗೆ ಏನು ಬೆಲೆ ಇರುತ್ತದೆ ? ಈ ಜಡ್ಜ್‌ಮೆಂಟ್ ಅತಿ ಮುಖ್ಯವಾದಂಥ ಜಡ್ಜ್‌ಮೆಂಟ್ ಆಗಿದೆ. ಈ ಜಡ್ಜ್‌ಮೆಂಟ್ ಪ್ರಕಾರ ನಾವು ನಿಮ್ಮ ರಾಜೀನಾಮೆಯನ್ನು ಕೇಳಬಹುದಾಗಿತ್ತು. ಆದರೆ ಅದನ್ನು ಏತಕ್ಕೆ ಕೇಳಬೇಕು ? ಇವರು ರಾಜೀನಾಮೆ ಕೊಡುವುದಾದರೆ ಕೇಳಬಹುದು. ಇಲ್ಲದಿದ್ದರೆ ಏತಕ್ಕೆ ಕೇಳಬೇಕು ?

ಸನ್ಮಾನ್ಯ ವೀರಣ್ಣನವರು ಇಲ್ಲಿಯೇ ಇದ್ದಾರೆ. ಆದ್ದರಿಂದ ಸಣ್ಣ ಉಳಿತಾಯದ ಬಗ್ಗೆ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರಬೇಕಾಗಿದೆ. About Small saving, I must say that the Government is going in a populist way. ಇವರು ನಿನ್ನೆ ಕೂಡ ಈ ಬಗ್ಗೆ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಕೇಂದ್ರಸರ್ಕಾರ ಈ ಬಗ್ಗೆ ರಾಜ್ಯದ ಪಾಲನ್ನು ಕಸಿದು ಕೊಳ್ಳುತ್ತಿದೆ ಎಂದು ಹೇಳಿದ್ದಾರೆ. ನನ್ನ ಹತ್ತಿರ ಇವಕ್ಕೆ ಸಂಬಂಧಪಟ್ಟ ಅಂಕಿಅಂಶಗಳು ಇವೆ ಇದರ ಪ್ರಕಾರ ಇವರು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದಾರೆಂಬುದನ್ನು ನೋಡಬೇಕಾಗಿದೆ. Small savings, is not a short term measure. You must understand it. It is a substantial measure of savings. ಆದ್ದರಿಂದ ಇದನ್ನು ಜಾಗರೂಕತೆಯಿಂದ ನೋಡ ಬೇಕಾಗುತ್ತದೆ. ಇದರ ಬಗ್ಗೆ ನೀವು ಹೇಳಿಕೆಗಳನ್ನು ಕೊಡಲು ನಾವು ಅಡ್ಡಿ ಬರುವುದಿಲ್ಲ. ನಿಮ್ಮ ಅಧಿಕಾರಿಗಳು ಜನರಿಗೆ ಅಂಚೆ ಕಛೇರಿಯಲ್ಲಿ ಉಳಿತಾಯ ಮಾಡಿ ಎಂದು ಹೇಳುತ್ತಾರೆ. ಆದರೆ Any time they can with draw it. I also handled the Small Savings. I used to warn the officers, whoever goes for this short term basis. I was telling "I am not interested". I used to say "I am not interested in your Post Office Savings." 75% of the Savings has now given by the Government of India recently. ಈಗ ಇಂದಿರಾ ವಿಕಾಸ ಪತ್ರ ಬಂದಿದೆ. ಕಿಸಾನ್ ವಿಕಾಸ ಪತ್ರ ಬರುತ್ತಿದೆ. ಇಷ್ಟು ಅವಕಾಶಗಳಿವೆ. ಸೇಲ್ಸ್ ಟ್ಯಾಕ್ಸ್‌ಗಿಂತ ಹೆಚ್ಚು ಆದಾಯ ಇದರಲ್ಲಿ ಬರುತ್ತದೆ. Proportion of the net gross saving ಇದು ಹೇಗೆ ಬೆಳೆಯುತ್ತದೆ ಎಂಬುದನ್ನು ನಾವು ನೋಡಬೇಕು In 1986-87, the net savings reached the level of only Rs. 170 Crores.

SRI M. VEERAPPA MOILY.—Don't try to laugh at it.

SRI VEERANNA.—Why do you jump from 1982-83 to 1986-87. You tell about 1984-85, 1985-86 also.

SRI VEERAPPA MOILY.—How much we are contributing to the State exchequer is important. Your quantum jump is not important. Instead of trying to understand...—With some responsibility, we are speaking. I thought I can just advise but now I think I must criticise because you have no heart to receive the advice.

ಶ್ರೀ ವೀರಣ್ಣ.—೧೯೮೩ ರಿಂದ ೧೯೮೭ಕ್ಕೆ ಏತಕ್ಕೆ ಜಂಪ್ ಆದಿರಿ, ಮಧ್ಯದಲ್ಲಿರುವುದನ್ನೂ ಹೇಳಿ.

SRI M. VEERAPPA MOILY.—There is no point in becoming arrogant. You are an young Minister and you must try to understand.

ಶ್ರೀ ವೀರಣ್ಣ.—ಮಧ್ಯೆ ಎರಡು ವರ್ಷದ್ದನ್ನು ಹೇಳುವುದಕ್ಕೆ ಏತಕ್ಕೆ ಬಿಟ್ಟಿರಿ.

SRI M. VEERAPPA MOILY.—I did not distort it. This is paying you very badly. I must tell you. I thought I can give you some advise and not as a matter of criticism.

The targets of the net savings increased to Rs. 100 Crores in 1983-84

Rs. 190 Crores in 1984-85,
Rs. 201 Crores in 1985-86,
Rs. 380 Crores in 1986-87.

The net savings reached the level of only Rs. 170 Crores. Even then, the targets for 1987-88 has been fixed at Rs. 355 Crores which you are not going to achieve. You have an ambitions project. ಷಾರ್ಟ್ ಟರ್ಮ್ ಡಿಪಾಸಿಟ್, ಪೋಸ್ಟ್ ಆಫೀಸ್‌ಗೆ ಹಾಕುವುದು, ಲೋಕಲ್ ಬಾಡೀಸ್, ಬೋರ್ಡ್ಸ್ ಹಾಗೂ ಕಾರ್ಪೊರೇಷನ್ಸ್ ಹಾಗೂ ಇಂಡಸ್ಟ್ರೀಸ್‌ಗಳಲ್ಲಿ month end deposit ಮಾಡತಕ್ಕದ್ದು and beginning of the month they will withdraw. ಈ ಕ್ರೆಡಿಟ್ ತೆಗೆದುಕೊಳ್ಳಲಿಕ್ಕೆ ನೀವು ಬೇಕಾಗಿಲ್ಲ. Such populist measures are not necessary. It is a substantial saving measure and it is not a populist measure. As on 30-11-87, the net savings are only Rs. 46 Crores as againt Rs. 56 Crores for the Corresponding period. ಇದಕ್ಕಿಂತಾಬೇಕಾ ? Because of the mis-management of the small savings measures, the net saving has come down to Rs. 46 Crores as against Rs. 56 Crores for the corresponding period of previous year. ತಮ್ಮ ಉತ್ಸಾಹಕ್ಕೆ ನಾನು ಖಂಡಿತವಾಗಿ ಮೆಚ್ಚಿಗೆ ತೋರಿಸುತ್ತೇನೆ. But it is misguiding and that is why I wanted to drive at.

೨-೦೦ ಪಿ.ಎಂ.

ತಮ್ಮ ಸ್ಟೇಟ್‌ಮೆಂಟ್ ನೋಡಿ. Gross is 67.18 crores, net savings is 59.62 crores. ಮತ್ತೆ ಪಿ.ಓ.ಆರ್.ಡಿ.ಎಸ್. ಪಿ.ಒ.ಟಿ.ಡಿ.ಎಸ್. ಇದರಲ್ಲಿ ೧೫.೧೬ (—) ಇದೆ There is completely a negative growth in the small savings. Gradually it has declined. ಇದರ ಬಗ್ಗೆ ತಾವು ಆರ್ಥ್ಯಸಿ ಉತ್ತರ ಕೊಟ್ಟರೆ ಒಳ್ಳೆಯದು. ವೆಕೆಂಟ್ ಲ್ಯಾಂಡ್ ಮೇಲೆ ತೆರಿಗೆ ಹಾಕಿ, ಸುಮಾರು ೨೧, ಕೋಟಿ ಬರುವಂತೆ ಮಾಡಿದ್ದೀರಿ. ಚಾರ್ಲ್ಸ್ ಕೊರಿಯಾ ಅವರು ವಿಚಾರ ಮಾಡಿದ ಪ್ರಕಾರ ಸುಮಾರು ೯೦ ಕೋಟಿ ಬರಬೇಕಾಗಿತ್ತು. ಅದು ಕೂಡ ಬೆಂಗಳೂರಿಗೆ ಮಾತ್ರ. He has assessed only for Bangalore. ತಾವು ೨೦ ಕೇಂದ್ರಗಳಿಗೆ ವಿಸ್ತರಿಸಿದ್ದೀರಿ. ಇದರಿಂದ ಸುಮಾರು ೧೨೫ ಕೋಟಿ ರೂಪಾಯಿ ಬರಬೇಕು. You can just imagine. It is an unlimited amonnt, ಇದರ ಅರ್ಥ ಏನೆಂದರೆ, ತಾವು ತಿಳಿದುಕೊಂಡು ಮಾಡಿದ್ದೀರೋ, ತಿಳಿದುಕೊಳ್ಳದೆ ಮಾಡಿದ್ದೀರೋ ಗೊತ್ತಿಲ್ಲ. Bangalore, Mysore, Mangalore. Belgaum. Huble and Dharwad. It these districts are taken into account, it will in to be less than 125 crores, and not 21 crores. That means, lot of corruption, lot of

harassment. ನೀವು ಕೇಳಿದ್ದೀರಿ ೨೧ ಕೋಟಿ ತಂದುಕೊಡುತ್ತಾರೆ. ಇದರಿಂದ ಏನಾಗುತ್ತದೆಂದರೆ As a result there may be gross evasion of the total process of law. ೧೨೫ ಕೋಟಿ ಬರಬೇಕು, ೨೧ ಕೋಟಿ ಮಾತ್ರ ಕೊಡುತ್ತಾರೆ, ಬಾಕಿ ಹಣ ಎಲ್ಲಿಗೆ ಹೋಗುತ್ತೇ ? It is totally a misconceived and not well thought of measure. ಕರ್ನಾಟಕದಲ್ಲಿ ಹೊರಗಡೆಯುವರು ಅಂದರೆ ಬಾಂಬೆ, ಡೆಲ್ಲಿಯುವರು ಬಂದು ಹಣ ಹೂಡುತ್ತಾರೆ, It will be a heaven for them. Taking advantage of any surplus place any vancant land they will land here with full air-bus load of Marawaris. Marawaris are monied peodle. They will land into Bangalore and many other headquarters. It will be an incentive for them to come in a big way. ಇದರಲ್ಲಿ ಸಾಮಾಜಿಕ ಸಮಸ್ಯೆಯೂ ಇದೆ. ಬರೀ ಸಂಪನ್ಮೂಲದ ಸಮಸ್ಯೆಯನ್ನು ಮಾತ್ರ ತೆಗೆದುಕೊಳ್ಳಬಾರದು. ಅರ್ಬನ್ ಲ್ಯಾಂಡ್ ಸೀಲಿಂಗ್ ಕಾನೂನು ತಂದಾಗ, ಅದನ್ನು ದುರುಪಯೋಗ ಮಾಡಿಕೊಂಡರು, ಇದರಿಂದ ಜನಗಳಿಗೆ ಹೆಚ್ಚು ಕಷ್ಟ ವಾಯಿತು. ಹೊರಗಡೆಯುವರು ಬಂದು ಜಾಗಗಳನ್ನು ಮಾನಾಪಲೈಸ್ ಮಾಡಿಕೊಳ್ಳುತ್ತಾರೆ. I don't call it as a resource moblisation measure. ಇದನ್ನು ರಿಸೋರ್ಸಸ್ ಮೊಬಲೈಜೇಷನ್ ಎಂದು ಹೇಳುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಹಿರಿಯ ಸದಸ್ಯರಾದಂಥ ಬಸವಲಿಂಗಪ್ಪನವರು ಹೆಚ್ಚಿಗೆ ಬೆಳಕು ಚೆಲ್ಲುತ್ತಾರೆ. ಇನ್ನು ಸೇಲ್ಸ್‌ಟ್ಯಾಕ್ಸ್ ಬಗ್ಗೆ ಹೇಳಬೇಕೆಂದರೆ, ಎಲೆಕ್ಟ್ರಾನಿಕ್ ಕ್ವಾರ್ಟ್ಸ್ ವಾಚ್‌ಗಳ ಮೇಲಿನ ತೆರಿಗೆಯನ್ನು ೧೨ ಪರ್ಸೆಂಟ್‌ನಿಂದ ೪ ಪರ್ಸೆಂಟ್‌ಗೆ ಇಳಿಸಿದ್ದಾರೆ ಇದರಿಂದ ಕಾಮನ್‌ಮ್ಯಾನ್‌ಗೆ ಲಾಭ ಇದೆಯೇ ? ಯಾರಾದರೂ ಬಡವರು ಕ್ವಾರ್ಟ್ಸ್ ವಾಚ್ ಕಟ್ಟಿರುವುದು ನೋಡಿದ್ದೀರಾ ? Common man is using some of the material not quarts watch ಹೆಚ್.ಎಂ.ಟಿ ಯ ವಾಚ್ ಸಹ ಅವರಿಗಿಲ್ಲ. We see Titan quartz watches advertisement in and around Bangalore. This is meant for them not for common man. ಇನ್ನು ಚಿಕೋರಿ ೧೩ ಪರ್ಸೆಂಟ್‌ನಿಂದ ೮ ಪರ್ಸೆಂಟ್ ಮಾಡಿದ್ದಾರೆ. ಇದನ್ನು ಕಾಮನ್. ಮ್ಯಾನ್ ಯಾರಾದರೂ ಕೊಂಡು ಕೊಳ್ಳುತ್ತಾರೆಯೇ ? ಇನ್ನು ಯೂಕಲಿಪ್ಟ್ಸ್, ಕ್ಯಾಸಿರಿನೋ. ೧೩ ಪರ್ಸೆಂಟ್‌ನಿಂದ ೮ ಪರ್ಸೆಂಟ್ ಮಾಡಿದ್ದಾರೆ. ಇದರಿಂದ ಯಾರಿಗೆ ಅನುಕೂಲ ಎನ್ನುವುದನ್ನು ಮಾನ್ಯ ಪಂಪಾಪತಿಯವರೇ ಹೇಳಬೇಕು. ಇದರಿಂದ ಶ್ರೀಮಂತರಿಗೆ ಟ್ಯಾಕ್ಸ್ ರಿಯಾಯಿತಿ ಸಿಕ್ಕಿದೆ. The power pool, monied lobby, has played their effective role. This measure is only to help a few people. not the common man. ಇನ್ನು ವಿನಿಯರ್ಸ್ ಬಗ್ಗೆ ಕನ್‌ಸೆಷನ್ ಇದೆ. ಆಟೋಮೊಬೈಲ್ಸ್ ಕಾರುಗಳ ಬಗ್ಗೆ ೮ ರಿಂದ ೬ ಪರ್ಸೆಂಟ್ ಮಾಡಿದ್ದಾರೆ. ಇದರಿಂದ ಕಾಮನ್ ಮ್ಯಾನ್ಗೆ ಏನಾದರೂ ಉಪಯೋಗ ಆಗುತ್ತದೆಯೇ ಬಸ್‌ಗೆ ಅಥವಾ ಟ್ರಕ್ಸ್‌ಗೆ ಏನಾದರೂ ಮಾಡಿದ್ದರೆ ಗೂಡ್ಸ್ ಟ್ರಾನ್ಸ್‌ಪೋರ್ಟೇಷನ್‌ನಲ್ಲಿ ಮತ್ತು ಪ್ಯಾಸೆಂಜರ್‌ಗೆ ಅನುಕೂಲವಾಗುತ್ತಿತ್ತು. Liquor-IML lobby is playing its effective role behind the back of this Government. Somebodyelse is controlling and you are not controlling. Do you think that with all these, you are controlling ? Impossibsle, It is proposed to reduce the tax on the first sale from 45 per cent to 35 per cent, from manufacturers to distributors. ಮಾನ್ಯುಫ್ಯಾಕ್ಚರರ್ಸ್ ಇದರಲ್ಲಿ ಏನಾಗುತ್ತದೆ ಬಹಳ ಇಂಟರ್‌ಸ್ಟಿಂಗ್ ಇದೆ. ಮ್ಯಾನ್ಯುಫಾಕ್ಚರರ್ಸ್ ಆದರೆ ಫ್ಯೂ ಡಿಸ್ಟಿಲರೀಸ್ ಇರುತ್ತಾರೆ. It is very easy to collect at source. ಕಲೆಕ್ಟ್ ಮಾಡಲಿಕ್ಕೆ ಆಗುತ್ತದೆ. ಡಿಸ್ಟ್ರಿಬ್ಯೂಟ್ ಆದ ಕೂಡಲೇ ಒಂದು ಎವೇಷನ್ ಆಗುತ್ತದೆ. ಸಾವಿರಾರು ಜನರ ಹತ್ತಿರ ಕಲೆಕ್ಟ್ ಮಾಡಬೇಕು. Distillers will be happy about it, Again, it, is proposed to reduce the tax on the first sale from 45 per cent. to 35 percent. Then distributors will have to pay 35 per cent on the profit margin. Justimagine ? You should have asked the distillers to pay from his pocket and you are making the distributors, thousands of

distributors, to get it from, of course, he will not give from out of profit margin. This is one type of revenue collection. This will adversely effect the collcetion. ಹೊಸ ಸಿಸ್ಟಮ್ ಇಂಟ್ರಡ್ಯೂಸ್ ಮಾಡಲಿಕ್ಕೆ ಹೋಗಿದ್ದೇವೆಂದು ಹೇಳಬಹುದು. ಇವರಿಗೆ ಕೇಂದ್ರದ ಸಿಸ್ಟಮ್ ಯಾವುದು, ಯಾವುದು ಅನುಕೂಲ ಆಗುತ್ತದೆ. ಅದನ್ನು ಇಂಟ್ರಡ್ಯೂಸ್ ಮಾಡುತ್ತಾರೆ ಉಪಯೋಗವಾಗದೇ ಇರುವುದು ಬಿಡುತ್ತಾರೆ, There will be evasion of taxes and it will adversely offect the collections. ಈಗಾಗಲೇ ಎಕ್ಸೈಜ್ ಟ್ಯಾಕ್ಸೇಷನ್ ಡ್ಯೂಟಿಯಲ್ಲಿ ಕಡಿಮೆಯಾಗಿದೆ. You are avoiding a sure point for uncertain points. Sir, whether any economist, whether any person in charge of a financial management can think of it. ಎಲ್ಲಿ ಸಿಕ್ಕುತ್ತದೆ ಅದನ್ನು ಹಿಡಿಯಬೇಕೇ, ಹೊರತು, ಟ್ಯಾಕ್ಸೆಷನ್ ಮೆಜರ್‌ನಲ್ಲಿ ಪರದಾಡಲಿಕ್ಕೆ ಹೋದರೆ. I am afraid this is not the correct method of levying the taxes.

ಇನ್ನು ಟಿ.ಓ.ಟಿ. ಬಗ್ಗೆ ರಿಡಕ್ಷನ್.— there is reduction of 2% in sales tax and dealers are benefitted by exemption. ಕಳೆದಸಾರಿ ಟಿ.ಓ.ಟಿ.ಯಲ್ಲಿಯೂ ಕೂಡ ಕಾರ್ ಡೀಲರ್ಸ್‌ಗೆ ವಿನಾಯಿತಿಯನ್ನು ಕೊಟ್ಟಿದ್ದಿರಿ. ಇದು ಸಂತೋಷದ ಸಂಗತಿ. ಏಕೆಂದರೆ ಕಾರ್ ಡೀಲರ್ಸ್, ಡಿಸ್ಟಿಲರ್ಸ್, they are all cross sections of the big people and mighty people. You have satisfied them. That is why he has stated that "I have the sense of contentment and fulfilment" He has satisfied all these big people. ಮತ್ತೊಂದು ಹಾರ್ಷ್ ಮೆಷರ್ಸ್ ತಂದಿದ್ದೀರಿ. There is Supreme Court decision. ಸುಪ್ರೀಂ ಕೋರ್ಟಿನ ಡಿಸಿಷನ್ ಕೂಡ ಇದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಕಾನೂನನ್ನು ನೋಡಿರುತ್ತಾರೋ ಇಲ್ಲವೊ ಗೊತ್ತಿಲ್ಲ. You are taking away the power of granting stay from the aprellate tribunal. You are taking away that power. ಅವರು ಅಪೀಲ್‌ಗೆ ಏತಕ್ಕೆ ಬರುತ್ತಾರೆ. ಈ ಕಂಡೀಷನ್ ಹಿಂದೆಯೂ ಇತ್ತು. ಇಂಥ ಪವರ್‌ನ್ನು ಕೊಡಬಾರದೆಂದು. ಇನ್‌ಕಂ ಟ್ಯಾಕ್ಸ್‌ನ್ನು ಕಟ್ಟುವಾಗ ಸುಪ್ರೀಂ ಕೋರ್ಟ್‌ನವರು ಇದನ್ನು ತೆಗೆದುಹಾಕಿದ್ದಾರೆ. ಇನ್ನು ಡಿಸ್‌ಪ್ಯೂಟೆಡ್ ಟ್ಯಾಕ್ಸ್‌ನ್ನು, on payment of disputed tax, what they argue? If you take away that power there will be lot of harassment ಇದರಿಂದ ಬಹಳ ಹೆರ್‍ಯಾಸ್‌ಮೆಂಟ್ ಆಗುತ್ತದೆ.

ಇನ್ನು ಪವರ್‌ನ್ನು ತೆಗೆಯುತ್ತಿದ್ದೀರಿ ಮತ್ತು ಸೆಪರೇಟ್ ಟ್ರಿಬ್ಯೂನಲ್ ಮಾಡಬೇಕೆಂದು ಹೊರಟಿದ್ದೀರಿ. ಇದರಿಂದ ಜಾಸ್ತಿ ಓವರ್ ಹೆಡ್ ಛಾರ್ಜಸ್ ಆಗುತ್ತದೆ. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದರೂ ತಮಗೆ ಇದರಲ್ಲಿ ಹೆಚ್ಚಿನ ಆಸಕ್ತಿ ಇದೆಯೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಕಳೆದಸಾರಿ ಎಂಟ್ರಿ ಟ್ಯಾಕ್ಸ್ ಹಾಕುವಾಗ ನಾವು ಏನು ಹೇಳಿದ್ದೆವು, ಎಂದರೆ ಇದನ್ನು ಸಿಂಗಲ್ ಪಾಯಿಂಟ್ ಮಾಡಬೇಕು. ಮಲ್ಟಿ ಪಾಯಿಂಟ್ ಮಾಡಬೇಡಿ ಎಂದು. ೨ ಪರ್ಸೆಂಟ್, ೩ ಪರ್ಸೆಂಟ್ ಎಂದು ಮಾಡುತ್ತಾ ಹೋದರೆ ಕೊನೆಗೆ ಸಂಪೂರ್ಣವಾಗಿ ಇದು ಕಸ್ಟಮರ್ಸ್‌ಗೆ ಹೋಗುತ್ತದೆ. "ಆದರೆ ಇದನ್ನು ಸಿಂಗಲ್ ಪಾಯಿಂಟ್ ಮಾಡುತ್ತೇವೆ. ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅವರು ಏನು ಆಶ್ವಾಸನೆಯನ್ನು ಕೊಟ್ಟಿದ್ದರು ಅದನ್ನು ಪೂರ್ತಿಯಾಗಿ ಇವತ್ತು ಮರೆತುಬಿಟ್ಟಿದ್ದಾರೆ. ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರವನ್ನು ಕ್ರಿಟಿಸೈಸ್ ಮಾಡಿದರು. ಪರ್ಸನಲ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಹಾಕಿದ್ದಕ್ಕೆ ಅವರು ಟೀಕೆ ಮಾಡಿದರು. ಜನಸಾಮಾನ್ಯರಿಗೆ ಇನ್‌ಕಂ ಟ್ಯಾಕ್ಸ್‌ನಲ್ಲಿ ಕನ್‌ಸೇಷನ್ ಕೊಟ್ಟರೆ ಅವರು ಸಂತೋಷ ಪಡಬೇಕು. ಕೇಂದ್ರದವರು ರೈತರಿಗೆ ಅನೇಕ ರೀತಿಯ ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಸರ್ಕಾರಿಯ ಕಮಿಷನ್‌ನವರು ರಿಪೋರ್ಟನ್ನು ಕೊಟ್ಟಿದ್ದು ಜನವರಿ ೧೯೮೮. ಸೆಂಟ್ರಲ್ ಬಜೆಟ್ ಬಂದಾಗಲೇ ಅದರಲ್ಲಿರತಕ್ಕ ಸಜೆಷನ್ಸ್‌ನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಅವರು ಮಾಡಿಪಾರೆ ಇದರ ಬಗ್ಗೆ ಮಾಡತಕ್ಕ ಆರ್ಗ್ಯುಮೆಂಟ್ ಇದೆ. ಇದು ಎಷ್ಟು ಮಾತ್ರಕ್ಕೂ ಸರಿಯಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಬಿಲ್ಸ್ ಆಫ್ ಎಕ್ಸೈಸ್ ಕಂಟ್ರಾಕ್ಟರ್ಸ್ ಮತ್ತು ಫಾರೆಸ್ಟ್ ಕಂಟ್ರಾಕ್ಟರ್ಸ್ ಬಗ್ಗೆ ಹೇಳುವುದಾದರೆ ಈ ಬಿಲ್ಸ್ ಬಗ್ಗೆ ರಿಕವರಿ ಮಾಡುವ ಬಗ್ಗೆ ಆಕ್ಷೇಪವನ್ನು ಎತ್ತಿದ್ದಾರೆ. This will hit the State resources only. ಏಕೆಂದರೆ ಇನ್‌ಕಂ ಟ್ಯಾಕ್ಸ್‌ನಲ್ಲಿ ಹೆಚ್ಚಿನ ಪಾಲು ಬರತಕ್ಕದ್ದು ರಾಜ್ಯ ಸರ್ಕಾರಕ್ಕೆ. What is done here? ಎಕ್ಸೈಸ್ ಕಂಟ್ರಾಕ್ಟರ್ಸ್ ಮತ್ತು ಫಾರೆಸ್ಟ್ ಕಂಟ್ರಾಕ್ಟರ್ಸ್‌ಗಳ ಸೋರ್ಸ್‌ನಿಂದ ಡಿಡಕ್ಟ್ ಮಾಡಬೇಕೆಂದಿದೆ. ಸೋರ್ಸ್ ಡಿಡಕ್ಟ್ ಮಾಡಿದರೆ you can augment the reveuue. ಅವರು ಮಾಡತಕ್ಕ ವ್ಯವಹಾರಗಳಿಗೆ ಎಲ್ಲಿ ವಸೂಲ್ ಮಾಡಬೇಕು. ಅದನು ಎಲ್ಲಿ ಹಿಡಿಯಬೇಕು. ಯಾವ ಮೂಲೆಯಲ್ಲಿ ಟ್ಯಾಕ್ಸ್ ಹಾಕಬೇಕೆಂದು ತಿದ್ದುಪಡಿಯನ್ನು ತರುವುದಕ್ಕೆ ಅವರು ಪ್ರಯತ್ನ ಮಾಡಿದ್ದಾರೆ. He has never thought of the State's interest when he spoke about it. ಇದರಿಂದ ಇನ್‌ಕಂ ಟ್ಯಾಕ್ಸ್ ಅಗ್ಮೆಂಟ್ ಆದರೆ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಪಾಲು ಬರುತ್ತದೆ. If you criticise, to that extent it will reduce. He is looking at the interest of excise contractors and forest contrators. ಕಲೆಕ್ಷನ್ ಎಂದು ಹೇಳತಕ್ಕದ್ದನ್ನು ಇವರು ಸ್ವಾಗತ ಮಾಡಬೇಕು ಆದರೆ ಇವರು ಏತಕ್ಕೆ ಈ ರೀತಿ ಮಾಡುತ್ತಿದ್ದಾರೆ ಎಂದು ನನಗೆ ಪರಮ ಆಶ್ಚರ್ಯವಾಯಿತು. ಈ ವಾದ ಖಂಡಿತವಾಗಿ ಸರಿಯಲ್ಲ. He should have rather welcomed saying that you are catching these people at the right point of time. ಈ ವಾದ ಖಂಡಿತ ಸರಿಯಲ್ಲ. Then he will be championing the cause of excise contractors and forest contractors. nothingelse. ಇವತ್ತು ಏನು ಇಲ್ಲಿ ಬಜೆಟ್ಟನ್ನು ಮಂಡಿಸಿದ್ದೀರಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ವಂದನೆಗಳು ಇನ್ನು ಜಿಲ್ಲಾ ಪರಿಷತ್ತಿನ ಬಗ್ಗೆ ಹೇಳುವುದಕ್ಕೆ ೫ ನಿಮಿಷ ಸಮಯ ಕೊಟ್ಟರೆ ನನ್ನ ಭಾಷಣವನ್ನು ಮುಗಿಸಿಬಿಡುತ್ತೇನೆ. ಏಕೆಂದರೆ ಅದು ರೂರಲ್ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟದ್ದು. ಜಿಲ್ಲಾ ಪರಿಷತ್ತುಗಳಿಗೆ ಸಂಬಂಧಪಟ್ಟ ವಿವರಗಳನ್ನು ಕೂಡ ಇದರಲ್ಲಿ ಕೊಟ್ಟಿದ್ದೀರಿ. Provision was 353.48 crores, up to December the amount released was 261.92 crores ತಾವು ಹೇಳಬಹುದು ೨-೩ ತಿಂಗಳಲ್ಲಿ ಪೂರೈಸುವುದಕ್ಕೆ ಆಗುವುದಿಲ್ಲ ಎಂದು Whatever that has been spent is more important. ಏಕೆಂದರೆ ಪ್ರತಿ ತಿಂಗಳು ಖರ್ಚು ಮಾಡಬೇಕೆಂದು ಇರತಕ್ಕದ್ದು. ಕೂಡ ೧೮೫ crores has been spent. That means, more than 80 crores has not been spent. Eeven under non-plan the amount relesed is 321 crores and what is spent is only 276 crores. ಆದರಲ್ಲಿ ಇದನ್ನು ಖಂಡಿತವಾಗಿ ಖರ್ಚು ಮಾಡುವುದಕ್ಕಾಗುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಒಂದು ವಿವರವನ್ನು ಕೊಡುತ್ತೇನೆ. ಇದು ಎಲ್ಲಾ ಜಿಲ್ಲೆಗಳಿಗೂ ಅನ್ವಯವಾಗುತ್ತದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಎಲ್ಲಿಯವರೆಗೆ ಇವರಿಗೆ ವಿಶ್ವಾಸ ಇದೆ ಎಂದರೆ. ಎಜುಕೇಷನ್ ಡಿಪಾರ್ಟ್‌ಮೆಂಟಿನಿಂದ ನಮ್ಮ ಜಿಲ್ಲೆಗೆ ೨.೬೬ ಕೋಟಿ ರೂಪಾಯಿ ಈ ವರ್ಷದ ಬಾಕಿ ಬರಬೇಕು. ಹಾಗೆಯೇ ೧೯ ಜಿಲ್ಲೆಯಿಂದನ್ನು ಗುಣಾಕಾರ ಹಾಕಿದರೆ ಎಷ್ಟು ಬರಬೇಕೆಂಬುದು ಸ್ಪಷ್ಟವಾಗುತ್ತದೆ. ಇದು ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾತ್ರ. ೧ನೇ ಏಪ್ರಿಲ್‌ಗೆ ಎಲ್ಲ ಲೆಕ್ಕ ಬರುತ್ತದೆ. ಒಂದೇ ಜಿಲ್ಲೆಯಲ್ಲಿ ೨೨೫೫ ವೇಕೆನ್ಸೀಸ್ ಇದ್ದರೆ ಉಳಿದ ೧೯ ಜಿಲ್ಲೆಗಳಿಗೆ ಲೆಕ್ಕ ಹಾಕಿದರೆ ಎಷ್ಟು ಇದೆ ಮಾಡಿದವರು ಅಧಿಕಾರ ಡೀಸೆಂಟ್ರಲೈಸ್ ಎಂಬುದು ಗೊತ್ತಾಗುತ್ತದೆ. Can they manage it? ಸಬ್‌ಪ್ಲಾನ್‌ಅನ್ನು ಡೀಸೆಂಟ್ರಲೈಸ್ ಮಾಡುತ್ತೇವೆಂದು ಹೇಳುತ್ತಾರೆ. ೧೯೮೭-೮೮ಕ್ಕೆ ಸಬ್‌ಪ್ಲಾನ್‌ಗೆ ೩೨ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಕೊನೆಗೆ ೧೨ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಾರೆ. ೧೯೮೮-೮೯ಕ್ಕೆ ನಿಮ್ಮ ಸಬ್ ಪ್ಲಾನೇ ಇಲ್ಲ. ಅದನ್ನು ಇಕಾನಮಿ ಮಾಡಿದ್ದೀರಾ? ಹೀಗಾದರೆ ಡೀಸೆಂಟ್ರಲೈಸೇಷನ್ ಮಾಡಿದ ಉದ್ದೇಶವಾದರೂ ಏನು? ಇಷ್ಟು ಮಾತ್ರವಲ್ಲ What is the decentralisation that you are going to bring abou. It is absolutely politically motivated, ಡಿಸಿಸಿ ಬ್ಯಾಂಕ್‌ನಲ್ಲಿ ಕೆಲಸ ನಡೆಯಲಿಲ್ಲ. ಇವರು ಹೇಳಿದವರಿಗೆ ಓಟು ಕೊಡಲಿಲ್ಲವೋ ಅಥವಾ ಅಧಿಕಾರಿಗಳು ಇವರ ಮಾತು ಕೇಳಲಿಲ್ಲವೋ ಗೊತ್ತಿಲ್ಲ. The

Govt. Order has been issued for withdrawing the services of the Co-operative Department from the Zilla Parishaths. ಇನ್ನು ಯಾವ ಯಾವ ಜಿಲ್ಲೆಯಲ್ಲಿ ಏನೇನು ಮಾಡುತ್ತಾರೋ ಕಾದು ನೋಡಬೇಕು.

ಆ ಒಂದು ಫಿಲಾಸಫಿಯಲ್ಲಿ ಅವಕಾಶವಿದೆ. ಇದನ್ನು ಮಾಡಬೇಕು. ತಾವು ಹೇಳುತ್ತೀರಿ ಜಿಲ್ಲಾ ಪರಿಷತ್ ಎಂದು. ಜನರ ಪ್ರತಿನಿಧಿಗಳಿಗೆ ಅಧಿಕಾರವೆಂದು ಜಿಲ್ಲಾ ಪರಿಷತ್ ಆಕ್ಟಿನ ಸೆಕ್ಷನ್ ೨೬೮ರ ಪ್ರಕಾರ ಜಿಲ್ಲಾಪರಿಷತ್ತಿಗೆ ಅಧಿಕಾರ ಎಲ್ಲಿದೆ ? According to Section 268, power has to be delegated only to the Officers not even to the Committees. ೬೦ ಮಂದಿ ಸದಸ್ಯರು ಕೊಡಬೇಕು. ಚರ್ಚೆ ಮಾಡಬೇಕು, ಅಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಒಂದು ಕಡೆ ಅಧಿಕಾರವನ್ನು ಕೊಡುವುದು ಮತ್ತೊಂದು ಕಡೆ ಅಧಿಕಾರವನ್ನು ತೆಗೆದುಕೊಳ್ಳುವುದು. ಇವರೇ ಕಳೆದವರ್ಷದ ಬಡ್ಜೆಟ್‌ನಲ್ಲಿ ಏಳನೇ ಪ್ಲಾನ್‌ನಲ್ಲಿ ೧೦ ಕೋಟಿ ರೂಪಾಯಿಗಳನ್ನು ಮಲ್ಟಿ ಹಾರ್ಬರ್‌ಗಾಗಿ ಖರ್ಚು ಮಾಡುತ್ತೇನೆಂದು ಹೇಳಿದ್ದರು. ಮೀನುಗಾರರಿಗೆ ಪ್ರತಿ ತಲೆಗೂ ಇನ್‌ಷೂರೆನ್ಸ್ ಮಾಡುತ್ತಾರೆ. ೧೦ಕೋಟಿ ದಿನನಿತ್ಯ ವ್ಯವಹಾರ ನಡೆಯುತ್ತದೆ. ಆದರೂ ಅವರು ಆರ್ಥಿಕವಾಗಿ ವ್ಯವಹಾರಿಕವಾಗಿ, ಸಮಾಜಿಕವಾಗಿ ಹಿಂದುಳಿದಿದ್ದಾರೆ. ಅವರ ಅಭಿವೃದ್ಧಿಗಾಗಿ ಒಂದು ನಯಾಪೈಸೆ ಯನ್ನೂ ಕೂಡ ಖರ್ಚು ಮಾಡಿಲ್ಲ. ಫಿಷರೀಸ್ ಸರ್ವೆ ಆಫ್ ಇಂಡಿಯಾ ಅವರು ೨೨ ಶೆಡ್‌ಗಳನ್ನು ಹಾಕಿದ್ದರು. ಫಸ್ಟ್‌ಸ್ಟೇಜ್ ಆದಮೇಲೆ ಸೆಕೆಂಡ್ ಸ್ಟೇಜ್ ಬೆಳಕೆ ಕಂಡಿಲ್ಲ. ಈಗ ಫಿಷರೀಸ್ ಇಂಡಿಯಾ ದವರು ಅವುಗಳನ್ನು ಗೋವಾಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಏತಕ್ಕೆಂದರೆ ಕರ್ನಾಟಕದಲ್ಲಿ ಏನು ಕೆಲಸ ಮಾಡುವುದಿಲ್ಲವೆಂದು ತೀರ್ಮಾನಮಾಡಿ ಪೂರ್ತಿಯಾಗಿ ಅವುಗಳನ್ನು ಕೊಂಡು ಹೊಯ್ದಿದ್ದಾರೆ, ಐಆರ್‌ಡಿಪಿಯಲ್ಲಿ ೧೦ ಪರ್ಸೆಂಟ್ ಇನ್‌ಫ್ರಾಸ್ಟ್ರಕ್ಚರ್ ಎಂದು ಕೊಡುತ್ತಾರೆ. ೧೦ ಪರ್ಸೆಂಟ್ ಅಡ್ಮಿನಿಸ್ಟ್ರೇಷನ್ ಖರ್ಚು ಕೊಡುತ್ತಾರೆ. ಒಂದೊಂದು ಜಿಲ್ಲೆಗೂ ೨೫ರಿಂದ ೩೦ ಲಕ್ಷ ರೂಪಾಯಿಗಳವರೆಗೂ ಕೇಂದ್ರ ಸರ್ಕಾರದವರು ಆಡಳಿತ ವೆಚ್ಚಕ್ಕಾಗಿ ಕೊಡುತ್ತಾರೆ. ಸರಿಯಾದ ರೀತಿಯಲ್ಲಿ ಸ್ಟಾಫ್ ಇಲ್ಲದಿದ್ದರೆ ಯಾವ ಜಿಲ್ಲೆಯಲ್ಲಿಯಾದರೂ ಏನೂ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. Each district will be losing 25 to 30 lakhs of Rupees. ಕೇಂದ್ರ ಸರ್ಕಾರದವರು ಹಣವನ್ನು ಕೊಡುವುದಿಲ್ಲವೆಂದು ಹೇಳುತ್ತೀರಿ. ಕೊಟ್ಟಂಥ ಹಣವನ್ನು ಖರ್ಚುಮಾಡುವುದಕ್ಕೆ ಸಿಬ್ಬಂದಿಯನ್ನು ನೇಮಕ ಮಾಡತಕ್ಕಂಥ ಪರಿಸ್ಥಿತಿ ಖಂಡಿತವಾಗಿಯೂ ನಿಮ್ಮಲ್ಲಿ ಇಲ್ಲ, ನೀವು ಏನು ಮಾಡುತ್ತಿದ್ದೀರೆಂದರೆ ಹಣವನ್ನು ಕೊಟ್ಟಿದ್ದರೂ ಮಿಸ್‌ಲೀಡ್ ಮಾಡಿ ಕೊಟ್ಟಿದ್ದೀರಿ. A Telex message has gone to every ZillaParishad. ಸೌತ್ ಕೆನರಾಕ್ಕೆ ಟೆಲೆಕ್ಸ್ ಮೆಸೇಜ್ ಬಂದಿದೆ. ಅದರಂತೆ ಮಾರ್ಚ್ ತಿಂಗಳಲ್ಲಿ ಬರೆ ೮೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಬಹುದು, ಆದರೆ ಜಿಲ್ಲಾ ಪರಿಷತ್ ಜನರಿಗೆ ಖರ್ಚುಮಾಡುವುದಕ್ಕಾಗುವುದಿಲ್ಲ, ಎಲ್ಲ ಬಿಲ್ ಪೆಂಡಿಂಗ್ ಇದೆ. I am reading the text of the Telegram. 80 lakhs allotted to your District for Rural Development Programmes. Please utilise full grant before the end of March. Please report. ೮೦ ಲಕ್ಷ ರೂಪಾಯಿಗಳಷ್ಟಾದರೂ ಖರ್ಚು ಮಾಡುತ್ತೀರೆಂದು ನಾವು ತಿಳಿದುಕೊಂಡಿದ್ದೆವು. ಮಾರ್ಚ್ ಆಯಿತು ಮುಂದೆಯೂ ಕೂಡ ಖರ್ಚು ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಅವರು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ಒಂದು ನಿರ್ದಿಷ್ಟವಾದ ಉದಾಹರಣೆಯನ್ನು ಕೊಡುತ್ತಿದ್ದೇನೆ. ಅವರಿಗೆ The intimation for any clearance of Treasury should so from the Deputy Secretary ಇಂಟಿಮೇಷನ್ ಕೊಡುವುದಿಲ್ಲ. (Sources and Budget) ಟ್ರಜರಿಯವರಿಗೆ ಬಿಲ್ ಕ್ಲೈಮ್ ಮಾಡುವುದಕ್ಕೂ ಆಗುತ್ತಿಲ್ಲ. ಈ ರೀತಿಯಾಗಿ ಟ್ರಜರಿ ಮ್ಯಾನೇಜ್‌ಮೆಂಟ್ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇದುವರೆವಿಗೂ ಆಗಿಲ್ಲ. Gross interference in the routine administration of this state. ಇದಕ್ಕೆ ಯಾರನ್ನು ಹೊಣೆ ಮಾಡಬೇಕು. The Treasury Bill which was presented in January 1988 was encashed only on 18-2-1988. So far as the Bills of Zilla Parishads are concerned, a Treasury Bill which was presented in December 1987 was encashed only in February 1988 Further, a Bill which was presented in October 1987 by the Zilla Parishad was encashed on 10-12-1987. These are the concrete examples. ಟ್ರಜರಿ

ಯಲ್ಲಿ ಎರಡು ತಿಂಗಳು ಮತ್ತು ಮೂರು ತಿಂಗಳಾದಮೇಲೆ ಹಣ ಬಿಡುಗಡೆ ಮಾಡಿದ್ದಾರೆ. ಹಣ ಬಿಡುಗಡೆ ಮಾಡಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಟ್ರೆಜರಿಯವರು ಬಿಲ್‌ಗಳನ್ನು ಹಿಡಿದುಕೊಂಡಿದ್ದಾರೆ, ಇದರಿಂದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಕೆಲಸ ಮಾಡುವುದಕ್ಕಾಗುತ್ತಿಲ್ಲ. ತಿಂಗಳಲ್ಲಿ ೨೦ ದಿವಸ ಹಣ ಇರುವುದಿಲ್ಲ. ಮಂಡಲ ಪ್ರಧಾನರು, ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಚಾತಕಪಕ್ಷಿಯಂತೆ ಹಣಕ್ಕಾಗಿ ಕಾದುಕೊಂಡು ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಇದೆ. These Zilla Parishads and Mandal Panchayats are working at the sheer mercy of the Government, Can you call it decentralisation? It is a fraud in the name of the decentralisation. ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಇವತ್ತು ಸಂಪೂರ್ಣವಾಗಿ ಅಭಿವೃದ್ಧಿಯನ್ನು ಸರ್ಕಾರದ ಮಟ್ಟದಲ್ಲಿ ಮತ್ತು ಜಿಲ್ಲಾ ಪರಿಷತ್ ಮಟ್ಟದಲ್ಲಿ ಸ್ಥಗಿತಗೊಳಿಸಿದ್ದಾರೆ. ಕರ್ನಾಟಕ ರಾಜ್ಯ ಹಿನ್ನಡೆಯಲ್ಲಿ ಸಾಗುತ್ತಿದೆ. ಕರ್ನಾಟಕದ ರೈತರಿಗೆ ಸಾಲ ಕೊಡುವುದು It is also a kind of source mobilisation and resources. ರೈತರಿಗೆ ಆಸೆ ತೋರಿಸಿ ಹೆಚ್ಚು ಹಣ ಬಂದರೆ on that they will get interest. ಸರ್ಕಾರ ಸೊಸೈಟಿಯವರಿಗೆ ಅಥವಾ ಪಿ.ಎಲ್.ಡಿ. ಬ್ಯಾಂಕುಗಳಿಗೆ ಹಣ ಕೊಡಲಿಲ್ಲ, ಇವರು ಎಲ್ಲಾ ಕಾರುಬಾರು ನಡೆಸುವುದು ರೈತರ ಹಣದಲ್ಲಿ. ಆದರಲ್ಲೇ ಇವರ ಚಮತ್ಕಾರಗಳು. ಇಂಥ ಅಧೋಗತಿಗೆ ತಳ್ಳತಕ್ಕ ಬಜೆಟ್ಟನ್ನು ಇವತ್ತು ರಾಜ್ಯ ಸರ್ಕಾರ ಸದನದ ಮುಂದೆ ತಂದಿದೆ, ಆದ್ದರಿಂದ ಇದನ್ನು ತೀವ್ರವಾಗಿ ವಿರೋಧಿಸಿ ಇನ್ನಾದರೂ ತಿಳಿವಳಿಕೆ ಬಂದು ಸರಿಯಾದ ಆರ್ಥಿಕ ಸಮನ್ವಯತೆಯನ್ನು ಕರ್ನಾಟಕ ರಾಜ್ಯದಲ್ಲಿ ಸಾಧನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ನಾವು ಕಟ್ಟಿಕೊಂಡಿದ್ದ ಆಸೆ ಸಂಪೂರ್ಣವಾಗಿ ನಿರಾಶೆಯಾಗಿದೆ ಎಂದು ಹೇಳಿ ನನಗೆ ಮಾತನಾಡಲು ಸಾಕಷ್ಟು ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೨-೩೦ ಪಿ ಎಂ.

† ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಹಣಕಾಸಿನ ಮಂತ್ರಿಗಳು ಮತ್ತು ರಾಜ್ಯದ ಮುಖ್ಯಮಂತ್ರಿಗಳೂ ಆದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಂಡಿಸಿರುವ ಆಯವ್ಯಯ ಪತ್ರವನ್ನು ನಾನು ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ನಾನು ಈ ಸಭೆಯ ಮುಂದಿಡುತ್ತಿದ್ದೇನೆ, ಇವತ್ತಿನ ದಿವಸ ಕರ್ನಾಟಕ ರಾಜ್ಯವು ಇಡೀ ರಾಷ್ಟ್ರಕ್ಕೆ ಮಾದರಿಯಾದ ಆಡಳಿತವನ್ನು ಕೊಡುವ ದಿಸೆಯಲ್ಲಿ ಅನೇಕ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಈಗಾಗಲೇ ಜನ ಮನಕ್ಕೆ ಮುಟ್ಟಿರುವ ದಿಸೆಯಲ್ಲಿ ಕಂಡುಬರುವ ಯೋಜನೆಗಳನ್ನು ಇವತ್ತು ಜಾರಿಗೆ ತರುತ್ತಿದೆ. ಅದನ್ನು ಸ್ವಾಗತಿಸುತ್ತಿದ್ದೇನೆ. ಇಂತಹ ಯೋಜನೆಗಳಲ್ಲಿ ಗ್ರಾಮಾಂತರ ಪ್ರದೇಶದ ಎಲ್ಲ ಜನತೆಗೆ ಕುಡಿಯುವ ನೀರನ್ನು ಕೊಡುವಂತಹದ್ದು ಬಹಳ ಮುಖ್ಯವಾದುದು. ಅದೇ ರೀತಿ ಗ್ರಾಮಾಂತರ ಪ್ರದೇಶದಲ್ಲಿರುವ ಎಲ್ಲ ಗ್ರಾಮಗಳ ರಸ್ತೆಗಳನ್ನೂ ಸಹ ಮಾಡಿದ್ದಾರೆ. ಇವತ್ತಿನವರೆಗೂ ಕಳೆದ ೩೫ ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸರ್ಕಾರ ಈ ರಾಜ್ಯದಲ್ಲಿ ಆಡಳಿತವನ್ನು ಮಾಡಿತ್ತು. ಆದರೆ ಅವರು ಎಂದೂ ಮಾಡಿರದಂತಹ ಪ್ರಗತಿಯನ್ನು ಅಂದರೆ ಶಾಲಾ ಕಟ್ಟಡಗಳನ್ನೂ ಸಹಿತ ನಮ್ಮ ಸರ್ಕಾರ ಕಟ್ಟಿಸಿಕೊಟ್ಟಿದೆ. ಈ ದಿಸೆಯಲ್ಲಿ ಬಹುದೊಡ್ಡ ಕೆಲಸ ಕಾರ್ಯಗಳನ್ನು ನಮ್ಮ ರಾಜ್ಯ ಸರ್ಕಾರ ಮಾಡುತ್ತಿದೆ. ಗ್ರಾಮಗಳಲ್ಲಿರುವಂತಹ ಅನೇಕ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳೇ ಇರಲಿಲ್ಲ. ಅಂತಹ ಗ್ರಾಮಗಳಲ್ಲಿ ಇವತ್ತು ಶಾಲಾ ಕಟ್ಟಡಗಳೂ ಕೂಡ ಆಗುತ್ತಿವೆ. ಮುಖ್ಯವಾಗಿ ಕುಡಿಯುವ ನೀರಿನ ಅನುಕೂಲತೆ ಯಾವ ಗ್ರಾಮಗಳಲ್ಲಿ ಇರಲಿಲ್ಲವೋ ಅಂತಹ ಎಲ್ಲ ಗ್ರಾಮಗಳಿಗೂ ಇವತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದೆ. ಅನೇಕ ಗ್ರಾಮಗಳು ರಸ್ತೆಗಳನ್ನೇ ಕಂಡಿರಲಿಲ್ಲ. ಅಂತಹ ಅನೇಕ ಗ್ರಾಮಗಳಿಗೆ ಇವತ್ತು ರಸ್ತೆಗಳನ್ನೂ ಸಹ ಮಾಡಿಸಿದ್ದಾರೆ. ಈಗ ನಮ್ಮಲ್ಲಿರುವ ಈ ಒಂದು ಸಂಪನ್ಮೂಲಗಳ ಆಧಾರದ ಮೇಲೆ ಅನೇಕ ಯೋಜನೆಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ, ಆದರಲ್ಲಿ ಮುಖ್ಯವಾಗಿ ಶಿಕ್ಷಣದ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಡುವ ದೃಷ್ಟಿಯಿಂದ ಎಲ್ಲ ಮಕ್ಕಳಿಗೂ ಪುಕ್ಕಟೆಯಾಗಿ ಪುಸ್ತಕಗಳನ್ನೂ ಸಹಿತ ಒದಗಿಸುತ್ತಾ ಬಂದಿದೆ. ಅದೇ ರೀತಿ ಬಡತನದಲ್ಲಿರುವ ಪರಿಶಿಷ್ಟ ಜಾತಿ ಹಾಗೂ ವರ್ಗದ ಹಾಗೂ ಹಿಂದುಳಿದ ವರ್ಗದ ಮಕ್ಕಳಿಗೆ ಮೈಮೇಲೆ ಹಾಕಿಕೊಳ್ಳುವುದಕ್ಕೆ ಬಟ್ಟೆಯನ್ನೂ ಸಹ ನಮ್ಮ ಸರ್ಕಾರ ಪೂರೈಸಿದೆ. ಇವತ್ತಿನ ದಿವಸ ಸಾಕ್ಷರತೆಯನ್ನು ಹೆಚ್ಚು ಮಾಡುವ

ದಿಸೆಯಲ್ಲೂ ನಮ್ಮ ಸರ್ಕಾರ ಕೆಲಸ ಮಾಡಿದೆ. ಜನತೆಗೆ ಉದ್ಯೋಗವನ್ನು ಕೊಡುವ ದಿಸೆಯಲ್ಲೂ ಸಹ ಅನೇಕರಿಗೆ ಉದ್ಯೋಗಗಳನ್ನು ಗ್ರಾಮಾಂತರ ಪ್ರದೇಶಗಳಲ್ಲೂ ಅದೇ ರೀತಿ ಪಟ್ಟಣ ಪ್ರದೇಶಗಳಲ್ಲೂ ಪ್ರತಿಯೊಂದು ಜಿಲ್ಲೆಯಲ್ಲೂ ಸಹ ಹೆಚ್ಚಿನ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡುವ ದಿಸೆಯಲ್ಲಿ ಕೆಲಸ ಮಾಡುತ್ತಿದೆ. ಆದರೆ ಕಳೆದ ೩ ವರ್ಷಗಳಿಂದಲೂ ಪ್ರತಿ ವರ್ಷವೂ ಬರಗಾಲ ಕಾಡುತ್ತಿರುವುದರಿಂದ ಅನೇಕ ಯೋಜನೆಗಳನ್ನು ಮಾಡಬೇಕೆಂಬ ಆಸೆ ಇದ್ದರೂ ಸಹ ಹಣಕಾಸಿನ ಕೊರತೆಯು ಕಾರಣ ಅನೇಕ ಯೋಜನೆಯನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಈ ದಿಸೆಯಲ್ಲಿ ಇನ್ನೂ ಮಾಡಬೇಕಾದ ಕೆಲಸಗಳು ಬೇಕಾದಷ್ಟು ಇವೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ ಸಭೆಯಲ್ಲಿ ಕೋರಂ ಇಲ್ಲ.

ಅಧ್ಯಕ್ಷರು.—ತಾವು ಕೂಡಿ. ಸಭೆಯಲ್ಲಿ ಕೋರಂ ಇದೆ. ಅದನ್ನು ನಾನು ನೋಡುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್.—ಆರ್ಥಿಕ ಅಭಿವೃದ್ಧಿಯನ್ನು ಸಾಧನೆ ಮಾಡುವ ಸಲುವಾಗಿ ಸರ್ಕಾರ ಈ ತರಹದ ಅನೇಕ ಸವಲತ್ತುಗಳನ್ನು ರೈತರಿಗೆ ಕೊಡುತ್ತಿದೆ. ಅದರಲ್ಲೂ ಕೊಳವೆ ಬಾವಿಯನ್ನು ತೆಗೆಯುವ ಯೋಜನೆಯನ್ನು ಹಾಕಿಕೊಂಡು, ಕೊಳವೆ ಬಾವಿ ವಿಫಲವಾದಂತಹ ಪ್ರಸಂಗಗಳಲ್ಲಿ ಸಾಲವನ್ನು ಮನ್ನಾ ಮಾಡುವ ಯೋಜನೆಯನ್ನೂ ಸಹ ಜಾರಿಗೆ ತಂದಿದೆ. ಈ ರೀತಿಯ ಸವಲತ್ತುಗಳನ್ನು ಕಲ್ಪಿಸುವ ದಿಸೆಯಲ್ಲಿ ಅನೇಕ ಕಾರ್ಯಗಳನ್ನೂ ಸರ್ಕಾರ ಮಾಡುತ್ತಿದೆ. ಇದರ ಜೊತೆಗೆ ದೊಡ್ಡ ನೀರಾವರಿಗೂ ಕೂಡಾ ಹೆಚ್ಚಿನ ಹಣವನ್ನು ಒದಗಿಸಿದೆ. ಇದರ ಒಂದು ಅಡಚಣೆಯಿಂದಾಗಿ ಇನ್ನೂ ಅನೇಕ ಯೋಜನೆಗಳನ್ನು ತೆಗೆದುಕೊಳ್ಳುವುದು ಕಷ್ಟವಾಗಿದೆ. ಇವತ್ತಿನ ದಿವಸ ಯಾರಿಗೆ ಸಾಲವನ್ನು ಕೊಟ್ಟಿದ್ದೇವೆ, ಅಂತಹವರಿಗೆ ಸಾಲದ ಬಡ್ಡಿಯನ್ನು, ಕೆಲವು ಕಡೆ ಸಾಲವನ್ನೂ ಮನ್ನಾ ಮಾಡಿ ಪ್ರೋತ್ಸಾಹವನ್ನು ಒದಗಿಸಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಸರ್ಕಾರ ರೈತರಿಗೆ ಬಡ್ಡಿ ಮನ್ನಾ ಮಾಡಿ ಎಷ್ಟು ಕೋಟಿ ರೂಪಾಯಿಗಳ ಅನುಕೂಲತೆಯನ್ನು ರೈತರಿಗೆ ಕೊಟ್ಟಿದೆ ?

ಅಧ್ಯಕ್ಷರು.—ಹೀಗೆ ನೀವು ಮಧ್ಯೆ ಮಾತನಾಡಿದರೆ, ಆಮೇಲೆ ತಾವು ಭಾಷಣ ಮಾಡುವಾಗಲೂ ಅವರು ಮಧ್ಯೆ ನಿಂತು ಮಾತನಾಡುತ್ತಾರೆ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಇದರ ಬಗ್ಗೆ ಸಹಕಾರಿ ಮಂತ್ರಿಗಳು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ಅನೇಕ ಜನರಿಗೆ ಸರ್ಕಾರ ಉತ್ತರ ಕೊಟ್ಟಿದೆ. ರೈತರಿಗೆ ಅನೇಕ ದೃಷ್ಟಿಯಲ್ಲಿ ಸಹಾಯ ಮಾಡಿದೆ. ತನ್ನ ಆರ್ಥಿಕ ಪರಿಸ್ಥಿತಿ ಈ ರೀತಿ ಇದ್ದರೂ ಕೂಡಾ ಸರ್ಕಾರ ಗ್ರಾಮೀಣ ರೈತರ, ಕೃಷಿ ಕಾರ್ಮಿಕರ ಸಹಾಯದ ಬಗ್ಗೆ ಗಮನ ಹರಿಸಿದೆ. ಅಧಿಕಾರ ವಿಕೇಂದ್ರೀಕರಣದ ಮೂಲಕ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೆ ತಂದು ಕಳೆದ ಒಂದು ವರ್ಷದಲ್ಲಿ ಅವು ಕೆಲಸ ಮಾಡುತ್ತಾ ಬಂದಿವೆ. ಇವುಗಳ ಕೆಲಸ ಕಾರ್ಯಗಳು ಅನೇಕ ಜನರಿಗೆ ಗೊತ್ತಾಗಿದೆ. ಅಧಿಕಾರ ವಿಕೇಂದ್ರೀಕರಣದಿಂದ ರಾಜ್ಯದಲ್ಲಿ ಲಾಭದಾಯಕ ಪ್ರಗತಿಯನ್ನು ಕಾಣುತ್ತಿದ್ದೇವೆ, ರಸ್ತೆ ಇರಬಹುದು, ಶಾಲಾ ಕಟ್ಟಡ ಇರಬಹುದು, ಗ್ರಾಮಾಂತರ ಪ್ರದೇಶದ ಬೆಳವಣಿಗೆಯ ದೃಷ್ಟಿಯಿಂದ ಅನೇಕ ಯೋಜನೆಗಳು ಕಂಡು ಬರುತ್ತಿವೆ. ಒಂದು ವರ್ಷದ ಈ ಹಸುಳೆ ಇನ್ನೂ ಪ್ರಯೋಜನ ಕಾರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಹಣಕಾಸಿನ ಅಡಚಣೆಯಿಂದ ಅವನ್ನೆಲ್ಲಾ ಮಾಡುವುದಕ್ಕಾಗಿಲ್ಲ ಎಂದು ಹೇಳಬೇಕಾಗುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಧಿಕಾರ ವಿಕೇಂದ್ರೀಕರಣ ಮಾಡಿ ಗ್ರಾಮಾಂತರ ಪ್ರದೇಶದ ಜನರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ. ರೈತರ ಆರ್ಥಿಕ ಅಭ್ಯುದಯ ಮಾಡುವುದಕ್ಕೆ ಸಾಕಷ್ಟು ಸಹಾಯವನ್ನು ಮಾಡುತ್ತಿದೆ. ಸಹಕಾರಿ ರಂಗದಲ್ಲಿ ಸಾಕಷ್ಟು ಕೆಲಸ ಮಾಡಿ ಜನತೆಗೆ ಸಾಲದ ಸಹಾಯವನ್ನು ಒದಗಿಸಿ ಕೊಟ್ಟಿದೆ. ಅವರು ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಿದರೆ ಬಡ್ಡಿಯ ಜೊತೆಗೆ ಕೆಲವು ರೀತಿಯ ವಿನಾಯಿತಿಯನ್ನು ಸಹಾ ತೋರಿಸಿದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಹಣಕಾಸಿನ ಅಡಚಣೆ ಇರುವುದರಿಂದ ಕೇಂದ್ರ ಸರ್ಕಾರ ಯಾವ ಒಂದು ತಾರತಮ್ಯ ಮಾಡುತ್ತಾ ಇದೆ, ರಾಜ್ಯಗಳಿಗೆ ಯಾವ ರೀತಿ ಹಣಕಾಸಿನ ಸೌಲಭ್ಯವನ್ನು ಒದಗಿಸಬೇಕೋ, ನ್ಯಾಯವಾಗಿ ಕೊಡಬೇಕೋ ಅದನ್ನು ಈ ದಿಸೆಯಲ್ಲಿ ಕೊಡುತ್ತಾ ಇಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು ಈಗಾಗಲೇ ಇವನ್ನು ಕೇಂದ್ರಕ್ಕೆ ತಿಳಿಸಿದ್ದಾರೆ. ಇದು ಕೇವಲ ಒಂದು ರಾಜ್ಯದ ಬೇಡಿಕೆ ಅಲ್ಲ, ಸಮಗ್ರ ರಾಷ್ಟ್ರದಲ್ಲಿರುವ ಕಾಂಗ್ರೆಸ್ಸೇತರ ರಾಜ್ಯಗಳ ಬೇಡಿಕೆ ಅಲ್ಲ, ಕಾಂಗ್ರೆಸ್ ಸರ್ಕಾರ ಇರುವ ರಾಜ್ಯಗಳು

ಕೂಡಾ ತಮ್ಮ ನ್ಯಾಯಯುತ ಹಣವನ್ನು, ಸಹಾಯವನ್ನು ಕೊಡಬೇಕೆಂದು ಕೇಂದ್ರಕ್ಕೆ ಬೇಡಿಕೆಗಳನ್ನು ಕಳುಹಿಸಿವೆ. ರಾಜ್ಯದ ಅನೇಕ ಯೋಜನೆಗಳು ಕಾರ್ಯಗಳು ಆಗಬೇಕಾದರೆ ಕೇಂದ್ರ ಸರ್ಕಾರ ಹೆಚ್ಚಿನ ಹಣವನ್ನು, ನ್ಯಾಯಯುತ ಹಣವನ್ನು ರಾಜ್ಯ ಸರ್ಕಾರಕ್ಕೆ ಕೊಡುವುದು ಬಹಳ ಅಗತ್ಯವಾಗಿದೆ. ಈ ದಿಸೆಯಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ತಮ್ಮ ಅನೇಕ ವಿಚಾರಗಳನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದಾರೆ, ಈ ದಿಸೆಯಲ್ಲಿ ಕೇಂದ್ರ ಸರ್ಕಾರ ಹೆಚ್ಚಿನ ಹಣಕಾಸಿನ ಸಹಾಯವನ್ನು ಮಾಡಬೇಕಾಗಿದೆ ಈಗ ಮುಖ್ಯವಾಗಿ ನಾನು ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಅನೇಕ ಉದ್ಯಮಗಳು ವಿದ್ಯುತ್ ಕೊರತೆಯಿಂದ ಕುಂಠಿತಗೊಂಡಿವೆ. ಇದರಿಂದ ಅನೇಕ ಜನರಿಗೆ ಉದ್ಯೋಗ ಇಲ್ಲದಂತಾಗಿದೆ. ಈ ದಿಸೆಯಲ್ಲಿ ಕೂಡಾ ಸರ್ಕಾರ ತನ್ನ ಪ್ರಯತ್ನವನ್ನು ಮಾಡುತ್ತಿದೆ. ವಿದ್ಯುತ್ ಸರಬರಾಜು ಮಾಡುವುದರಲ್ಲಿ ಕರ್ನಾಟಕ ರಾಜ್ಯ ಇಡೀ ದೇಶದಲ್ಲಿಯೇ ಪ್ರಥಮ ಸ್ಥಾನವನ್ನು ಒಂದು ಕಾಲದಲ್ಲಿ ಪಡೆದಿತ್ತು. ಆದರೆ ಮಳೆಯ ಅಭಾವದಿಂದ ಜಲವಿದ್ಯುತ್ ಯೋಜನೆಗಳ ಉತ್ಪಾದನೆ ಕುಂಠಿತಗೊಂಡಿತು. ವಿದ್ಯುತ್ ಕೊರತೆ ನಮ್ಮಲ್ಲಿ ಇದ್ದು ಈ ಬಗ್ಗೆ ಸಹಾಯ ಮಾಡಲು ಕೇಂದ್ರಕ್ಕೆ ನಮ್ಮ ಸರ್ಕಾರ ಬೇಡಿಕೆಯನ್ನು ಸಲ್ಲಿಸಿದೆ, ನಮ್ಮ ರಾಜ್ಯದಲ್ಲಿ ರಾಷ್ಟ್ರಮಟ್ಟದ ಅನೇಕ ಉದ್ದಿಮೆಗಳನ್ನು ಸ್ಥಾಪನೆ ಮಾಡುವ ಅವಕಾಶಗಳು ಹೇರಳವಾಗಿವೆ.

ಉದ್ದಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಖ್ಯವಾಗಿ ಬೇಕಾದುದು ವಿದ್ಯುಚ್ಛಕ್ತಿ. ವಿದ್ಯುಚ್ಛಕ್ತಿ ಕೊರತೆಯಿಂದ ಅನೇಕ ಉದ್ಯಮಗಳು ಬೆಳೆದು ಬರುವುದಕ್ಕೆ ಅಡಚಣೆಯಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ಹಣಕಾಸಿನ ಸಹಾಯ ಮಾಡಬೇಕಾಗುತ್ತದೆ. ನಮ್ಮಲ್ಲಿರುವ ಸರ್ಕಾರಿ ಉದ್ದಿಮೆಗಳು ಇವತ್ತು ಬೇಕಾದಷ್ಟು ಲಾಭದಾಯಕದಲ್ಲಿರಬೇಕಾಗಿತ್ತು. ಆದರೆ ಲಾಭದಾಯಕವಾಗಿಲ್ಲ. ಒಂದೇ ದಿವಸದಲ್ಲಿ ಮಾಯ ಮಂತ್ರ ಮಾಡಿ ಅವುಗಳನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಅನೇಕ ವರ್ಷಗಳಿಂದ ಅನುಚಾನವಾಗಿ ಲುಕ್ಷಾನಾಗುತ್ತಾ ಬಂದಿವೆ. ಇದಕ್ಕೆ ಆಡಳಿತದ ತೊಂದರೆ ಇರಬಹುದು. ಹಣಕಾಸಿನ ತೊಂದರೆ ಇರಬಹುದು. ಕಚ್ಚಾ ವಸ್ತುಗಳ ತೊಂದರೆ ಇರಬಹುದು. ಮಾರುಕಟ್ಟೆಯ ಸಮಸ್ಯೆ ಇರಬಹುದು. ಈ ಎಲ್ಲಾ ಕಾರಣಗಳಿಂದ ನಮ್ಮ ಸರ್ಕಾರದ ಉದ್ದಿಮೆಗಳು ಲುಕ್ಷಾನಿನಲ್ಲಿವೆ. ಅವುಗಳನ್ನು ಸರಿಪಡಿಸುವುದು ಒಂದೇ ವರ್ಷದಲ್ಲಾಗುವುದಿಲ್ಲ. ಈ ದಿಸೆಯಲ್ಲಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸರ್ಕಾರಿ ಉದ್ದಿಮೆಗಳು ಹೆಚ್ಚು ಲಾಭದಾಯಕವಾಗಿ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಕಾರ್ಖಾನೆಯನ್ನು ಪ್ರಾರಂಭ ಮಾಡಿದ ಮೂಲ ಉದ್ದೇಶ ಏನು ಇದೆ ಎಂದರೆ, ಅದು ರಾಜ್ಯಕ್ಕೆ ಅನುಕೂಲವಾಗಬೇಕು. ಜೊತೆಗೆ ದೇಶದ ಜನತೆಗೆ ಅನುಕೂಲವಾಗಬೇಕು ಎಂದು ಈ ದಿಸೆಯಲ್ಲಿ ಅವುಗಳನ್ನು ಲಾಭದಾಯಕವಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಈ ಎಲ್ಲಾ ಕಾರಣಗಳಿಂದ ಕಾರ್ಖಾನೆಗಳು ಲುಕ್ಷಾನಿನಲ್ಲಿ ನಡೆಯುತ್ತಿವೆ. ಇಡೀ ರಾಜ್ಯದ ಸಂಪನ್ಮೂಲವನ್ನು ಮತ್ತು ಜನತೆಗೆ ಉದ್ಯೋಗವನ್ನು ಒದಗಿಸುವಂತಹ ಕೇಂದ್ರಗಳು ಇವು ಆಗಿವೆ. ಈ ಕಡೆಗೆ ಸರ್ಕಾರ ಹೆಚ್ಚಿನ ಲಕ್ಷ್ಯ ವಹಿಸಬೇಕಾಗಿದೆ.

ಇನ್ನು ನಮ್ಮ ರಾಜ್ಯದಲ್ಲಿ ಕೊಳವೆ ಬಾವಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ನೀರಾವರಿ ಪ್ರಮಾಣ ಇನ್ನೂ ಹೆಚ್ಚು ಆಗಬೇಕು. ಭೂಮಿಯಲ್ಲಿರತಕ್ಕ ಜಲವನ್ನು ಕಂಡುಕೊಂಡು ಕೊಳವೆ ಬಾವಿಗಳ ಮೂಲಕ ನೀರಾವರಿ ಸೌಕರ್ಯವನ್ನು ರೈತರಿಗೆ ಒದಗಿಸಿಕೊಡುತ್ತಿದ್ದೇವೆ. ಈ ರೀತಿಯ ನೀರಾವರಿ ಹೆಚ್ಚಾದಂತೆ ಭೂಮಿಯಲ್ಲಿರುವಂತಹ ನೀರಿನ ಪಾತಳಿ ಕಡಿಮೆಯಾಗುತ್ತಾ ಹೋಗುತ್ತದೆ. ಹೆಚ್ಚಿನ ರೀತಿಯಲ್ಲಿ ಕೆರೆಕಟ್ಟೆಗಳನ್ನು ಕಟ್ಟಬೇಕು. ಈಗ ಕೆರೆಕಟ್ಟೆಗಳು ಏನು ಇವೆ, ಅವುಗಳಲ್ಲಿ ಇರುವಂತಹ ಹೂಳನ್ನು ತೆಗೆಸಬೇಕಾಗಿದೆ. ಈ ರೀತಿ ಹೂಳು ತೆಗೆಸಿದರೆ ಮಳೆ ಬಂದಾಗ ಹೆಚ್ಚು ನೀರು ಸಂಗ್ರಹವಾಗುತ್ತದೆ. ಸಂಗ್ರಹವಾದಂತಹ ನೀರು ಭೂಮಿಯಲ್ಲಿ ಸರ್ಕ್ಯುಲೇಷನಾಗುತ್ತದೆ. ಇದರಿಂದ ಕೊಳವೆ ಬಾವಿಗಳ ಮೂಲಕ ನೀರಾವರಿಯನ್ನು ಏನು ಮಾಡಲಾಗಿದೆ. ಅದಕ್ಕೆ ಸಹಾಯಕವಾಗುತ್ತದೆ ಮುಂಗಾರಿ ಮಳೆಯಾಗದೆ, ಹಿಂಗಾರಿ ಮಳೆ ಆಗುವುದರಿಂದ ನೀರು ವಿನಾಕಾರಣ ಹಳ್ಳ ನದಿಗಳಲ್ಲಿ ಹರಿದು ಹೋಗುತ್ತದೆ. ಆ ನೀರನ್ನು ತಡೆಗಟ್ಟುವುದಕ್ಕೆ ಬಾಂದಾರ್‌ಗಳನ್ನು ಹಾಕಬೇಕು. ಬಾಂದಾರ್‌ಗಳನ್ನು ಹಾಕುವುದರಿಂದ ನೀರನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಅದರೆ ಸುತ್ತ ಮುತ್ತ ಇರತಕ್ಕ ನೀರಾವರಿ ಬಾವಿಗಳಿಗೆ ಸಹಾಯಕವಾಗುತ್ತದೆ. ತಡೆಹಿಡಿದಂತಹ ನೀರು ಭೂಮಿಯಲ್ಲಿ ಸಂಗ್ರಹವಾಗಿ ಸರ್ಕ್ಯುಲೇಷನಾಗುತ್ತದೆ. ದೊಡ್ಡ ದೊಡ್ಡ ಯೋಜನೆಗಳಾದ ಶರಾವತಿ, ಕೃಷ್ಣಾ ತುಂಗಭದ್ರ, ಯೋಜನೆಗಳಲ್ಲಿ

ರೇವು ಮಣ್ಣು ಹರಿದು ಹೋಗಿ ಅಣೆಕಟ್ಟು ಸಿಲ್ಟಿಂಗ್ ಆಗುತ್ತದೆ. ಆದ್ದರಿಂದ ಅಲ್ಲಲ್ಲಿ ಬಾಂದಾರ್‌ಗಳನ್ನು ಹಾಕುವುದರಿಂದ ರೇವು ಮಣ್ಣನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ತಡೆಹಿಡಿದಂತಹ ರೇವು ಮಣ್ಣನ್ನು ಬೇಸಿಗೆಯಲ್ಲಿ ತೆಗೆದು ಸ್ವಚ್ಛ ಮಾಡುವುದಕ್ಕೆ ಸಹಾಯವಾಗುತ್ತದೆ ದೊಡ್ಡ ದೊಡ್ಡ ಡ್ಯಾಮ್‌ಗಳಲ್ಲಿ ನೀರು ಹೆಚ್ಚು ಸಂಗ್ರಹವಾಗಲಿಕ್ಕೆ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಹೆಚ್ಚಿನ ಗಮನ ಹರಿಸಬೇಕು. ನಮ್ಮ ಕರ್ನಾಟಕ ರಾಜ್ಯ ಇಡೀ ರಾಷ್ಟ್ರದಲ್ಲೇ ಹೆಚ್ಚು ಸಂಪದ್ಭರಿತವಾದಂತಹ ರಾಜ್ಯ. ಯಾವುದೇ ಒಂದು ಭೂಮಿಯ ಗುಣಮಟ್ಟವಾಗಲಿ, ಇಲ್ಲಿರುವಂತಹ ನೈಸರ್ಗಿಕ ಸಂಪನ್ಮೂಲವಾಗಲಿ, ಅರಣ್ಯವಾಗಲಿ, ಹವಾಗುಣವೇ ಆಗಲಿ ಇದ್ಯಾವುದಕ್ಕೂ ಕೊರತೆ ಇಲ್ಲ. ಅವುಗಳನ್ನು ಸದುಪಯೋಗಪಡಿಸಿಕೊಳ್ಳುವ ದೃಷ್ಟಿಯಿಂದ ಅನೇಕ ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ. ಅದರಲ್ಲಿ ಮುಖ್ಯವಾದುದು ತೋಟಗಾರಿಕೆ, ಈ ತೋಟಗಾರಿಕೆಯನ್ನು ಬೆಳೆಸಲಿಕ್ಕೆ ಬೇಕಾದ ವಾತಾವರಣ, ಫಲವತ್ತಾದ ಭೂಮಿ ಇದೆ. ಅನಾನಸ್ ಬೆಳೆಯುವುದಕ್ಕೆ, ದ್ರಾಕ್ಷಿ ಬೆಳೆಯುವುದಕ್ಕೆ ನಿಂಬೆ ಬೆಳೆಯುವುದಕ್ಕೆ ಅನುಕೂಲ ಇದೆ. ತೋಟಗಾರಿಕೆಯನ್ನು ಹೆಚ್ಚು ಮಾಡುವುದಕ್ಕೆ ಬೇಕಾದಂತಹ ಹವಾಗುಣ, ಭೂಮಿಯ ಗುಣಮಟ್ಟ ಇವೆಲ್ಲಾ ಇರುವುದರಿಂದ ಸರ್ಕಾರ ಈ ಕಡೆ ಹೆಚ್ಚಿನ ಆದತ್ಯೆಯನ್ನು ಕೊಡಬೇಕು. ಈ ದಿಸೆಯಲ್ಲಿ ಒಣ ಬೇಸಾಯದ ಕಡೆಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟು ರೈತರು ಆರ್ಥಿಕವಾಗಿ ಮುಂದೆ ಬಂದು, ರಾಜ್ಯದ ಅಭಿವೃದ್ಧಿ ಮುಂದುವರಿಯಲು ಸರ್ಕಾರ ಇನ್ನೂ ಹೆಚ್ಚಿನ ಕೆಲಸ ಮಾಡಬೇಕು. ಇವತ್ತು ರೇಶ್ಮೆ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ಮಾನ್ಯ ಮಂತ್ರಿಗಳಾದ ಶ್ರೀ ಮುನಿಯಪ್ಪನವರು ಇಲ್ಲಿ ಕುಳಿತಿದ್ದಾರೆ. ನಮ್ಮದು ಇಡೀ ದೇಶದಲ್ಲೇ ಹೆಚ್ಚಿನ ರೇಶ್ಮೆ ಉತ್ಪಾದನೆಯನ್ನು ಮಾಡತಕ್ಕಂಥ ರಾಜ್ಯ. ಇಡೀ ಜಗತ್ತಿನಲ್ಲಿ ರೇಶ್ಮೆ ಉತ್ಪಾದನೆಯಲ್ಲಿ ನಮ್ಮ ದೇಶ ಎರಡನೇ ಸ್ಥಾನದಲ್ಲಿದೆ. ಇಡೀ ರಾಷ್ಟ್ರದಲ್ಲಿ ನಮ್ಮ ರಾಜ್ಯ ಶೇಕಡ ೮೦ರಷ್ಟು ರೇಶ್ಮೆ ಉತ್ಪಾದನೆ ಮಾಡುತ್ತಿದೆ. ಇವತ್ತಿನ ದಿವಸ ನಮ್ಮ ರಾಜ್ಯ ಕೇಂದ್ರ ಸರ್ಕಾರವನ್ನು ರೇಶ್ಮೆಯನ್ನು ಹೊರಗಡೆಯಿಂದ ಆಮದು ಮಾಡಿಕೊಳ್ಳಬಾರದು ಎಂದು ಕೇಳುತ್ತಿದೆ. ಏಕೆಂದರೆ ನಮ್ಮ ರೈತರಿಗೆ ಹೆಚ್ಚು ಬೆಳೆಯುವುದಕ್ಕೆ ಅನುಕೂಲ ಆಗಬೇಕು, ಹೆಚ್ಚಿನ ಜನರು ರೇಶ್ಮೆ ಸಾಗಾಣಿಕೆ ಮುಂದೆ ಬರಬೇಕು, ಈ ಉದ್ದಿಮೆ ಅವರಿಗೆ ಲಾಭದಾಯಕವಾಗಬೇಕು ಎಂಬ ದೃಷ್ಟಿಯಿಂದ ಶ್ರೀ ಮುನಿಯಪ್ಪನವರು ಮತ್ತು ಮಾನ್ಯ ಮುಖ್ಯ ಮಂತ್ರಿಯವರು ಪ್ರಯತ್ನ ಮಾಡುತ್ತಿದ್ದಾರೆ. ರೇಶ್ಮೆ ವ್ಯವಸಾಯಕ್ಕೆ ಈ ನಮ್ಮ ರಾಜ್ಯ ಬಹಳ ಉತ್ತಮವಾದಂಥ ಪ್ರದೇಶ ಇಲ್ಲಿಯ ಹವಾಮಾನ ಉತ್ತಮ ಗುಣಮಟ್ಟದ ರೇಶ್ಮೆ ಉತ್ಪಾದನೆಗೆ ಸಹಾಯಕವಾಗಿದೆ. ಇದರ ಜೊತೆಗೆ, ನಮ್ಮದು ಹೈನುಗಾರಿಕೆಗೆ ಉತ್ತಮವಾದ ಪ್ರದೇಶ ಡ್ಯಾನಿಶ್ ದೇಶದಲ್ಲಿ ಏನು ಹೆಚ್ಚು ಹಾಲು ಉತ್ಪಾದನೆ ಮಾಡುತ್ತಾರೆ, ಆ ಪ್ರಕಾರ ಇಲ್ಲೂ ಕೂಡ ಹಾಲು ಉತ್ಪಾದನೆ ಮಾಡಲಿಕ್ಕೆ ಸಾಕಷ್ಟು ಅವಕಾಶ ಇದೆ, ದನಕರುಗಳ ಸಾಗಾಣಿಕೆ ಮಾಡಲಿಕ್ಕೆ ಅನುಕೂಲ ಇದೆ. ಈ ದಿಸೆಯಲ್ಲಿ ಸಹಿತ ಹೆಚ್ಚು ಹಾಲು ಉತ್ಪಾದನೆ ಮಾಡಲಿಕ್ಕೆ ಜನತೆಗೆ ಪಶುಸಂಗೋಪನಾ ಇಲಾಖೆ ಸಾಕಷ್ಟು ಸಹಾಯ ಮಾಡುತ್ತಿದೆ. ಈಗ ನಮ್ಮಲ್ಲಿರತಕ್ಕಂಥ ನೈಸರ್ಗಿಕ ಸಂಪನ್ಮೂಲಗಳಲ್ಲಿ ಮುಖ್ಯವಾಗಿ ಅರಣ್ಯ. ಇಲ್ಲಿಯವರೆಗೆ ಇದನ್ನು ಹೆಚ್ಚು ಬೆಳಸದೆ ಅದರ ಪ್ರಯೋಜನವನ್ನು ರಾಜ್ಯ ಪಡೆಯುತ್ತ ಬಂದಿತ್ತು. ಆದರೆ ಇವತ್ತಿನ ದಿವಸ ಹೆಚ್ಚಿನ ಅರಣ್ಯ ಸಂರಕ್ಷಣೆ ಮಾಡಬೇಕಾಗಿದೆ. ವರಮಾನದ ದೃಷ್ಟಿಯಿಂದ, ಪರಿಸರದ ದೃಷ್ಟಿಯಿಂದ, ಮಳೆಯ ದೃಷ್ಟಿಯಿಂದ ಹೆಚ್ಚು ಅರಣ್ಯವನ್ನು ಬೆಳೆಸಬೇಕಾಗಿದೆ, ಇಡೀ ದೇಶದಲ್ಲೇ ಅತಿ ಉತ್ತಮವಾದಂಥ ಸಾಗವಾನಿ ಕಟ್ಟಿಗೆ ಬೆಳೆಯಲಿಕ್ಕೆ ಉತ್ತಮವಾದ ಹವಾಮಾನ ನಮ್ಮಲ್ಲಿದೆ. ಈ ಎಲ್ಲ ದೃಷ್ಟಿಯಿಂದ ತೋಟಗಾರಿಕೆ ಬೆಳೆ ಬೆಳೆಯುವುದಕ್ಕೆ, ಹೈನುಗಾರಿಕೆಯನ್ನು ಉತ್ತಮವಾಗಿ ಮಾಡಲಿಕ್ಕೆ ಅರಣ್ಯವನ್ನು ಹೆಚ್ಚು ಬೆಳಿಸಲಿಕ್ಕೆ ಒಳ್ಳೆಯ ಅವಕಾಶ ನಮ್ಮಲ್ಲಿದೆ. ನಾವು ಇಡೀ ದೇಶದಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯುತ್ತೇವೆ ಮತ್ತು ಸಕ್ಕರೆ ಉತ್ಪಾದನೆ ಮಾಡುತ್ತೇವೆ. ಇಂತಹ ಒಂದು ಫಲವತ್ತಾದ ಜಮೀನು ಕರ್ನಾಟಕದಲ್ಲಿ ಇದೆ. ಅದೇ ಪ್ರಕಾರ ಹತ್ತಿ ಬೆಳೆಯಲಿಕ್ಕೆ ಉತ್ತಮವಾದ ಭೂಮಿ ಇಲ್ಲಿದೆ. ರೈತರಿಗೆ ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟರೆ ಹೆಚ್ಚಿನ ಕಬ್ಬು, ಹತ್ತಿ ಬೆಳೆಯಬಹುದು.

ಇದರ ಜೊತೆಗೆ ಕೊರತೆ ಇರುವುದು ಎಣ್ಣೆಕಾಳುಗಳಾದ ಶೇಂಗಾ. ಸನ್‌ಫ್ಲವರ್ ಬೀಜಗಳನ್ನು ಬೆಳೆಯಲಿಕ್ಕೆ. ಇಲ್ಲಿ ಭೂಮಿಯ ಗುಣ ಉತ್ತಮ ಇದೆ. ಈ ದಿಸೆಯಲ್ಲಿ ಹೆಚ್ಚು ಎಣ್ಣೆಕಾಳುಗಳನ್ನು ಬೆಳೆಯಲು ಸರ್ಕಾರ ಅನುಕೂಲ ಮಾಡಿಕೊಡಬೇಕಾಗಿದೆ. ರೈತರಿಗೆ ಹೆಚ್ಚಿನ ಸಾಲಸವಲತ್ತುಗಳನ್ನು ಒದಗಿಸಿಕೊಟ್ಟು ಹೆಚ್ಚಿನ ಎಣ್ಣೆಕಾಳುಗಳ ಉತ್ಪಾದನೆ ಈ ರಾಜ್ಯದಲ್ಲಿ ಮಾಡಲಿಕ್ಕೆ ಅವಕಾಶ ಇದೆ. ಇದರ ಜೊತೆಗೆ ಆಹಾರ ಧಾನ್ಯಗಳು ಅಂದರೆ ಗುಲ್ಬರ್ಗಾ, ಬೀದರ್ ಈ ಭಾಗದಲ್ಲಿ ಉತ್ತಮವಾದಂಥ

ತೊಗರಿಯನ್ನು ಇಡೀ ರಾಷ್ಟ್ರಕ್ಕೆ ಕೊಡಲಾಗುತ್ತಿದೆ. ಈ ದಿಸೆಯಲ್ಲಿ ಈ ರಾಜ್ಯದಲ್ಲಿ ತೊಗರಿ ಒಂದೇ ಅಲ್ಲ, ಹೆಸರು, ಕಡಲೆ, ಇಂತಹ ದ್ವಿದಳ ಧಾನ್ಯಗಳನ್ನು ಬೆಳೆಯಲಿಕ್ಕೆ ಉತ್ತಮ ಹವಾಮಾನ, ಹಾಗೂ ಭೂಮಿ ಇದೆ. ಆದ್ದರಿಂದ ಇವುಗಳ ಉತ್ಪಾದನೆಗೆ ಹೆಚ್ಚು ಅವಕಾಶ ಮಾಡಿಕೊಡಬೇಕು. ಇಷ್ಟೆಲ್ಲ ವಿಚಾರಗಳನ್ನು ನಾನು ಹೇಳುತ್ತಿರುವ ಉದ್ದೇಶ ಏನೆಂದರೆ, ನಮ್ಮ ರಾಜ್ಯದಲ್ಲಿರತಕ್ಕಂಥ ಸಂಪನ್ಮೂಲಗಳು ಏನು ಇವೆ, ಅವುಗಳನ್ನು ಉಪಯೋಗಿಸಿಕೊಂಡು ಗ್ರಾಮಾಂತರ ಪ್ರದೇಶದ ಜನತೆಯನ್ನು ಆರ್ಥಿಕವಾಗಿ ಮುಂದುವರೆಸಬೇಕಾದರೆ ಸರ್ಕಾರ ಈ ಎಲ್ಲ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕಾಗಿದೆ. ಜನತೆಗೆ ಹೆಚ್ಚಿನ ಉದ್ಯೋಗ ಒದಗಿಸುವ ದೃಷ್ಟಿಯಿಂದ ಈ ಕೆಲಸ ಮಾಡಬೇಕಾಗಿದೆ. ಹಾಗೆಯೇ ಶಿಕ್ಷಣದಲ್ಲಿ ಹೇಳಬೇಕೆಂದರೆ, ಇವತ್ತಿನ ದಿವಸ ಅನೇಕ ವಿಶ್ವವಿದ್ಯಾನಿಲಯಗಳ ಮೂಲಕ ಶಿಕ್ಷಣ ಕೊಡುತ್ತಿದ್ದೇವೆ ಈ ಶಿಕ್ಷಣಕ್ಕಿಂತಲೂ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ. ಆಮೇಲೆ ವೃತ್ತಿತರಬೇತಿಯನ್ನು ಕೊಟ್ಟು ಸ್ವಂತ ಉದ್ಯೋಗವನ್ನು ಸ್ಥಾಪಿಸಿಕೊಳ್ಳಲು ಸಹಾಯವಾಗುವಂತೆ ವೃತ್ತಿ ಶಿಕ್ಷಣವನ್ನು ಹೆಚ್ಚು ಪ್ರಾಮುಖ್ಯತೆ ಕೊಟ್ಟು ನೀಡಬೇಕಾಗಿದೆ. ಪಿ.ಯು.ಸಿ. ವರೆಗೆ ತಾಂತ್ರಿಕ ಜ್ಞಾನ ಕೊಡುವಂಥ ಅನೇಕ ಯೋಜನೆಗಳನ್ನು ತೆಗೆದುಕೊಂಡುಬಂದು ವೃತ್ತಿತರಬೇತಿಯನ್ನು ಕೊಟ್ಟು ನಮ್ಮ ಯುವಕರನ್ನು ಗ್ರಾಮಾಂತರ ಪ್ರದೇಶಗಳಲ್ಲೇ ಉಳಿಸಿಕೊಳ್ಳಬೇಕು, ಅವರು ಅನೇಕ ಉದ್ಯಮಗಳನ್ನು ಪ್ರಾರಂಭ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು ಹಾಗೆಯೇ ಶಹರಗಳಲ್ಲಿ ಬಂದು ಉದ್ಯಮಗಳನ್ನು ಮಾಡಿಕೊಳ್ಳಲು ಅನುಕೂಲ ಮಾಡಿಕೊಡಬೇಕಾಗಿದೆ.

ಇವತ್ತಿನದಿವಸ ಎಲ್ಲಾ ಇಂಡಸ್ಟ್ರೀಸ್‌ಗಳೂ ಬೆಂಗಳೂರು ನಗರದಲ್ಲಿಯೇ ಕೇಂದ್ರೀಕರಣ ಆಗುತ್ತಿವೆ. ಈ ರೀತಿ ಒಂದೇ ಕಡೆ ಕೇಂದ್ರೀಕರಣ ಆಗಬಾರದು. ಬೆಂಗಳೂರಿನಲ್ಲಿ ಎಲ್ಲಾ ಉದ್ದಿಮೆಗಳನ್ನೂ ತರುವುದರಿಂದ ಹವಾಮಾನ ಕಲುಷಿತವಾಗಿದೆ, ಜನರಿಗೆ ನೀರನ್ನು ಒದಗಿಸುವುದು ಕಷ್ಟವಾಗಿದೆ. ನಿವೇಶನಗಳನ್ನು ಒದಗಿಸುವುದು ಕಷ್ಟವಾಗುತ್ತಿದೆ, ಗ್ರಾಮೀಣ ಪ್ರದೇಶದ ಜನಗಳು ಪಟ್ಟಣಗಳಿಗೆ ಬರುವುದು ಹೆಚ್ಚಾಗುತ್ತಿದೆ. ಅಲ್ಲಿ ತನ್ನ ಕುಟುಂಬವನ್ನು ಸಂರಕ್ಷಣೆ ಮಾಡಲು ಆಗದೇ ಪಟ್ಟಣಗಳಿಗೆ ವಲಸೆ ಬರುವಂತಾದ್ದನ್ನು ಮೊಟ್ಟಮೊದಲು ತಡೆಹಿಡಿಯಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಖಾದಿ ಗ್ರಾಮೋದ್ಯೋಗ, ಇನ್ನಿತರ ಚಿಕ್ಕಪುಟ್ಟ ಕೃಷಿ ಉತ್ಪನ್ನಗಳು ಏನಿವೆ, ತೋಟಗಾರಿಕೆ ಉತ್ಪನ್ನಗಳು ಏನಿವೆ ಇವುಗಳನ್ನು ಸಂಸ್ಕರಣೆ ಮಾಡಿ, ಮಾರಾಟ ಮಾಡುವುದಕ್ಕೆ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತರಬೇಕಾಗಿದೆ. ತೋಟಗಾರಿಕೆ ಬೆಳೆಗೆ ಅನುಕೂಲ ಇರುವಾಗ ಈ ಬೆಳೆಗಳನ್ನು ಸಂಸ್ಕರಣೆ ಮಾಡಿ, ಮಾಡಿ. ವಿದೇಶಕ್ಕೆ ರಫ್ತು ಮಾಡುವ ಅವಕಾಶ ಇದೆ. ಅನಾನಸ್ ಹಣ್ಣನ್ನು ಬೇರೆ ದೇಶಕ್ಕೆ ಕಳುಹಿಸುವುದಕ್ಕೆ ನಮ್ಮ ಮಾನ್ಯ ವೈ. ಕೆ. ರಾಮಯ್ಯನವರು ವಿಚಾರ ಮಾಡುತ್ತಿದ್ದಾರೆ. ತೋಟಗಾರಿಕೆ ಇಲಾಖೆ ಉತ್ಪಾದನೆ ಮಾಡಿ, ಹೆಚ್ಚು ಹೆಚ್ಚು ಬೆಳೆಗಳನ್ನು ಸಂಸ್ಕರಣೆ ಮಾಡಿ ವಿದೇಶಗಳಿಗೆ ರಫ್ತು ಮಾಡುವುದಕ್ಕೆ ವಿಪುಲವಾದ ಅವಕಾಶ ಇದೆ. ಇನ್ನು ಮತ್ತೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ನಮ್ಮ ಸರ್ಕಾರ ಬಂದಮೇಲೆ ಪ್ರಾರಂಭ ಮಾಡಿತು. ಅನೇಕ ವರ್ಷಗಳಿಂದ ಇದಕ್ಕೆ ಬೇಡಿಕೆ ಇತ್ತು, ಇವತ್ತಿನದಿವಸ ಎಲ್ಲಾ ವಿಶ್ವವಿದ್ಯಾನಿಲಯಗಳಿಗಿಂತಲೂ ಕೃಷಿ ವಿಶ್ವವಿದ್ಯಾನಿಲಯ ಬಹಳ ಪ್ರಮುಖವಾದುದು. ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿರುವಂಥ ಜನತೆಯನ್ನು ಅಲ್ಲಿಯೇ ಉಳಿಸಬೇಕಾದರೆ, ಕೃಷಿ ಉದ್ದಿಮೆ ಲಾಭದಾಯಕವಾಗಿ ಆಗಬೇಕಾದರೆ, ಕೃಷಿ ವಿಶ್ವವಿದ್ಯಾನಿಲಯ ಬಹಳ ಮುಖ್ಯ. ಈ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದ ಮೇಲೆ ಇದಕ್ಕೆ ಹಣಕಾಸಿನ ವ್ಯವಸ್ಥೆ ಕುಂಠಿತವಾಗುತ್ತಿದೆ. ಹೆಚ್ಚಿನ ಹಣಕಾಸನ್ನು ನಮ್ಮ ಸರ್ಕಾರ ಒದಗಿಸಬೇಕಾಗಿದೆ. ಅನೇಕ ಸಂಶೋಧನೆಗಳನ್ನು ಕೃಷಿ ವಿಶ್ವವಿದ್ಯಾನಿಲಯ ಮಾಡಬೇಕಾಗಿದೆ ಒಣ ಬೇಸಾಯ, ನೀರಾವರಿ ಬೇಸಾಯ, ಹಣಕಾಸಿನ ಬೆಳೆಗಳು, ತೋಟಗಾರಿಕೆ ಬೆಳೆಗಳು, ದ್ವಿದಳಧಾನ್ಯದ ಬೆಳೆಗಳು ಮತ್ತು ತೋಟಗಾರಿಕೆ ಬೆಳೆಗಳು ಏನಿವೆ. ಇವುಗಳ ಬಗ್ಗೆ ಅನೇಕ ರೀತಿಯ ಸಂಶೋಧನೆ ಮಾಡಿ ಗ್ರಾಮೀಣ ಜನತೆಗೆ ಹೆಚ್ಚು ಉದ್ಯೋಗಗಳನ್ನು ಒದಗಿಸುವಂಥ ಹಾಗೂ ಅವರು ಗ್ರಾಮೀಣ ಪ್ರದೇಶದಲ್ಲಿಯೇ ಉಳಿಯುವುದಕ್ಕೆ ನಾವೆಲ್ಲಾ ಸಹಾಯ ಮಾಡಬೇಕಾಗಿದೆ. ಈ ದೃಷ್ಟಿಯಲ್ಲಿ ಹೆಚ್ಚಿನ ಆದ್ಯತೆಯನ್ನು ಕೃಷಿಗೆ ಪೂರಕವಾದ ಉದ್ದಿಮೆಗಳಿಗೆ ನಾವು ಅವಕಾಶ ಮಾಡಿಕೊಡಬೇಕಾಗಿದೆ. ಗ್ರಾಮೀಣ ಜನತೆಗೆ ಶಿಕ್ಷಣದ ಸಲುವಾಗಿ ವೃತ್ತಿ ತರಬೇತಿಯನ್ನು ಕೊಡಬೇಕಾಗಿದೆ. ಸರ್ಕಾರ ಈ ದಿಸೆಯಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ. ಸರ್ಕಾರಿ ರಂಗದಲ್ಲಿರುವಂಥ ಉದ್ದಿಮೆಗಳಲ್ಲಿ ಲಾಭ ಬರುವಂತೆ ಮಾಡಲು, ಅಲ್ಲಿರುವ ದೋಷಗಳನ್ನು ಕಂಡುಹಿಡಿದು, ಅವುಗಳನ್ನು ನಿವಾರಣೆ ಮಾಡ

ಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯ್ತಿಗಳು ಬಂದಮೇಲೆ ನಮ್ಮ ಶಹರದಲ್ಲಿ ಬರುವಂಥ ಕಾರ್ಪೊರೇಷನ್‌ಗಳಲ್ಲಿ ಎಂ.ಎಲ್.ಎ.ಗಳಿಗೆ ಕೆಲಸವೇ ಇಲ್ಲದಂತಾಗಿದೆ. ಯಾವುದೇ ಕೆಲಸವಾದರೂ ಕಾರ್ಪೊರೇಷನ್ ಮಾಡಬೇಕು. ನಾವು ಜಿಲ್ಲಾ ಪರಿಷತ್ ಸಭೆಗಳಿಗೂ ಹೋಗುವುದಕ್ಕೆ ಆಗುತ್ತಿಲ್ಲ. ಕಾರ್ಪೊರೇಷನ್‌ಗಳಲ್ಲಿ ಹಣಕಾಸಿನ ಅಡಚಣೆಯಿಂದ, ಮೂಲಭೂತ ಸೌಲಭ್ಯಗಳನ್ನೂ ಒದಗಿಸುವುದಕ್ಕೆ ಆಗುತ್ತಿಲ್ಲ. ಇನ್ನು ಧಾರವಾಡ ಜಿಲ್ಲೆ, ಭಾರತ ದೇಶದಲ್ಲಿಯೇ ಕರ್ನಾಟಕದ ಎರಡನೇ ನಗರವಾಗಿದೆ. ಧಾರವಾಡದಲ್ಲಿ ೧೮೫ನೇ ವರ್ಷದಲ್ಲಿ ಒಂದು ಸಿವಿಲ್ ಆಸ್ಪತ್ರೆ ಪ್ರಾರಂಭವಾಗಿ, ಈಗಲೂ ನಡೆಯುತ್ತಿದೆ. ಹುಬ್ಬಳ್ಳಿಯ ಕೆ. ಎಂ. ಸಿ. ಆಸ್ಪತ್ರೆಗಿಂತ ಹೆಚ್ಚು ಹೊರರೋಗಿಗಳು ಈ ಆಸ್ಪತ್ರೆಗೆ ಬರುತ್ತಾರೆ. ಇಲ್ಲಿಗೆ ಬರತಕ್ಕ ರೋಗಿಗಳನ್ನು ಅಡ್ಮಿಟ್ ಮಾಡಿಕೊಳ್ಳುವುದಕ್ಕೆ ಮಲಗುವುದಕ್ಕೆ ಹಾಸಿಗೆಗಳ ಸೌಲಭ್ಯ ಇಲ್ಲ. ಇಡೀ ಕರ್ನಾಟಕ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ೨೫೦ ಹಾಸಿಗೆಗಳ ಸೌಲಭ್ಯ ಇದೆ. ಆದರೆ ನಮ್ಮ ಧಾರವಾಡದ ಆಸ್ಪತ್ರೆಯಲ್ಲಿ ಮಾತ್ರ ೧೬೦ ಹಾಸಿಗೆಗಳ ಸೌಲಭ್ಯ ಇದೆ, ಇಲ್ಲಿ ಹೊರರೋಗಿಗಳ ಸೌಲಭ್ಯ ಕಲ್ಪಿಸಿಕೊಡುವುದು ತುಂಬಾ ಅವಶ್ಯವಿದೆ. ಶತಮಾನೋತ್ಸವವನ್ನು ಆಚರಿಸುವ ಈ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಹಣಕಾಸನ್ನು ಒದಗಿಸಬೇಕೆಂದು, ಹಣಕಾಸಿನ ಸಚಿವರೂ ಆದ ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಇನ್ನು ಇವತ್ತಿನದಿವಸ ಗ್ರಂಥಾಲಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ. ಈ ಗ್ರಂಥಾಲಯಗಳ ಅನುಕೂಲ ಗ್ರಾಮೀಣ ಪ್ರದೇಶದ ಜನರಿಗೆ ಮುಟ್ಟಬೇಕು. ಈ ದಿಸೆಯಲ್ಲಿ ಧಾರವಾಡದ ಆ ಗ್ರಂಥಾಲಯಕ್ಕೆ ಸರ್ಕಾರ ಒಂದು ಜಾಗವನ್ನು ಕೊಟ್ಟಿತು. ೧೫–೨೦ ವರ್ಷಗಳ ಹಿಂದೆಯೇ ಅದರ ಕಟ್ಟಡಕ್ಕೆ ಅಡಿಗಲ್ಲನ್ನು ಹಾಕಿದರೂ ಸಹಿತ ಇನ್ನೂವರೆಗೆ ಗ್ರಂಥಾಲಯದ ಕಟ್ಟಡ ಆಗಿಲ್ಲ. ಬೆಂಗಳೂರನ್ನು ಬಿಟ್ಟರೆ ಎರಡನೇ ಮಹಾನಗರವಾದ, ಜಿಲ್ಲಾಕೇಂದ್ರವಾದ ಧಾರವಾಡದಲ್ಲಿರುವ ಗ್ರಂಥಾಲಯಕ್ಕೆ ಕಟ್ಟಡ ಇಲ್ಲ. ೨೦ ವರ್ಷದ ಹಿಂದೆ ಜಾಗ ಕೊಟ್ಟರೂ ಇನ್ನೂ ಕಟ್ಟಡ ಆಗಿಲ್ಲ. ಆ ಕಟ್ಟಡಕ್ಕೆ ಹಣ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅದರ ಜೊತೆಗೆ ಜನತಾ ಸರ್ಕಾರ ಬಂದಮೇಲೆ ಇಡೀ ರಾಜ್ಯದಲ್ಲಿ ನಾಲ್ಕು ಮಾದರಿಯ ವಸತಿ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಿದರು ಅದರ ಪೈಕಿ ಧಾರವಾಡದಲ್ಲಿ ಸಹಿತ ಒಂದು ಮಾದರಿ ಪ್ರೌಢಶಾಲೆ ಇದೆ. ಅದು ಮೂರು ವರ್ಷಗಳ ಕಾಲ ನಡೆದು ಕಳೆದ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಗುಣ ಪಡೆದು ತೇರ್ಗಡೆಯಾಗಿದ್ದಾರೆ. ಆದರೆ ಅವರಿಗೆ ಸರಿಯಾದಂಥ ಒಂದು ಕಟ್ಟಡ ಇಲ್ಲ. ಅಲ್ಲಿ ಡಾರ್ಮೆಟರಿ ಸರಿಯಾಗಿಲ್ಲ. ಇವತ್ತಿನದಿವಸ ಗಾಂಧಿ ಆದರ್ಶಗಳನ್ನು ಇಟ್ಟುಕೊಂಡು ಮಾದರಿಯಾದಂಥ ಶಿಕ್ಷಣ ಕೊಡಬೇಕೆಂದು ಪ್ರಾರಂಭ ಮಾಡಿದಂಥ ಒಂದು ಶಾಲೆಗೆ ಸ್ವಂತ ಕಟ್ಟಡ ಇಲ್ಲದಿರುವಾಗ ಈ ದಿಸೆಯಲ್ಲಿ ಸಹಿತ ಸರ್ಕಾರ ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ.

ಅದರ ಜೊತೆಗೆ ಧಾರವಾಡದಲ್ಲಿ ಒಂದು ಮಾನಸಿಕ ಆಸ್ಪತ್ರೆ ಇದೆ. ಧಾರವಾಡದ ಹುಚ್ಚರ ಆಸ್ಪತ್ರೆ ಬಹಳ ಹೆಸರು ಪಡೆದಿದೆ. ಇಡೀ ರಾಜ್ಯದಲ್ಲಿ ಸರ್ಕಾರದ ಮೂಲಕ ನಡೆಯತಕ್ಕಂಥ ಒಂದೇ ಒಂದು ಹುಚ್ಚರ ಆಸ್ಪತ್ರೆ ಇದು. ರಾಜ್ಯ ಸರ್ಕಾರದಿಂದ ಹಣಕಾಸು ನೆರವು ಪಡೆದು ನಡೆಯುತ್ತಿರುವ ಒಂದೇ ಒಂದು ಆಸ್ಪತ್ರೆ ಇದು. ಇನ್ನೊಂದು ಬೆಂಗಳೂರಿನಲ್ಲಿರುವ ನಿಮ್‌ಹಾನ್ಸ್, ಇದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ನೆರವನ್ನು ಪಡೆದು ನಡೆಯುತ್ತಿದೆ. ಧಾರವಾಡದಲ್ಲಿರುವ ಈ ಮಾನಸಿಕ ಆಸ್ಪತ್ರೆಗೆ ೧೪೫ ವರ್ಷಕ್ಕಿಂತ ಹೆಚ್ಚು ಕಾಲ ಆಗಿದ್ದರೂ ಕೂಡಾ ಇವತ್ತೂ ಹಳೆಯ ಮಾದರಿಯ ಬ್ರಿಟಿಷ್ ಕಟ್ಟಡಗಳನ್ನು ಅಲ್ಲಿ ನೋಡಬಹುದು. ಆ ಆಸ್ಪತ್ರೆಯ ಕಟ್ಟಡಕ್ಕೆ ಸರ್ಕಾರ ಹೆಚ್ಚಿನ ಹಣಕಾಸನ್ನು ಒದಗಿಸಬೇಕು ಹಾಗೂ ಅಲ್ಲಿಗೆ ಹೆಚ್ಚು ಸಿಬ್ಬಂದಿಯನ್ನು ಕೊಡಬೇಕು ಹಾಗೂ ಸಾಕಷ್ಟು ಔಷಧ ಸಾಮಗ್ರಿಗಳನ್ನು ಪೂರೈಸಬೇಕೆಂದು ಹೇಳುತ್ತೇನೆ. ಉತ್ತರ ಕರ್ನಾಟಕದ ಜನತೆಗೆ ಸೇವೆಯನ್ನು ಮಾಡುವಂತಹ ದವಾಖಾನೆಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ನಿಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ,ನಮ್ಮ ಧಾರವಾಡದಲ್ಲಿ ಸೂಪರ್ ಮಾರ್ಕೆಟ್ ಇದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಅದನ್ನು ನೋಡಿರಬಹುದು ಸೂಪರ್ ಮಾರ್ಕೆಟ್ ಇಂತಕ್ಕಂಥ ಸುಭಾಷ್ ಬೀದಿಯಲ್ಲಿ ಹಾಯುವುದಕ್ಕೇ

ಸಾಧ್ಯವಿಲ್ಲ. ರಸ್ತೆಯ ಇಕ್ಕೆಲಗಳಲ್ಲಿಯೂ ಚಿಕ್ಕಪುಟ್ಟ ಅಂಗಡಿಗಳು ತುಂಬಿವೆ. ಜನಗಳೇ ನಡೆದಾಡುವುದು ಕಷ್ಟ, ಇನ್ನು ವಾಹನಗಳಂತೂ ಹೋಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಒಂದು ದೊಡ್ಡ ಸೂಪರ್ ಮಾರ್ಕೆಟ್ ಆಗಬೇಕಾಗಿದೆ. ಆ ಬೀದಿಯಲ್ಲಿರತಕ್ಕಂಥ ಚಿಕ್ಕಪುಟ್ಟ ವ್ಯಾಪಾರಸ್ಥರಿಗೆ ಪೋಲೀಸರು ಮೇಲಿಂದ ಮೇಲೆ ತೊಂದರೆಯನ್ನು ಕೊಡುತ್ತಿದ್ದಾರೆ. ಇದು ಹೋಗಬೇಕು. ಅವರಿಗೂ ಒಂದು ಉದ್ಯೋಗ ಬೇಕು, ಅವರೂ ದುಡಿದುಕೊಂಡು ತಿನ್ನಬೇಕು. ಅವರಿಗೂ ಅವಕಾಶ ಮಾಡಿಕೊಡಬೇಕಾದರೆ ಅಲ್ಲಿ ಒಂದು ಉತ್ತಮವಾದ ಸೂಪರ್ ಮಾರ್ಕೆಟ್ ಕಟ್ಟಿಕೊಡಬೇಕು ಹಾಗೂ ಅವರು ಉದ್ಯೋಗ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಧಾರವಾಡ ಬೆಳೆಯುತ್ತಿರುವ ದೊಡ್ಡ ನಗರವಾದ್ದರಿಂದ ಅನೇಕ ಕಡೆ ಚಿಕ್ಕಪುಟ್ಟ ಮಾರ್ಕೆಟ್‌ಗಳನ್ನು ತೆರೆಯುವುದಕ್ಕೆ ಅವಕಾಶ ಇದೆ. ಇದರ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇದು ನಗರದ ಮುಖ್ಯ ಬಸ್‌ಸ್ಟ್ಯಾಂಡ್ ಏನಿದೆ ಅದು ಚಿಕ್ಕದು. ಅದರ ಪಕ್ಕದಲ್ಲಿರುವಂತಹ ಪೋಲೀಸ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಬೇಕಾದಷ್ಟು ಜಾಗ ಇದೆ. ಬೇಕಾದಷ್ಟು ದೊಡ ಜಾಗ ಅಲ್ಲಿದೆ. ಆ ಜಾಗವನ್ನು ಪೋಲೀಸ್ ಇಲಾಖೆಯು ಮುಖಾಂತರ ಪಡೆದುಕೊಂಡು ಆ ಜಾಗದಲ್ಲಿ ಮುಖ್ಯ ಬಸ್‌ಸ್ಟ್ಯಾಂಡ್‌ನ್ನು ಪ್ರಾರಂಭ ಮಾಡಬೇಕು. ಮುಖ್ಯ ಬಸ್‌ಸ್ಟ್ಯಾಂಡ್ ಅಲ್ಲಿ ಬಂದರೆ ಜನರಿಗೆ ಅದು ಮಧ್ಯವರ್ತಿ ಸ್ಥಳವಾದುದರಿಂದ ಅನುಕೂಲವಾಗುತ್ತದೆ. ಬೇಕಾದಷ್ಟು ವಾಹನಗಳು ನಿಲ್ಲುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿ ಬಿಟ್ಟರೆ ಬೇರೆ ಎಲ್ಲೂ ಇಷ್ಟು ದೊಡ್ಡ ಜಾಗ ಇಲ್ಲ. ಅಲ್ಲಿ ಸ್ಥಳ ಪಡೆದರೆ ಪೋಲೀಸ್ ಇಲಾಖೆಗೆ ಬೇರೆ ಕಡೆ ಬೇಕಷ್ಟು ಜಾಗ ಒದಗಿಸಿಕೊಡಬೇಕು. ಈ ದಿಸೆಯಲ್ಲಿ ಬಸ್‌ಸ್ಟ್ಯಾಂಡ್ ಆಗಬೇಕೆಂದು ನಾನು ಸಂಬಂಧಿಸಿದ ಅಧಿಕಾರಿಗಳನ್ನು ಹಾಗೂ ಮಾನ್ಯ ಮುಖ್ಯಮಂತ್ರಿಗಳನ್ನೂ ಕೇಳಿಕೊಳ್ಳುತ್ತೇನೆ.

ಇನ್ನು ಕಾರ್ಪೊರೇಷನ್ ಸರಹದ್ದಿನಲ್ಲಿ ಅನೇಕ ಗ್ರಾಮಗಳು ಬರುತ್ತದೆ. ಅಲ್ಲಿ ಅನೇಕ ಚಿಕ್ಕಪುಟ್ಟ ಉದ್ಯಮಗಳನ್ನು ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬೇಕು. ಪಶುಸಂಗೋಪನೆ ಮಾಡುವುದಕ್ಕೆ, ಹಾಲಿನ ಸಹಕಾರ ಸಂಘಗಳನ್ನು ಸ್ಥಾಪಿಸುವುದಕ್ಕೆ ಅನುಕೂಲ ಮಾಡಿಕೊಡಬೇಕು.

ಅಧ್ಯಕ್ಷರು.—ಉಳಿದುದನ್ನೆಲ್ಲಾ ಡಿಮ್ಯಾಂಡ್ಸ್ ಟೈಮ್‌ನಲ್ಲಿ ಮಾತನಾಡುವಿರಿ. ಈಗ ಮುಕ್ತಾಯ ಮಾಡಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಇನ್ನು ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಎಲೆಕ್ಟ್ರಿಸಿಟಿ ಬೋರ್ಡ್‌ನವರಿಂದ ಅಡಚಣೆ ಇದೆ. ಏತಕ್ಕೆಂದರೆ ಅವರಿಗೆ ಹಗಲು ಕಾಲದಲ್ಲಿ ವಿದ್ಯುತ್ ಪೂರೈಸುವುದಿಲ್ಲ. ರಾತ್ರಿ ಮಾತ್ರ ಪೂರೈಸುತ್ತಾರೆ. ರಾತ್ರಿವೇಳೆ ಆಳುಗಳು ಕೆಲಸಕ್ಕೆ ಸಿಗುವುದಿಲ್ಲ. ಆದುದರಿಂದ ಕೂಲಿಕಾರರಿಗೆ ಅನುಕೂಲವಾಗುವ ದೃಷ್ಟಿಯಿಂದ ಅವರ ದುಡಿಮೆಗೆ ಅನುಕೂಲವಾಗುವ ದೃಷ್ಟಿಯಿಂದ ಹಗಲು ವೇಳೆಯಲ್ಲಿ ವಿದ್ಯುತ್ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

೩–೦೦ ಪಿ. ಎಂ.

ಇನ್ನು ಧಾರವಾಡ ಮಹಾ ನಗರಸಭೆಯಲ್ಲಿ ಕಳೆದ ವರ್ಷ ನಿವೇಶನಗಳನ್ನು ಹಂಚಿಕೆ ಮಾಡಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡರು, ಅಲ್ಲಿ ಜನರಿಗೆ ನಿವೇಶನಗಳನ್ನು ಕೊಡಬೇಕಾಗಿದೆ. ಅಲ್ಲಿ ಬಡವರಿದ್ದಾರೆ, ಹಿಂದುಳಿದ ವರ್ಗದವರಿದ್ದಾರೆ. ಕೃಷಿ ಮತ್ತು ಕೂಲಿ ಮಾಡಿಕೊಂಡಿರುವವರು ಇದ್ದಾರೆ. ಇಂತಹ ಜನರಿಗೆ ಹುಡ್ಕೋ ಯೋಜನೆ ಮುಖಾಂತರ ಮನೆ ಕಟ್ಟಿಸಿಕೊಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಆ ಕೆಲಸವನ್ನು ಸಹ ಮಾಡಬೇಕು, ಇನ್ನು ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಕೊಳಚೆ ನಿರ್ಮೂಲನಾ ಮಂಡಲಿ ಇದೆ. ಈ ಮಂಡಲಿ ಬಹಳ ಮಂದಗತಿಯಲ್ಲಿ ಕೆಲಸ ಮಾಡುತ್ತಿದೆ. ತೀವ್ರವಾಗಿ ಮಂಡಲಿಯವರು ಕೆಲಸ ಮಾಡಬೇಕಾಗಿದೆ. ನಗರ ಪ್ರದೇಶಗಳಲ್ಲಿ ಅನೇಕ ಕೊಳಚೇ ಪ್ರದೇಶಗಳು ಬರುತ್ತವೆ. ಈ ಕೊಳಚೇ ಪ್ರದೇಶಗಳನ್ನು ನಿರ್ಮೂಲನ ಮಾಡಲು ನಮ್ಮ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ನಮ್ಮ ಸರ್ಕಾರ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಬೇಕೆನ್ನುವ ಉದ್ದೇಶ ಹೊಂದಿದೆ ಆದರೆ ಹಣಕಾಸಿನ ಮುಗ್ಗಟ್ಟಿನಿಂದ ಈ ಕಾರ್ಯಕ್ರಮಗಳು ಯಶಸ್ವಿಯಾಗಿಲ್ಲ. ಕೇಂದ್ರ ಸರ್ಕಾರದಿಂದ ಬರುವಂತಹ

ಹೆಚ್ಚಿನ ಹಣ ರಾಜ್ಯ ಸರ್ಕಾರಕ್ಕೆ ಬಂದಿಲ್ಲ. ಹೆಚ್ಚು ಹಣ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರದಿಂದ ಬಂದರೆ ಆಗ ರಾಜ್ಯದ ಅಭಿವೃದ್ಧಿ ಕೆಲಸ ಕಾರ್ಯಗಳು ಆಗಿ ರಾಜ್ಯದ ಆದಾಯ ಸಹ ಜಾಸ್ತಿಯಾಗುತ್ತದೆ. ಇನ್ನು ಸೇಲ್ಸ್ ಟ್ಯಾಕ್ಸ್ ಬಗ್ಗೆ ನಾನು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಇವತ್ತು ನಮ್ಮ ರಾಜ್ಯದ ಸೇಲ್ಸ್ ಟ್ಯಾಕ್ಸ್ ವಸೂಲಿ ಏನು ಇದೆ ಇದನ್ನು ಈಗ ತಪ್ಪುವುದಕ್ಕೆ ಸಾಧ್ಯವಿದೆ. ಈಗ ನಮ್ಮ ರಾಜ್ಯದಲ್ಲಿ ಸುಮಾರು ೮೦೦ ಕೋಟಿ ರೂಪಾಯಿಗಳು ಸೇಲ್ಸ್ ಟ್ಯಾಕ್ಸ್ ಬರುತ್ತಿದ್ದಗೆ ಇದನ್ನು ೧೬೦೦ ಕೋಟಿ ರೂಪಾಯಿಗಳಷ್ಟು ಹೆಚ್ಚು ಮಾಡಬಹುದು, ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಕೊಟ್ಟಿದ್ದೇನೆ. ಅವರು ನನ್ನನ್ನು ಕಮಿಟಿಯ ಸದಸ್ಯನನ್ನಾಗಿ ಕೂಡ ನೇಮಿಸಿಕೊಂಡಿದ್ದಾರೆ. ಈ ದಿಸೆಯಲ್ಲಿ ಆರ್ಥಿಕಾಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯಾಗುತ್ತದೆ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಾಗುತ್ತದೆ. ನಮ್ಮ ಸರ್ಕಾರದವರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟಿದ್ದಾರೆ. ಆದಗೂ ಸಹ ನಮ್ಮ ಧಾರವಾಡ ಜಿಲ್ಲೆಯಲ್ಲಿ ಅನೇಕ ಪ್ರಾಥಮಿಕ ಶಾಲಾ ಕಟ್ಟಡಗಳು ಆಗಬೇಕು ಪ್ರೌಢ ಶಾಲಾ ಕಟ್ಟಡಗಳು ಆಗಬೇಕು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚು ಹಣಕಾಸನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡದಿದ್ದರೆ ಗ್ರಾಮಾಂತರ ಪ್ರದೇಶದ ಬಡ ಜನ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ನಮ್ಮ ಸರ್ಕಾರ ನಿರುದ್ಯೋಗದ ನಿರ್ಮೂಲನದ ಕಡೆ ಹೆಚ್ಚು ಗಮನ ಕೊಟ್ಟಿದೆ. ಅನೇಕ ಯೋಜನೆಗಳನ್ನು ಮಾಡಿದೆ. ಗ್ರಾಮಾಂತರ ಪ್ರದೇಶದ ಯುವಕರಿಗೆ ಅನುಕೂಲವಾಗುವಂತೆ ನಮ್ಮ ಸರ್ಕಾರ ಕೃಷಿ ಮತ್ತು ಚಿಕ್ಕ ಪುಟ್ಟ ಉದ್ಯೋಗಗಳನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದೆ. ಗ್ರಾಮಾಭಿವೃದ್ಧಿಯ ಸಲುವಾಗಿ ನಮ್ಮ ಸರ್ಕಾರ ಹೆಚ್ಚು ಹಣ ಖರ್ಚು ಮಾಡಿ ಇಡೀ ರಾಷ್ಟ್ರದಲ್ಲಿಯೇ ಮಾದರಿಯಾಗಿದೆ. ನಮ್ಮ ಸರ್ಕಾರ ಮಾಡಿದಂತಹ ಸೇವೆ ರಾಷ್ಟ್ರದಲ್ಲಿ ಮೆಚ್ಚಿಗೆಯನ್ನು ಗಳಿಸಿದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ). — ಮಾನ್ಯ ಅಧ್ಯಕ್ಷರೇ ೧೯೮೮–೮೯ನೇ ಸಾಲಿನ ಕಂತಿನ ಆಯವ್ಯಯ ಏನಿದೆ ಇದು ಜನತೆ ನಿರೀಕ್ಷಿಸಿದ ಮಟ್ಟದಲ್ಲಿ ಇಲ್ಲ. ಇದರ ಕೊರತೆ ಸುಮಾರು ೩೭೭.೮೮ ಕೋಟಿ ರೂಪಾಯಿಗಳು ಇದು ಕೊರತೆಯ ಬಡ್ಜೆಟ್ ಜೊತೆಗೆ ಕಂತಿನ ಆಯವ್ಯಯ ಪಟ್ಟಿ. ಇದು ಒಂದಕ್ಕೊಂದು ಸಮಂಜಸನೇ ಇಲ್ಲ. ಈ ಬಗ್ಗೆ ನಾವು ಪ್ರಶ್ನೆ ಹಾಕಿಕೊಳ್ಳಬೇಕು ಜನತೆಯ ದೃಷ್ಟಿಯಲ್ಲಿ ಇದು ಸರಿಯಲ್ಲ. ಆದರೆ ನೀವು ಇದೆಲ್ಲಾ ಸರಿ ಎಂದು ತಿಳಿದುಕೊಂಡಿದ್ದೀರಿ. ಕಂತಿನ ಆಯವ್ಯಯ ಪಟ್ಟಿ ಯಾವಾಗ ಬರುತ್ತದೆಂದರೆ ಯಾವುದಾದರೊಂದು ವರ್ಷ ಹೊಸದಾಗಿ ಸಾರ್ವತ್ರಿಕ ಚುನಾವಣೆಗಳು ನಡೆದು ಆಗ ಅವರಿಗೆ ಸರಿಯಾಗಿ ಬಡ್ಜೆಟ್ ಯೋಜನೆ ಮಾಡಿ ತಯಾರಿಸುವುದಕ್ಕೆ ಅವಕಾಶ ಇರುವುದಿಲ್ಲವೋ ಅಂತಹ ಸಮಯದಲ್ಲಿ ಕಂತಿನ ಬಡ್ಜೆಟ್. ತರುವುದಕ್ಕೆ ಅವಕಾಶ ಇದೆ. ಇದೇ ರೀತಿ ೧೯೮೬–೮೭ನೇ ಸಾಲಿನಲ್ಲಿ ಒಂದು ಸಾರಿ ಕಂತಿನ ಆಯವ್ಯಯ ತಂದಿರಿ. ಇವರು ಅಧಿಕಾರಕ್ಕೆ ಬಂದ ಮೇಲೆ ಈ ರೀತಿ ಎರಡು ಸಾರಿ ಬಜೆಟ್ ತಂದಿದ್ದಾರೆ. ಈಗ ಪುನಃ ೩ ತಿಂಗಳಿಗೋಸ್ಕರ ಓಟ್ ಆನ್ ಅಕೌಂಟ್‌ಗೆ ಬಜೆಟ್‌ನ್ನು ಮಂಡಿಸಿದ್ದಾರೆ. ಇದು ಸಮಂಜಸವಾದುದಲ್ಲವೆಂದು ನಾನು ಹೇಳುತ್ತೇನೆ. ಈ ಬಜೆಟ್‌ನಿಂದ ಜನಗಳಿಗೆ ಯಾವ ಪ್ರಯೋಜನ ಆಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಈಗ ೩ ಗಂಟೆಯಾಗಿದೆ, ಈಗಲೇ ನನ್ನ ಭಾಷಣವನ್ನು ಮುಂದುವರಿಸಲೇ ಅಥವಾ ಸೋಮವಾರಕ್ಕೆ ಮುಂದುವರಿಸಲೇ ?

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಬಸವಲಿಂಗಪ್ಪನವರು ಬಹಳ ಸ್ವಾರಸ್ಯವಾಗಿ ಮಾತನಾಡುವುದರಿಂದ ಅವರು ಸೋಮವಾರವೇ ಮಾತನಾಡುವುದು ಒಳ್ಳೆಯದು,

ಅಧ್ಯಕ್ಷರು.—ಅಪ್ರೋಪ್ರಿಯೇಷನ್ ಬಿಲ್ ಆಮೇಲೆ ತೆಗೆದುಕೊಳ್ಳೋಣವೆ ?

ಶ್ರೀ ಎ. ಲಕ್ಷ್ಮೀಸಾಗರ್.—ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಚರ್ಚೆ ಆಗಿದೆ. ಗೌರ್ನರ್ ಅವರಿಂದ ಒಪ್ಪಿಯಾಗಿ ಬಂದಿದೆ. ಇದನ್ನು ದಯವಿಟ್ಟು ತೆಗೆದುಕೊಳ್ಳಿ.

ಅಧ್ಯಕ್ಷರು.—ಹಾಗಾದರೆ ಇದನ್ನು ತೆಗೆದುಕೊಳ್ಳೋಣ.